ದೆಹಲಿ ಕರ್ನಾಟಕ ಸಂಘದ

ಅಭಿಮತ

ಸೆಪ್ಟೆಂಬರ್ 2026 | ಬೆಲೆ ರೂ.1



ಅನಂತ ಕಲಾಧ್ಯಾನಕ್ಕೆ ಒಲಿದ ಫಾಲ್ಕೆ ಸಮ್ಮಾನ



ಸನ್ಮಾನ್ಯ ಅಧ್ಯಕ್ಷರಾದ ಶ್ರೀ **ರೇಣುಕುಮಾರ್** ಅವರಿಗೆ ಆತ್ಮೀಯ ವಂದನೆಗಳು.

2025ನೇ ಸಾಲಿನ ಪ್ರತಿಷ್ಠಿತ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು 02.08.2026ರಂದು ನನಗೆ ಪ್ರದಾನ ಮಾಡಿ ಗೌರವಿಸಿದ ತಮ್ಮಲ್ಲಿ ಹಾಗೂ ದೆಹಲಿ ಕರ್ನಾಟಕ ಸಂಘದ ಸಮಸ್ತ ಪದಾಧಿಕಾರಿಗಳು, ಸದಸ್ಯರು ಮತ್ತು ಸಿಬ್ಬಂದಿಯವರಲ್ಲಿ ನನ್ನ ಹೃತ್ಪೂರ್ವಕ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ.

ತಾವು ಈ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಅತ್ಯಂತ ಆತ್ಮೀಯತೆ, ಅಚ್ಚುಕಟ್ಟು ಮತ್ತು ಅಭಿಮಾನದಿಂದ ಆಯೋಜಿಸಿದ ರೀತಿಯು ನನ್ನ ಮನಸ್ಸಿನಲ್ಲಿ ಎಂದೆಂದಿಗೂ ಅಚ್ಚಳಿಯದೆ ಉಳಿಯಲಿದೆ. ಡಾ. ಶಿವರಾಮ ಕಾರಂತರಂತಹ ಮಹಾನ್ ಸೃಜನಶೀಲ ವ್ಯಕ್ತಿತ್ವದ ಘನತೆಗೆ ತಕ್ಕ ರೀತಿಯಲ್ಲಿ ಈ ಸಮಾರಂಭವನ್ನು ಆಯೋಜಿಸಿರುವುದು ವಿಶೇಷವಾಗಿ ಶ್ಲಾಘನೀಯ.

ನನಗೆ ಈ ಅಪೂರ್ವ ಗೌರವವನ್ನು ನೀಡಿದ ದೆಹಲಿ ಕರ್ನಾಟಕ ಸಂಘಕ್ಕೆ, ಅಧ್ಯಕ್ಷರಾದ ತಮಗೆ ಹಾಗೂ ಮಾನ್ಯ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರಿಗೆ ಮತ್ತು ಸಂಘದ ಎಲ್ಲಾ ಸದಸ್ಯರಿಗೆ ನನ್ನ ಶತಶತ ನಮನಗಳು.

ಅದೇ ರೀತಿ, 13 ಆಗಸ್ಟ್ 2026ರಂದು ರಾಷ್ಟ್ರಪತಿ ಭವನದಲ್ಲಿ ನನಗೆ ಕೇಂದ್ರ ಸಂಗೀತ ನಾಟಕ ಅಕಾಡೆಮಿ ಪ್ರಶಸ್ತಿ ಪ್ರದಾನವಾದ ಸಂದರ್ಭದಲ್ಲಿ ಕರ್ನಾಟಕದ ಎಲ್ಲಾ ಪ್ರಶಸ್ತಿ ಪುರಸ್ಕೃತರನ್ನು ಸಂಘಕ್ಕೆ ಆಹ್ವಾನಿಸಿ ಸನ್ಮಾನಿಸಿ ಗೌರವಿಸಿದ ನಿಮ್ಮ ಕಾರ್ಯವೂ ಅತ್ಯಂತ ವಿಶೇಷವಾದದ್ದು. ಕರ್ನಾಟಕದ ಕಲಾವಿದರ ಸಾಧನೆಯನ್ನು ಗುರುತಿಸಿ, ಅವರನ್ನು ಒಂದೆಡೆ ಸೇರಿಸಿ ಸಂಭ್ರಮಿಸಿದ ದೆಹಲಿ ಕರ್ನಾಟಕ ಸಂಘದ ಈ ಅಪೂರ್ವ ಸ್ಪಂದನೆ ನಮ್ಮೆಲ್ಲರಿಗೂ ಅತ್ಯಂತ ಸಂತೋಷ ಮತ್ತು ಹೆಮ್ಮೆಯನ್ನು ತಂದಿದೆ.

ತಾವೆಲ್ಲರೂ ಸೇರಿ ದೆಹಲಿ ಕರ್ನಾಟಕ ಸಂಘವನ್ನು ಕೇವಲ ಒಂದು ಸಂಘಟನೆಯಾಗಿ ಉಳಿಸದೆ, ದೆಹಲಿಯಲ್ಲಿ ಕನ್ನಡದ ಅಸ್ಮಿತೆ, ಸಂಸ್ಕೃತಿ ಮತ್ತು ಕಲಾಪರಂಪರೆಯ ಪ್ರತಿಷ್ಠಿತ ನೆಲೆಯಾಗಿ ಬೆಳೆಸುತ್ತಿರುವುದು ನಿಜಕ್ಕೂ ಹೆಮ್ಮೆಯ ಸಂಗತಿ. ದೇಶದ ರಾಜಧಾನಿಗೆ ಬರುವ ಪ್ರತಿಯೊಬ್ಬ ಕನ್ನಡಿಗನಿಗೂ ದೆಹಲಿ ಕರ್ನಾಟಕ ಸಂಘವು ಒಂದು ಆಪ್ತ ತಾಣ, ಮತ್ತೊಂದು ಮನೆಯಂತಿರುವ ಆತ್ಮೀಯ ನೆಲೆಯಾಗಿದೆ.

ಸಂಘವನ್ನು ನಮ್ಮ ನಾಡಿನ ಸಂಸ್ಕೃತಿಯ ಪ್ರತೀಕವಾಗಿ ಇನ್ನಷ್ಟು ಎತ್ತರಕ್ಕೆ ಕೊಂಡೊಯ್ಯುವ ನಿಮ್ಮ ಪ್ರಯತ್ನಗಳು ಅಭಿನಂದನಾರ್ಹ. ಸಂಘದ ಸದಸ್ಯರನ್ನು ಸಹೋದರ–ಸಹೋದರಿಯರಂತೆ, ಸಿಬ್ಬಂದಿಯನ್ನು ಆತ್ಮೀಯ ಸ್ನೇಹಿತರಂತೆ ಒಗ್ಗೂಡಿಸಿ ಮುನ್ನಡೆಸುತ್ತಿರುವುದು ನಿಮ್ಮೆಲ್ಲರ ದೊಡ್ಡ ಸಾಧನೆಯಾಗಿದೆ.

ಇನ್ನೊಂದು ವಿಷಯವನ್ನು ತಮ್ಮೊಂದಿಗೆ ಹಂಚಿಕೊಳ್ಳಲು ಬಯಸುತ್ತೇನೆ. ತಾವು ನನಗೆ ಪ್ರಶಸ್ತಿಯೊಂದಿಗೆ ನೀಡಿದ ರೂ. 50,000/– ಪ್ರಶಸ್ತಿ ಮೊತ್ತಕ್ಕೆ ನನ್ನ ಹೃತ್ಪೂರ್ವಕ ಧನ್ಯವಾದಗಳು. ಈ ಮೊತ್ತವನ್ನು ವೈಯಕ್ತಿಕವಾಗಿ ಬಳಸಿಕೊಳ್ಳದೆ, ದೆಹಲಿಯಲ್ಲಿ ದೀನ ದಯಾಲ್ ಉಪಾಧ್ಯಾಯ ಮಾರ್ಗದಲ್ಲಿರುವ ಕಮಲಾದೇವಿ ಚಟ್ಟೋಪಾಧ್ಯಾಯರು ಸ್ಥಾಪಿಸಿರುವ ಶ್ರೀನಿವಾಸ ಮಲ್ಯ ಮೆಮೋರಿಯಲ್ ಥಿಯೇಟರ್ ಕ್ರಾಫ್ಟ್ಸ್ ಮ್ಯೂಸಿಯಂಗೆ ದೇಣಿಗೆಯಾಗಿ ನೀಡಿದ್ದೇನೆ.

ಕನ್ನಡ ನಾಡಿನವರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ನಮ್ಮ ದೇಶದ ಕಲೆ, ಕರಕುಶಲ ಮತ್ತು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಸಲ್ಲಿಸಿದ ಕೊಡುಗೆ ಅನನ್ಯವಾದದ್ದು. ಅವರು ಕೇವಲ ಕನ್ನಡಿಗರ ಹೆಮ್ಮೆಯಲ್ಲ; ದೇಶದ ಹಾಗೂ ವಿಶ್ವದ ಸಾಂಸ್ಕೃತಿಕ ಲೋಕದಲ್ಲಿ ಗೌರವದಿಂದ ಸ್ಮರಿಸಲ್ಪಡುವ ಮಹಾನ್ ವ್ಯಕ್ತಿತ್ವ. ಅವರು ಸ್ಥಾಪಿಸಿದ ಈ ಮ್ಯೂಸಿಯಂನಲ್ಲಿ ದೇಶದ ವಿವಿಧ ಸಾಂಪ್ರದಾಯಿಕ ಕಲಾ ಮತ್ತು ರಂಗಕಲಾ ಪ್ರಕಾರಗಳಿಗೆ ಸಂಬಂಧಿಸಿದ ಸಾವಿರಾರು ಅಪರೂಪದ ಕಲಾಕೃತಿಗಳು, ವೇಷಭೂಷಣಗಳು, ಆಭರಣಗಳು, ರಂಗಪರಿಕರಗಳು ಹಾಗೂ ಇತರ ಅಮೂಲ್ಯ ವಸ್ತುಗಳ ದೊಡ್ಡ ಸಂಗ್ರಹವಿದೆ. ಇಂತಹ ಅಪೂರ್ವ ಸಾಂಸ್ಕೃತಿಕ ಸಂಪತ್ತಿನ ಸಂರಕ್ಷಣೆ ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಆದರೆ ಮ್ಯೂಸಿಯಂ ಪ್ರಸ್ತುತ ಆರ್ಥಿಕ ಸವಾಲುಗಳನ್ನು ಎದುರಿಸುತ್ತಿರುವುದು ವಿಷಾದದ ಸಂಗತಿ.

ತಾವು ನನಗೆ ಪ್ರಶಸ್ತಿ ನೀಡಿದ ಸಂದರ್ಭದಲ್ಲಿ ನಾನು ಈ ಮ್ಯೂಸಿಯಂಗೆ ಭೇಟಿ ನೀಡಿದ್ದೆ. ಅಲ್ಲಿನ ಅಮೂಲ್ಯ ಸಂಗ್ರಹವನ್ನು ಕಂಡು, ನನಗೆ ದೊರೆತ ಪ್ರಶಸ್ತಿ ಮೊತ್ತವನ್ನು ಈ ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಸಮರ್ಪಿಸುವುದು ಹೆಚ್ಚು ಅರ್ಥಪೂರ್ಣವಾಗುತ್ತದೆ ಎಂಬ ಭಾವನೆ ನನ್ನಲ್ಲಿ ಮೂಡಿತು. ಅದಕ್ಕಾಗಿ ದೆಹಲಿ ಕರ್ನಾಟಕ ಸಂಘವು ನೀಡಿದ ಈ ಪ್ರಶಸ್ತಿ ಮೊತ್ತವನ್ನು ಮ್ಯೂಸಿಯಂಗೆ ನೀಡಲು ನಿರ್ಧರಿಸಿದೆ.

ಒಬ್ಬ ಕನ್ನಡ ಕಲಾವಿದನಾಗಿ, ಕನ್ನಡ ನೆಲದ ಹೆಮ್ಮೆಯ ಪುತ್ರಿ ಕಮಲಾದೇವಿ ಚಟ್ಟೋಪಾಧ್ಯಾಯರು ನಿರ್ಮಿಸಿದ ಈ ಅಮೂಲ್ಯ ರಂಗವಸ್ತು ಸಂಗ್ರಹಾಲಯದ ಸಂರಕ್ಷಣೆಗೆ ದೆಹಲಿ ಕರ್ನಾಟಕ ಸಂಘ ನೀಡಿದ ಈ ಮೊತ್ತ ಅಲ್ಲಿ ಕಿಂಚಿತ್ ಉಪಯೋಗವಾಗಲಿ ಎಂಬುದು ನನ್ನ ಹೃತ್ಪೂರ್ವಕ ಆಶಯ. ಈ ಗೌರವದ ಮೊತ್ತವನ್ನು ಇಂತಹ ಸಾಂಸ್ಕೃತಿಕ ಕಾರ್ಯಕ್ಕೆ ಸಮರ್ಪಿಸಲು ಸಾಧ್ಯವಾಗಿರುವುದು ನನಗೆ ವಿಶೇಷವಾದ ಸಂತೋಷವನ್ನು ನೀಡಿದೆ. ಆ ಅವಕಾಶವನ್ನು ಕಲ್ಪಿಸಿದ ದೆಹಲಿ ಕರ್ನಾಟಕ ಸಂಘಕ್ಕೂ, ಈ ಪ್ರತಿಷ್ಠಿತ ಪ್ರಶಸ್ತಿಗೂ ಮತ್ತೊಮ್ಮೆ ನನ್ನ ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆ. ಸಮಯಾವಕಾಶ ದೊರೆತಾಗ ತಾವು ಹಾಗೂ ಸಂಘದ ಪದಾಧಿಕಾರಿಗಳು ಈ ಮ್ಯೂಸಿಯಂಗೆ ಒಮ್ಮೆ ಭೇಟಿ ನೀಡಿ ಅಲ್ಲಿನ ಅಪೂರ್ವ ಸಂಗ್ರಹವನ್ನು ಸ್ವತಃ ವೀಕ್ಷಿಸಬೇಕೆಂದು ನನ್ನ ಕಳಕಳಿಯ ವಿನಂತಿ.

ಮತ್ತೊಮ್ಮೆ ತಮಗೆ ಹಾಗೂ ದೆಹಲಿ ಕರ್ನಾಟಕ ಸಂಘದ ಸಮಸ್ತ ಕುಟುಂಬಕ್ಕೆ ನನ್ನ ಅಭಿಮಾನದ ಅನಂತ ಕೃತಜ್ಞತೆಗಳು.❑

ಇಂತು ತಮ್ಮ ವಿಶ್ವಾಸಿ,

ಡಾ. ಕೆರೆಮನೆ ಶಿವಾನಂದ ಹೆಗಡೆ

"ಪ್ರಶಸ್ತಿ ಮೊತ್ತ ದಾನ–ಶ್ಲಾಘನೀಯ ನಡೆ"

ದೆಹಲಿ ಕರ್ನಾಟಕ ಸಂಘವು 2025ನೇ ಸಾಲಿನ ಡಾ. ಶಿವರಾಮ ಕಾರಂತ ಪ್ರಶಸ್ತಿಯನ್ನು ತಮಗೆ ಪ್ರದಾನಿಸಿ ಗೌರವಿಸಿದ ಸಂದರ್ಭದಲ್ಲಿ ನೀಡಲಾದ ರೂ. 50,000/– ಪ್ರಶಸ್ತಿ ಮೊತ್ತವನ್ನು ವೈಯಕ್ತಿಕವಾಗಿ ಬಳಸಿಕೊಳ್ಳದೆ, ಕನ್ನಡದ ಹೆಮ್ಮೆಯ ಪುತ್ರಿ ಹಾಗೂ ದೇಶದ ಅಪೂರ್ವ ಸಾಂಸ್ಕೃತಿಕ ವ್ಯಕ್ತಿತ್ವ ಕಮಲಾದೇವಿ ಚಟ್ಟೋಪಾಧ್ಯಾಯರು ಸ್ಥಾಪಿಸಿದ ಶ್ರೀನಿವಾಸ ಮಲ್ಯ ಮೆಮೋರಿಯಲ್ ಥಿಯೇಟರ್ ಕ್ರಾಫ್ಟ್ಸ್ ಮ್ಯೂಸಿಯಂಗೆ ಸಮರ್ಪಿಸಿರುವ ತಮ್ಮ ಉದಾತ್ತ ನಿರ್ಧಾರಕ್ಕೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹೃತ್ಪೂರ್ವಕ ಆಭಾರ ಮತ್ತು ಕೃತಜ್ಞತೆಗಳನ್ನು ಸಲ್ಲಿಸುತ್ತೇವೆ.

ತಮ್ಮ ಈ ನಿರ್ಧಾರ ನಮಗೆ ಕೇವಲ ಸಂತೋಷವನ್ನು ನೀಡಿಲ್ಲ; ನಮ್ಮ ಪ್ರಶಸ್ತಿಯ ಆಶಯಕ್ಕೂ ಹೊಸ ಅರ್ಥವನ್ನು ನೀಡಿದೆ. ಕಲೆಗಾಗಿ ತಮ್ಮ ಬದುಕನ್ನೇ ಸಮರ್ಪಿಸಿಕೊಂಡಿರುವ ಒಬ್ಬ ಹಿರಿಯ ಕಲಾವಿದ, ತಮ್ಮ ಕಲಾಸಾಧನೆಗೆ ಸಂದ ಗೌರವದ ಮೊತ್ತವನ್ನೇ ಮತ್ತೊಂದು ಸಾಂಸ್ಕೃತಿಕ ಪರಂಪರೆಯ ಸಂರಕ್ಷಣೆಗೆ ಅರ್ಪಿಸಿರುವುದು ನಿಜಕ್ಕೂ ಅಪೂರ್ವವಾದ ನಡೆ. ಇದರಿಂದ ಡಾ. ಶಿವರಾಮ ಕಾರಂತ ಪ್ರಶಸ್ತಿಯ ಗೌರವವೂ ಮತ್ತಷ್ಟು ಎತ್ತರಕ್ಕೇರಿದೆ ಎಂಬುದು ನಮ್ಮ ಹೆಮ್ಮೆಯ ಭಾವನೆ.

ಕಲೆ, ಕಲಾವಿದ ಮತ್ತು ಸಾಂಸ್ಕೃತಿಕ ಪರಂಪರೆಯ ನಡುವಿನ ಜೀವಂತ ಸಂಬಂಧವನ್ನು ತಮ್ಮ ಈ ನಡೆ ಮತ್ತೊಮ್ಮೆ ಎತ್ತಿ ತೋರಿಸಿದೆ. ಕಲೆಗಾಗಿ ಪಡೆದ ಗೌರವವನ್ನು ಮತ್ತೆ ಕಲೆ ಮತ್ತು ಸಂಸ್ಕೃತಿಯ ಉಳಿವಿಗೇ ಸಮರ್ಪಿಸಿರುವುದು ತಮ್ಮ ಕಲಾಬದ್ಧತೆ ಮತ್ತು ಸಾಂಸ್ಕೃತಿಕ ಹೊಣೆಗಾರಿಕೆಯ ಪ್ರತೀಕವಾಗಿದೆ.

ತಮ್ಮ ಈ ನಡೆ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಸದಸ್ಯರು ಹಾಗೂ ಸಮಸ್ತ ಕನ್ನಡಿಗರಿಗೆ ಪ್ರೇರಣಾದಾಯಕವಾಗಿದೆ. ತಾವು ಪ್ರಶಸ್ತಿ ಮೊತ್ತವನ್ನು ಸಮರ್ಪಿಸಿದ ಈ ಕ್ಷಣವನ್ನು ದೆಹಲಿ ಕರ್ನಾಟಕ ಸಂಘವು ಕೇವಲ ಕೃತಜ್ಞತೆಯಿಂದಲ್ಲ, ಹೆಮ್ಮೆಯಿಂದಲೂ ಸದಾ ಸ್ಮರಿಸಲಿದೆ.❑

ದೆಹಲಿ ಕರ್ನಾಟಕ ಸಂಘದ
ಅಭಿಮತ

ಪ್ರಧಾನ ಸಂಪಾದಕರು
ರೇಣುಕಾ ನಿಡಗುಂದಿ
ಸಂಪಾದಕ ಮಂಡಳಿ
ಚಂದ್ರಶೇಖರ ಎನ್.ಪಿ.
ಸಂತೋಷ್ ಕುಮಾರ್ ಉಪಾಧ್ಯಾಯ
ಪ್ರಕಾಶ್ ಶೆಟ್ಟಿ ಉಳೆಪಾಡಿ, ಹರಿಪ್ರಿಯ ಎಸ್.
ಪ್ರಸಾದ್ ನಾಯ್ಕ್, ನಟರಾಜ್ ಸಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ–2026–28

ಅಧ್ಯಕ್ಷರು
ರೇಣುಕುಮಾರ್ ಆರ್.
9868393953
ಉಪಾಧ್ಯಕ್ಷರು
ವಸಂತ ಶೆಟ್ಟಿ ಬೆಳ್ಳಾರೆ
9958697823
ಶೋಭಾ ಗೌಡ
8800588150
ಪ್ರಧಾನ ಕಾರ್ಯದರ್ಶಿ
ರಾಧಾಕೃಷ್ಣ
9818252183
ಖಜಾಂಚಿ
ಆಶಾಲತಾ ಎಂ.
9891249149
ಜಂಟಿ ಕಾರ್ಯದರ್ಶಿಗಳು
ಸಂತೋಷ ಜೆ.
9911235783
ಅಶ್ವಿನಿ ಬಿ.ಎಸ್.
9036235665
ಸಮಿತಿ ಸದಸ್ಯರು
ಪೂಜಾ ಪಿ. ರಾವ್
9810882498
ಶಿವಪ್ಪ ಎಂ.
9868159328
ಡಾ. ವೆಂಕಟಾಚಲ ಜಿ. ಹೆಗಡೆ
9312712476
ಡಾ. ಎಂ.ಎಸ್. ಶಶಿ ಕುಮಾರ್
9811689327
ನಾರಾಯಣ ಬಿ.
9868393978
ಕೃಷ್ಣಪ್ಪ ಎಂ.
9911156695
ಜಯಶ್ರೀ ಬಸವರಾಜು ಬಿ.ಕೆ.
9560760341
ಶುಭಾ ದೇವಿಪ್ರಸಾದ್
9319762969
ಆರ್. ಹರಿಕೃಷ್ಣ
9971518457
ರಾಜಕುಮಾರ್
9911150475

ಸಂಪಾದಕೀಯ...

ಮೊಟ್ಟ ಮೊದಲಿಗೆ ತುಳು ಭಾಷೆಗೆ ರಾಜ್ಯದ ಎರಡನೇ ಅಧಿಕೃತ ಭಾಷೆಯ ಮನ್ನಣೆ ನೀಡಿದ ರಾಜ್ಯ ಸರ್ಕಾರಕ್ಕೆ ಕೃತಜ್ಞತೆಗಳು. ವಿದ್ಯಾಧಿನಾಯಕ ಗಣಪನ ಹಬ್ಬವನ್ನು ಸಂಭ್ರಮದಿಂದ ಆಚರಿಸಲಾಯಿತು. 2026ನೇ ಸಾಲಿನಲ್ಲಿ ದೇಶಾದ್ಯಂತ ಒಟ್ಟು 48 ಸಾಧಕ ಶಿಕ್ಷಕರು ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಗೆ ಭಾಜನರಾದರು. ಈ ಪೈಕಿ ಕನ್ನಡ ಮಾಧ್ಯಮದ ಅತ್ಯುತ್ತಮ ಶಿಕ್ಷಕಿಯಾಗಿ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ಪಡೆದ ಶ್ರೀಮತಿ ರತ್ನಕುಮಾರಿ ಅವರನ್ನು ಅಭಿನಂದಿಸಲಾಯಿತು. ಇಂಗ್ಲಿಷ್ ಮಾಧ್ಯಮದ ಶಾಲೆಗಳ ಅಬ್ಬರದ ನಡುವೆಯೂ ಸರ್ಕಾರಿ ಕನ್ನಡ ಶಾಲೆಗಳನ್ನು ಮುನ್ನಡೆಸುವುದು ಎದುರಿಸುತ್ತಿರುವ ಸವಾಲುಗಳು ಹಾಗೂ ಕನ್ನಡ ಮಾಧ್ಯಮ ಶಿಕ್ಷಣದ ಕುರಿತ ಕಳವಳವನ್ನು ಅವರು ಹಂಚಿಕೊಂಡರು.

ನೀತಿ ಆಯೋಗ ಹಾಗೂ UDISE ವರದಿಗಳ ಪ್ರಕಾರ ಕಳೆದ ಹತ್ತು ವರ್ಷಗಳಲ್ಲಿ ದೇಶಾದ್ಯಂತ ಸುಮಾರು 94,000 ಸರ್ಕಾರಿ ಶಾಲೆಗಳು ಮುಚ್ಚಿಹೋಗಿವೆ ಅಥವಾ ವಿಲೀನಗೊಂಡಿವೆ. ಕರ್ನಾಟಕದಲ್ಲೂ ಸಹ ಕಳೆದ ಕೆಲವೇ ವರ್ಷಗಳಲ್ಲಿ ಸುಮಾರು 3,600ಕ್ಕೂ ಹೆಚ್ಚು ಶಾಲೆಗಳು ಮುಚ್ಚಲ್ಪಟ್ಟಿದ್ದು ಅತ್ಯಂತ ಆತಂಕಕಾರಿ ಸಂಗತಿ. ಅನೇಕ ಸರ್ಕಾರಿ ಶಾಲೆಗಳಲ್ಲಿ ಸುಸಜ್ಜಿತ ಕಟ್ಟಡಗಳು, ಶೌಚಾಲಯಗಳು, ಮತ್ತು ಆಟದ ಮೈದಾನಗಳ ಕೊರತೆಯಿದೆ. ಕರ್ನಾಟಕದ ಅರ್ಧದಷ್ಟು ಶಾಲೆಗಳ ಕಟ್ಟಡಗಳು ದುರಸ್ತಿ ಸ್ಥಿತಿಯಲ್ಲಿ ಇದ್ದುದನ್ನು 'ದಿ ಹಿಂದೂ' ಪ್ರಕಟಿಸಿತು. ಇದು ಚಿಂತಿಸಬೇಕಾದ ಸಂಗತಿ. ದೇಶಾದ್ಯಂತ ಸರಕಾರಿ ಶಾಲಾ ಮಕ್ಕಳು ಈ ಬಗ್ಗೆ ದನಿ ಎತ್ತಿ ಪ್ರತಿಭಟಿಸುತ್ತಿದ್ದುದನ್ನು ನೋಡುತ್ತಿದ್ದೇವೆ. ದೇಶದ ಎಲ್ಲಾ ಮಕ್ಕಳಿಗೂ ಉಚಿತ ಕಡ್ಡಾಯ ಶಿಕ್ಷಣ, ಮೂಲ ಸೌಕರ್ಯಗಳ ಸುಧಾರಣೆ, ಸುವ್ಯವಸ್ಥಿತ ಶಿಕ್ಷಣ ನಮ್ಮ ಆದ್ಯತೆಯಾಗಬೇಕು.

ಆಧುನಿಕ ಭಾರತೀಯ ಹಾಗೂ ಪಂಜಾಬಿ ಸಾಹಿತ್ಯ ಲೋಕ ಕಂಡ ಅತ್ಯಂತ ಪ್ರಭಾವಿ, ಕ್ರಾಂತಿಕಾರಿ ಕವಿಗಳಲ್ಲಿ ಒಬ್ಬರಾದ ಅವತಾರ್ ಸಿಂಗ್ ಸಂಧು 'ಪಾಶ್'–ಅವರ ಜನ್ಮದಿನ ಸೆಪ್ಟೆಂಬರ್ 9ರಂದು ಅವರ "ಎಲ್ಲಕ್ಕಿಂತ ಅಪಾಯಕಾರಿ" ಕವಿತೆ ಇಂದಿಗೂ ಪ್ರಸ್ತುತವೆನಿಸುತ್ತದೆ.

ಅತ್ಯಂತ ಅಪಾಯಕಾರಿ ಎಂದರೆ
ನಮ್ಮ ಕನಸುಗಳು ಸತ್ತುಹೋಗುವುದು.
ಅತ್ಯಂತ ಅಪಾಯಕಾರಿಯಾದುದು ಆ ಗಡಿಯಾರ,
ನಿಮ್ಮ ಮಣಿಕಟ್ಟಿನಲ್ಲಿ ಚಲಿಸುತ್ತಿದ್ದರೂ
ನಿಮ್ಮ ದೃಷ್ಟಿಯಲ್ಲಿ ನಿಂತುಹೋಗಿರುತ್ತದೆ!

ಶಿಕ್ಷಣದ ಬಗ್ಗೆ ಮೌನದ ಬಗ್ಗೆ ಮಾತಾಡುವಾಗ, ಕಲ್ಯಾಣ ಕರ್ನಾಟಕದ ವಿಮೋಚನಾ ದಿನದ (ಸೆಪ್ಟೆಂಬರ್ 17) ಬಗ್ಗೆ ಚರ್ಚಿಸುವಾಗ ಈ ಕವಿತೆ ನೆನಪಾಗುತ್ತದೆ. ನಿಜಾಮನ ಆಡಳಿತದಿಂದ ಬಿಡಿಸಿಕೊಳ್ಳಲು ಒಂದು ಪ್ರದೇಶದ ಜನರು ತಮ್ಮ ಭಾಷೆ, ನೆಲ, ಬದುಕು ಮತ್ತು ಸ್ವಾಭಿಮಾನಕ್ಕಾಗಿ ನಡೆಸಿದ ಐತಿಹಾಸಿಕ ಹೋರಾಟದ ನೆನಪು. ವಿಮೋಚನೆಯ ನಂತರವೂ ಜನರ ಕನಸುಗಳು ಬರಿದಾಗಬಾರದು, ಭರವಸೆಯ ಗಡಿಯಾರ ನಿರಂತರವಾಗಿ ಚಲಿಸುತ್ತಲೇ ಇರಬೇಕು ಎಂಬುದು ಇದರ ಆಶಯ.

ಒಂದು ಕಾಲಕ್ಕೆ ಶಿವಮೊಗ್ಗ ಜಿಲ್ಲೆಯ ರೈತರು ಗೇಣಿ ಪದ್ಧತಿಯನ್ನು ವಿರೋಧಿಸಿ ಡಾ. ರಾಮಮನೋಹರ ಲೋಹಿಯಾ, ಶಾಂತವೇರಿ ಗೋಪಾಲಗೌಡ ಹಾಗೂ ಎಚ್. ಗಣಪತಿಯಪ್ಪ ಅವರ ನೇತೃತ್ವದಲ್ಲಿ ಸಂಘಟಿಸಿದ ಐತಿಹಾಸಿಕ 'ಕಾಗೋಡು ಸತ್ಯಾಗ್ರಹ'ವು (1951) 2026ಕ್ಕೆ 75 ಸಂವತ್ಸರಗಳನ್ನು (ಅಮೃತ ಮಹೋತ್ಸವ) ಪೂರೈಸುತ್ತಿದೆ. ಈ ಎಲ್ಲಾ ಘಟನೆಗಳು ಕೇವಲ ಇತಿಹಾಸದ ಪುಟಗಳಲ್ಲಿ ಉಳಿಯುವ ಘಟನೆಗಳಲ್ಲ. ಸದಾ ಎಚ್ಚರದಲ್ಲಿರುವ ಘಟನೆಗಳು.

"ಎಲ್ಲಕ್ಕಿಂತ ಅಪಾಯಕಾರಿ"ಯ ಕೇಂದ್ರಭಾವವೇ ಮನುಷ್ಯನೊಳಗಿನ ಪ್ರಶ್ನಿಸುವ ಶಕ್ತಿ ಸತ್ತುಹೋಗುವುದು ಎಷ್ಟು ಅಪಾಯಕಾರಿ ಎಂಬ ಎಚ್ಚರಿಕೆ. ಅನ್ಯಾಯವನ್ನು ಕಂಡೂ ಪ್ರಶ್ನಿಸದಿರುವುದು, ಕನಸು ಕಾಣುವುದನ್ನೇ ನಿಲ್ಲಿಸುವುದು. ಶಿಕ್ಷಣ ವ್ಯವಸ್ಥೆಯೇ ಕುಸಿಯುತ್ತಿರುವಾಗ, ಬೆಲೆ ಏರಿಕೆ, ನಿರುದ್ಯೋಗ ತಾಂಡವವಾಡುತ್ತಿರುವಾಗ 'ಪಾಶ್' ನಮ್ಮ ಪಕ್ಕದಲ್ಲಿ ನಿಂತು ಇದೇ ಪ್ರಶ್ನೆಯನ್ನು ಕೇಳುವಂತೆ ಭಾಸವಾಗುತ್ತದೆ.

ಇಂದು ನಮ್ಮ ಕಾಲಕ್ಕೆ ಕವಿಗಳು ಮತ್ತು ವಿಚಾರವಂತರಿಗಿಂತ ಹೊಗಳುವವರೇ ಹೆಚ್ಚು ಪ್ರಸ್ತುತರಾಗಿದ್ದಾರೆ. ಸೆಪ್ಟೆಂಬರ್ 28ರಂದು ಭಗತ್ ಸಿಂಗ್ ಅವರ ಜನ್ಮದಿನ. ಭಗತ್ ಸಿಂಗ್ ಕೇವಲ ಬ್ರಿಟಿಷರ ವಿರುದ್ಧ ಹೋರಾಡಿದ ಕ್ರಾಂತಿಕಾರಿಯಷ್ಟೇ ಆಗಿರಲಿಲ್ಲ; ಸಾಮಾಜಿಕ ಅಸಮಾನತೆ, ಶೋಷಣೆ, ಧರ್ಮಾಂಧತೆ ಮತ್ತು ದೌರ್ಜನ್ಯದ ಕುರಿತು ಆಳವಾಗಿ ಆಲೋಚಿಸಿದ ವೈಚಾರಿಕ ಚಿಂತಕರಾಗಿದ್ದರು.

ಈ ನೆಲದ ಸತ್ಯಾಗ್ರಹ ಹಾಗೂ ಚಳವಳಿಗಳು ಅನ್ಯಾಯದ ವಿರುದ್ಧ ಧ್ವನಿಯೆತ್ತುವ ವೈಚಾರಿಕ ವೇದಿಕೆಗಳಾದರೆ, ಸಾಹಿತ್ಯ ಮತ್ತು ಸಿನಿಮಾಗಳು ಜನರ ಮನಸ್ಸಿನಲ್ಲಿ ಕಲ್ಪನೆ, ಸಂವೇದನೆ ಹಾಗೂ ಕನಸುಗಳನ್ನು ಜೀವಂತವಾಗಿಡುವ ಸಾಂಸ್ಕೃತಿಕ ಮಾಧ್ಯಮಗಳಾಗಿವೆ.

ಕನ್ನಡ ಚಿತ್ರರಂಗದಿಂದ ಪ್ರಥಮ ಬಾರಿಗೆ ವರನಟ ಡಾ. ರಾಜ್‌ಕುಮಾರ್ (1995) ಅವರು ಈ ಪ್ರಶಸ್ತಿಯನ್ನು ಪಡೆದು ಕನ್ನಡ ನಾಡಿಗೆ ಕೀರ್ತಿ ತಂದಿದ್ದರು. ನಂತರ 2008ರ ಸಾಲಿನ ಫಾಲ್ಕೆ ಪ್ರಶಸ್ತಿಯ ಇತಿಹಾಸದಲ್ಲೇ ಚಲನಚಿತ್ರ ಛಾಯಾಗ್ರಾಹಕರೊಬ್ಬರಿಗೆ ಈ ಅತ್ಯುನ್ನತ ಪುರಸ್ಕಾರ ಲಭಿಸಿದ್ದು ವಿ.ಕೆ. ಮೂರ್ತಿ ಅವರಿಗೆ ಮಾತ್ರ. ಇದೀಗ ಅನಂತ್‌ನಾಗ್ ಅವರಿಗೆ ಲಭಿಸಿದ 'ದಾದಾಸಾಹೇಬ್ ಫಾಲ್ಕೆ' ಚಲನಚಿತ್ರೋತ್ಸವ ಪ್ರಶಸ್ತಿ ಕನ್ನಡದ ಚಲನಚಿತ್ರ ರಂಗಕ್ಕೆ ಸಿಕ್ಕ ಮಹತ್ವದ ಸಾಂಸ್ಕೃತಿಕ ಮನ್ನಣೆಯಾಗಿದೆ.

ದೆಹಲಿ ಕರ್ನಾಟಕ ಸಂಘವು ಸಾಕಷ್ಟು ವೈವಿಧ್ಯಮಯ ಅತ್ಯುತ್ತಮ ಕಾರ್ಯಕ್ರಮಗಳೊಂದಿಗೆ ಹೊಸತನವನ್ನು ರೂಢಿಸಿಕೊಳ್ಳುತ್ತಿದೆ. ಕನ್ನಡ ಸಾಹಿತ್ಯ ಸಂಸ್ಕೃತಿಯ ಜೊತೆಗೆ ಪ್ರತಿವರ್ಷ ರಾಷ್ಟ್ರೀಯ ಮಟ್ಟದ 'ಬಹುಭಾಷಾ ಸಾಹಿತ್ಯ ಮತ್ತು ಸಂಸ್ಕೃತಿ ಹಬ್ಬ'ವೂ ಆಗುವಂತಾಗಬೇಕು. ಪಂಜಾಬಿ, ಹಿಂದಿ, ಮರಾಠಿ, ಬಂಗಾಲಿ ಮುಂತಾದ ಭಾರತೀಯ ಭಾಷೆಗಳ ಸಾಹಿತಿಗಳನ್ನು ಆಹ್ವಾನಿಸಿ ಬಹುಭಾಷಾ ಕಾವ್ಯ ಗೋಷ್ಠಿ ಹಾಗೂ ಚರ್ಚೆಗಳನ್ನು ನಡೆಸುವಂತಹ ಕಾರ್ಯಕ್ರಮಗಳೂ ನಡೆಯುವಂತಾಗಬೇಕು. ಡಾ. ಪುರುಷೋತ್ತಮ ಬಿಳಿಮಲೆ ಅವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾಗಿದ್ದಾಗ (ಹಾಗೂ ದೆಹಲಿ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದ ಕನ್ನಡ ಪೀಠದಲ್ಲಿದ್ದಾಗ) ಭಾರತೀಯ ಭಾಷೆಗಳ ನಡುವೆ ಕಟ್ಟಿದ ಸಾಂಸ್ಕೃತಿಕ ಸೇತುವೆಯನ್ನು ಭದ್ರಗೊಳಿಸುವ ಹಾಗೂ ವಿಸ್ತರಿಸುವ ಅಗತ್ಯ ಇಂದು ನಮ್ಮ ಮುಂದಿದೆ. ❑

ರೇಣುಕಾ ನಿಡಗುಂದಿ

ಕಾವಲು ಸಮಿತಿ | ಶ್ರೀ ಎನ್.ಎ. ಮಾಧವ | ಶ್ರೀ ಎಂ.ವಿ. ವೆಂಕಟೇಶ್ | ಶ್ರೀಮತಿ ರಾಧಾ ಕೌಜಲಗಿ

ನಾವು–ನೀವು

ಪ್ರಿಯ ದೆಹಲಿ ಕನ್ನಡಿಗರೇ,

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷನಾಗಿ ಜವಾಬ್ದಾರಿ ವಹಿಸಿಕೊಂಡ ನಂತರದ ಈ ಅವಧಿಯನ್ನು ಕೇವಲ ಒಂದು ಆಡಳಿತಾತ್ಮಕ ಜವಾಬ್ದಾರಿಯಾಗಿ ನೋಡಿಲ್ಲ. ಇದು ನನ್ನ ಪಾಲಿಗೆ ಕನ್ನಡಿಗರೊಂದಿಗೆ ಇನ್ನಷ್ಟು ಹತ್ತಿರವಾಗುವ, ಅವರ ನಿರೀಕ್ಷೆಗಳನ್ನು ಅರ್ಥಮಾಡಿಕೊಳ್ಳುವ ಮತ್ತು ನಮ್ಮ ಸಂಘವನ್ನು ಇನ್ನಷ್ಟು ಚಟುವಟಿಕೆಯ ಕೇಂದ್ರವನ್ನಾಗಿ ರೂಪಿಸುವ ಅವಕಾಶ. ದೆಹಲಿ ಕರ್ನಾಟಕ ಸಂಘವು ಕೇವಲ ಕಾರ್ಯಕ್ರಮ ನಡೆಯುವ ಸ್ಥಳವಾಗಿರದೆ, ಕನ್ನಡಿಗರು ತಮ್ಮ ಸಂತೋಷ, ನೋವು, ಪ್ರತಿಭೆ, ವಿಚಾರ ಮತ್ತು ಕನಸುಗಳನ್ನು ಹಂಚಿಕೊಳ್ಳುವ ಒಂದು ಜೀವಂತ ಮನೆಯಂತಿರಬೇಕು ಎಂಬುದು. ಆ ದಿಕ್ಕಿನಲ್ಲಿ ಸಂಘದ ಚಟುವಟಿಕೆಗಳು ಸಾಗುತ್ತಿರುವುದನ್ನು ಕಂಡು ನನಗೆ ಸಂತೋಷವಾಗಿದೆ.

ದೆಹಲಿಯ ವಿವಿಧ ಭಾಗಗಳಲ್ಲಿ ಕನ್ನಡಿಗರು ಗಣೇಶ ಚತುರ್ಥಿಯನ್ನು ಸಂಭ್ರಮದಿಂದ ಆಚರಿಸಿದರು. ನಮ್ಮ ಸಂಘದಲ್ಲಿಯೂ ಈ ಬಾರಿ ಮುಖ್ಯದ್ವಾರದ ವಿಶೇಷ ಅಲಂಕಾರ, ಭಜನೆ ವೇದಿಕೆ ಸೇರಿದಂತೆ ಅಚ್ಚುಕಟ್ಟಾದ ವ್ಯವಸ್ಥೆಯೊಂದಿಗೆ ಹಬ್ಬವನ್ನು ಆಚರಿಸಲಾಯಿತು. ದೆಹಲಿಯಲ್ಲಿ ಬದುಕುತ್ತಿದ್ದರೂ ನಮ್ಮ ಹಬ್ಬಗಳು ನಮ್ಮನ್ನು ನಮ್ಮ ನೆಲದೊಂದಿಗೆ ಬೆಸೆದಿರುತ್ತವೆ.

ಕನ್ನಡದ ಬಗ್ಗೆ ಮಾತನಾಡುವಾಗ ಕನ್ನಡ ಶಾಲೆಗಳನ್ನು ಮರೆಯಲು ಸಾಧ್ಯವಿಲ್ಲ. ಸರ್ಕಾರಿ ಶಾಲೆಯ ಶಿಕ್ಷಕಿ ಶ್ರೀಮತಿ ರತ್ನಕುಮಾರಿ ಎಸ್. ಅವರು ತಮ್ಮ ಸುದೀರ್ಘ ಸೇವೆಗಾಗಿ ರಾಷ್ಟ್ರಪ್ರಶಸ್ತಿಗೆ ಪಾತ್ರರಾಗಿರುವುದು ನನಗೆ ವಿಶೇಷವಾಗಿ ಹೆಮ್ಮೆಯ ಸಂಗತಿ. ಅವರನ್ನು ಸಂಘದಲ್ಲಿ ಗೌರವಿಸಿದ ಸಂದರ್ಭದಲ್ಲಿ ಅವರ ಅನುಭವಗಳನ್ನು ಕೇಳಿದಾಗ, ಕನ್ನಡದ ಉಳಿವಿನ ಹೋರಾಟವು ಕೇವಲ ಘೋಷಣೆಗಳಿಂದ ಸಾಧ್ಯವಿಲ್ಲ; ಅದಕ್ಕಾಗಿ ತಮ್ಮ ಬದುಕನ್ನೇ ಮುಡಿಪಾಗಿಡುವ ರತ್ನಕುಮಾರಿಯಂತಹವರು ಬೇಕು ಎಂಬುದು ಮತ್ತೊಮ್ಮೆ ಮನದಟ್ಟಾಯಿತು.

ಇದೇ ಹೆಮ್ಮೆಯನ್ನು ಮತ್ತೊಂದು ರೀತಿಯಲ್ಲಿ ಹೆಚ್ಚಿಸಿದ ಕ್ಷಣವೆಂದರೆ ಹಿರಿಯ ನಟ ಶ್ರೀ ಅನಂತನಾಗ್ ಅವರಿಗೆ ದೊರೆತ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ. ಅವರಿಗೆ ದೆಹಲಿಯ ಕನ್ನಡಿಗರ ಪರವಾಗಿ ಅಭಿನಂದನೆಗಳು. 'ಅಭಿಮತ'ದ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರು 'ರಾಷ್ಟ್ರದ ರಾಜಧಾನಿ ಕನ್ನಡ ಸಂಸ್ಕೃತಿ ಅಧ್ಯಯನ' ವಿಷಯದಲ್ಲಿ ಡಾಕ್ಟರೇಟ್ ಪಡೆದಿರುವುದು ನನಗೆ ವೈಯಕ್ತಿಕವಾಗಿ ಸಂತೋಷ ತಂದಿದೆ. ದೆಹಲಿ ಕನ್ನಡಿಗರ ಬದುಕು, ಸಂಸ್ಕೃತಿ ಮತ್ತು ಅಸ್ತಿತ್ವವನ್ನು ಅಧ್ಯಯನದ ಮೂಲಕ ದಾಖಲಿಸುವ ಕೆಲಸ ಬಹಳ ಮಹತ್ವದ್ದು. ಅವರ ಈ ಪ್ರಯತ್ನವನ್ನು ನಾನು ವಿಶೇಷವಾಗಿ ಅಭಿನಂದಿಸುತ್ತೇನೆ.

ನಮ್ಮ ಕರ್ನಾಟಕದ ಸೊಗಸು ಅದರ ವೈವಿಧ್ಯದಲ್ಲಿ. ಕೊಡವ ಸಂಸ್ಕೃತಿಯ ಕಲೆ, ಪರಂಪರೆ ಮತ್ತು ಜೀವನದರ್ಶನವನ್ನು ದೆಹಲಿಯ ಕನ್ನಡಿಗರ ಮುಂದೆ ಪರಿಚಯಿಸಿದ ಕಾರ್ಯಕ್ರಮ ಇದಕ್ಕೆ ಒಂದು ಉತ್ತಮ ಉದಾಹರಣೆ. ಅದೇ ರೀತಿ ಕಲ್ಯಾಣ ಕರ್ನಾಟಕದ ಧ್ವಜಾರೋಹಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮವೂ ನಮ್ಮ ನಾಡಿನ ವಿವಿಧ ಪ್ರದೇಶಗಳೊಂದಿಗೆ ಇರುವ ನಮ್ಮ ಭಾವನಾತ್ಮಕ ಸಂಬಂಧವನ್ನು ಮತ್ತಷ್ಟು ಗಟ್ಟಿಗೊಳಿಸಿತು.

ಮುಂದಿನ ದಿನಗಳಲ್ಲಿಯೂ ನಾಟಕ, ಯಕ್ಷಗಾನ, ಸಾಹಿತ್ಯಿಕ ಚರ್ಚೆಗಳು, ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವ ಸೇರಿದಂತೆ ಹಲವು ಕಾರ್ಯಕ್ರಮಗಳು ನಮ್ಮ ಮುಂದೆ ಇವೆ. ನಮ್ಮ ವೇದಿಕೆಯಲ್ಲಿ ಕನ್ನಡದ ಪ್ರತಿಯೊಂದು ಧ್ವನಿಗೂ ಜಾಗ ಇರಬೇಕು ಎಂಬುದು ನನ್ನ ಆಶಯ. ಹಿರಿಯರ ಅನುಭವ, ಯುವಕರ ಉತ್ಸಾಹ ಮತ್ತು ಮಕ್ಕಳ ಪ್ರತಿಭೆ ಇವೆಲ್ಲವೂ ಒಂದಾಗಿ ಸೇರಿದಾಗಲೇ ಸಂಘ ನಿಜವಾದ ಅರ್ಥದಲ್ಲಿ ಬೆಳೆಯುತ್ತದೆ.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಶ್ರೀ ಪ್ರಶಾಂತ್ ಕುಮಾರ್ ಅವರಿಗೆ ದೊರೆತಿರುವ ಮಿಲೇನಿಯಂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯೂ ನಮ್ಮೆಲ್ಲರಿಗೂ ಹೆಮ್ಮೆಯ ಸಂಗತಿ. ಶಿಕ್ಷಣ ಕ್ಷೇತ್ರದಲ್ಲಿ ಅವರು ಸಲ್ಲಿಸುತ್ತಿರುವ ಸೇವೆಗೆ ದೆಹಲಿ ಕನ್ನಡಿಗರ ಅಭಿನಂದನೆಗಳು. ಈ ಎಲ್ಲ ಸಾಧನೆಗಳನ್ನು ನೋಡಿದಾಗ ಒಂದು ವಿಷಯ ಸ್ಪಷ್ಟವಾಗುತ್ತದೆ–ದೆಹಲಿ ಕನ್ನಡಿಗರ ಸಾಮರ್ಥ್ಯಕ್ಕೆ ಮಿತಿ ಇಲ್ಲ. ಅವಕಾಶ ಸಿಕ್ಕಾಗ ಅವರು ತಮ್ಮ ಪ್ರತಿಭೆಯನ್ನು ಸಾಬೀತುಪಡಿಸುತ್ತಾರೆ.

ಆದ್ದರಿಂದ ಅಧ್ಯಕ್ಷನಾಗಿ ನನ್ನ ಪ್ರಯತ್ನ ಸಂಘದ ಬಾಗಿಲುಗಳನ್ನು ಇನ್ನಷ್ಟು ತೆರೆದಿಡುವುದು. ಹೊಸ ಆಲೋಚನೆಗಳಿಗೆ, ಯುವಕರಿಗೆ, ಮಹಿಳೆಯರಿಗೆ, ಮಕ್ಕಳಿಗೆ, ಕಲಾವಿದರಿಗೆ, ಸಾಹಿತಿಗಳಿಗೆ ಮತ್ತು ಸಮಾಜದ ವಿವಿಧ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತಿರುವ ಕನ್ನಡಿಗರಿಗೆ ನಮ್ಮ ವೇದಿಕೆ ಇನ್ನಷ್ಟು ಮುಕ್ತವಾಗಬೇಕು. ನಮ್ಮ ಸಂಘದ ಮುಂದಿನ ಪಯಣ ಇನ್ನಷ್ಟು ವಿಶಾಲವಾಗಲಿ. ನಮ್ಮ ಚಟುವಟಿಕೆಗಳು ಇನ್ನಷ್ಟು ಅರ್ಥಪೂರ್ಣವಾಗಲಿ. ಮುಖ್ಯವಾಗಿ, ನಮ್ಮ ಮಕ್ಕಳಿಗೆ 'ಕನ್ನಡ ನಮ್ಮದು' ಎಂಬ ಹೆಮ್ಮೆ ಮೂಡುವಂತಹ ವಾತಾವರಣವನ್ನು ನಾವು ನಿರ್ಮಿಸೋಣ...

ನಮ್ಮೊಂದಿಗೆ ನಡೆದು, ನಮ್ಮ ಸಂಘವನ್ನು ಇನ್ನಷ್ಟು ಬಲಪಡಿಸುತ್ತಿರುವ ಪ್ರತಿಯೊಬ್ಬ ಕನ್ನಡಿಗನಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು. ಕನ್ನಡದ ಪಯಣ ಮುಂದುವರಿಯಲಿ. ದೆಹಲಿ ನೆಲದಲ್ಲಿ ಕನ್ನಡದ ಕಂಪು ಮತ್ತಷ್ಟು ಹರಡಲಿ.

ವಂದನೆಗಳೊಂದಿಗೆ..❑

ರೇಣುಕುಮಾರ್ ಆರ್.

ಅಧ್ಯಕ್ಷರು

ಮುನ್ನೋಟ

ಸಾಧನೆ-ಸಂಭ್ರಮ, ಸನ್ಮಾನ-ಕನ್ನಡಿಗರ ಹೆಮ್ಮೆಯ ಪರ್ವ

ರಾಜ್ಯ ಸರ್ಕಾರ ತುಳು ಭಾಷೆಯನ್ನು ಎರಡನೇ ಆಡಳಿತ ಭಾಷೆ ಎಂದು ಘೋಷಿಸಿರುವುದಕ್ಕೆ ಹೃತ್ಪೂರ್ವಕ ಧನ್ಯವಾದಗಳು. ದೆಹಲಿ ಕರ್ನಾಟಕ ಸಂಘವು ಹಿಂದೆಂದಿಗಿಂತಲೂ ಈಗ ಸಕ್ರಿಯವಾಗಿದ್ದು, ಎಲ್ಲಾ ಕ್ಷೇತ್ರಗಳ ಚಟುವಟಿಕೆ ತಾಣವಾಗಿರುವುದು ಸಂತಸದ ವಿಷಯ. ಸೆಪ್ಟೆಂಬರ್ ತಿಂಗಳು ದೆಹಲಿಯ ಎಲ್ಲಾ ಭಾಗಗಳಲ್ಲೂ ಕನ್ನಡಿಗರು ವಿಜೃಂಭಣೆಯಿಂದ ಗಣೇಶ ಚತುರ್ಥಿಯನ್ನು ಆಚರಿಸಿದ್ದಾರೆ. ದೆಹಲಿ ಕರ್ನಾಟಕ ಸಂಘದಲ್ಲಿ ಈ ಬಾರಿ ಸಂಘದ ಮುಖ್ಯ ದ್ವಾರದಲ್ಲಿ ವಿಶೇಷ ಅಲಂಕಾರ ಮತ್ತು ಭಜನೆ ವೇದಿಕೆಯ ವ್ಯವಸ್ಥೆ ಮಾಡಲಾಗಿದ್ದು ತುಂಬಾ ಅಚ್ಚುಕಟ್ಟಾಗಿ ಆಚರಿಸಲಾಯಿತು. ಕನ್ನಡ ಶಾಲೆಗಳ ಉಳಿವು ಬರಿ ಹೋರಾಟದ ಘೋಷಣೆಗೆ ಸೀಮಿತವಲ್ಲ ಎಂದು ಸರ್ಕಾರಿ ಶಾಲೆಯ ಶಿಕ್ಷಕಿ ಶ್ರೀಮತಿ ರತ್ನಕುಮಾರಿ ಎಸ್. ಅವರು ತಮ್ಮ ಸುದೀರ್ಘ ಸೇವೆಯಿಂದ ರಾಷ್ಟ್ರಪ್ರಶಸ್ತಿಗೆ ಭಾಜನರಾಗಿ ದೆಹಲಿ ಕರ್ನಾಟಕ ಸಂಘದ ಗೌರವವನ್ನು ಸ್ವೀಕರಿಸಿ ಅನುಭವ ಹಂಚಿಕೊಂಡ ಸಂದರ್ಭದಲ್ಲಿ ನೆರೆದಿದ್ದವರಿಗೆಲ್ಲಾ ಪ್ರೇರಣೆಯಾಯಿತು. ಚಲನಚಿತ್ರ ಕ್ಷೇತ್ರದ ಅತ್ಯುನ್ನತ ಗೌರವವಾದ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ಈ ಬಾರಿ ಶ್ರೀ ಅನಂತನಾಗ್ ಅವರಿಗೆ ಲಭಿಸಿರುವುದು, ಕನ್ನಡ ಸಿನಿಮಾ ರಂಗದ ಬೆಳವಣಿಗೆ ಮತ್ತು ಸಾಧನೆಯ ವ್ಯಾಪ್ತಿ ನಮ್ಮ ಊಹೆಗೂ ಮೀರಿದಷ್ಟು ವಿಸ್ತರಿಸಿದೆ ಎಂಬುದಕ್ಕೆ ಸಾಕ್ಷಿಯಾಗಿದೆ.

ಇನ್ನು ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾದ ಶ್ರೀ ಚಂದ್ರಶೇಖರ ಎನ್.ಪಿ. ಅವರ 'ರಾಷ್ಟ್ರದ ರಾಜಧಾನಿ ಕನ್ನಡ ಸಂಸ್ಕೃತಿ ಅಧ್ಯಯನ' ಬಹುಶಃ ದೆಹಲಿ ಕನ್ನಡಿಗರ ವಿಷಯದ ಬಗ್ಗೆ ಅಧ್ಯಯನ ಮಾಡಿ ಡಾಕ್ಟರೇಟ್ ಪಡೆದವರು ಇವರೇ ಮೊದಲಿಗರು. ಇವರಿಗೆ ದೆಹಲಿ ಕನ್ನಡಿಗರೆಲ್ಲರ ಪರವಾಗಿ ನನ್ನ ವಿಶೇಷ ಅಭಿನಂದನೆಗಳು.

ನಮ್ಮ ಕರ್ನಾಟಕದ ವೈವಿಧ್ಯಮಯವಾದ ಸಂಸ್ಕೃತಿಯಲ್ಲಿ ಕೊಡವ ಸಂಸ್ಕೃತಿ ಬಹಳ ವಿಶೇಷ. ಅಂತಹ ಕೊಡವರ ಕಲೆ ಮತ್ತು ಸಂಸ್ಕೃತಿ ಕರ್ನಾಟಕ ಸಂಘದಲ್ಲಿ ವಿಶೇಷವಾಗಿ ಮತ್ತು ಶಿಸ್ತುಬದ್ಧವಾಗಿ ಮನಸೂರೆಗೊಂಡಿತು. ಕಲ್ಯಾಣ ಕರ್ನಾಟಕದ ಧ್ವಜಾರೋಹಣ ಮತ್ತು ಸಾಂಸ್ಕೃತಿಕ ಕಾರ್ಯಕ್ರಮ ಇನ್ನೊಂದು ವಿಶೇಷ. ಮುಂದಿನ ದಿನಗಳಲ್ಲಿ ಬಹಳಷ್ಟು ಕಾರ್ಯಕ್ರಮಗಳ ನಿರೀಕ್ಷೆ ನಿಮ್ಮನ್ನು ಮನರಂಜನಾ ಲೋಕಕ್ಕೆ ಕರೆದೊಯ್ಯಲಿದೆ. ನಾಟಕ ಪ್ರದರ್ಶನ, ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವ ಆಚರಣೆ, ಯಕ್ಷಗಾನ ಮತ್ತು ಸಾಹಿತ್ಯಿಕ ಚರ್ಚೆ ಹೀಗೆ ಹಲವಾರು ಕಾರ್ಯಕ್ರಮ ಅಕ್ಟೋಬರ್‌ನಲ್ಲಿ ಆಯೋಜನೆಗೊಂಡಿದ್ದು ಕರ್ನಾಟಕ ಸಂಘದಲ್ಲಿ ಕನ್ನಡದ ಕಹಳೆ ಮೊಳಗುತ್ತಿದೆ.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಪ್ರಾಂಶುಪಾಲರಾದ ಪ್ರಶಾಂತ್ ಕುಮಾರ್ ಅವರಿಗೆ ಲಭಿಸಿರುವ ಮಿಲೇನಿಯಂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ ನಮ್ಮೆಲ್ಲರ ಹೆಮ್ಮೆ. ಅವರಿಗೆ ದೆಹಲಿ ಕನ್ನಡಿಗರ ಪರವಾಗಿ ನನ್ನ ಹೃತ್ಪೂರ್ವಕ ಅಭಿನಂದನೆಗಳು.❑

ರಾಧಾಕೃಷ್ಣ

ಪ್ರಧಾನ ಕಾರ್ಯದರ್ಶಿ

ಕನ್ನಡದ ಅನಂತ ಪ್ರತಿಭೆಗೆ ಒಲಿದ ಫಾಲ್ಕೆ ಗೌರವ

ಅಂದು ಅಣ್ಣಾವ್ರು... ನಂತರ ವಿ.ಕೆ. ಮೂರ್ತಿ... ಈಗ ಅನಂತ್‌ನಾಗ್. ಕನ್ನಡ ಚಿತ್ರರಂಗದ ಪಾಲಿಗೆ ಸೆಪ್ಟೆಂಬರ್ 2026 ಒಂದು ಹೆಮ್ಮೆಯ ಅಧ್ಯಾಯವನ್ನು ದಾಖಲಿಸಿದೆ. ಐದು ದಶಕಗಳಿಗೂ ಹೆಚ್ಚು ಕಾಲ ಭಾರತೀಯ ಚಿತ್ರರಂಗದಲ್ಲಿ ನಟನೆಯ ವಿಭಿನ್ನ ಸಾಧ್ಯತೆಗಳನ್ನು ತೆರೆದಿಟ್ಟಿರುವ ಅನಂತ್‌ನಾಗ್ ಅವರಿಗೆ 2024ನೇ ಸಾಲಿನ ಪ್ರತಿಷ್ಠಿತ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಪ್ರದಾನವಾಗಿದೆ. ಸೆಪ್ಟೆಂಬರ್ 22ರಂದು ಗುಜರಾತ್‌ನ ಕೆವಾಡಿಯಾದಲ್ಲಿ ನಡೆದ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಪ್ರಶಸ್ತಿ ಪ್ರದಾನ ಮಾಡಿದರು.

ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಎನ್ನುವುದು ಕೇವಲ ಒಂದು ಪ್ರಶಸ್ತಿಯಲ್ಲ. ಭಾರತೀಯ ಚಿತ್ರರಂಗದ ಬೆಳವಣಿಗೆ ಮತ್ತು ಅಭಿವೃದ್ಧಿಗೆ ಅಪಾರ ಕೊಡುಗೆ ನೀಡಿದವರ ಜೀವಮಾನದ ಸಾಧನೆಯನ್ನು ಗುರುತಿಸುವ ದೇಶದ ಅತ್ಯುನ್ನತ ಚಲನಚಿತ್ರ ಗೌರವ. 1969ರಲ್ಲಿ ಸ್ಥಾಪನೆಯಾದ ಈ ಪ್ರಶಸ್ತಿ, ಚಿತ್ರರಂಗದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಛಾಪು ಮೂಡಿಸಿದ ಕಲಾವಿದರು ಮತ್ತು ತಂತ್ರಜ್ಞರನ್ನು ಗೌರವಿಸುತ್ತ ಬಂದಿದೆ.

ಅನಂತ್‌ನಾಗ್ ಅವರ ಫಾಲ್ಕೆ ಗೌರವವನ್ನು ಈ ಹಿನ್ನೆಲೆಯಲ್ಲಿಯೇ ನೋಡಬೇಕು. ರಂಗಭೂಮಿಯಿಂದ ಸಿನಿಮಾಕ್ಕೆ ಬಂದ ಅನಂತ್‌ನಾಗ್, ಕನ್ನಡ ಚಿತ್ರರಂಗದಲ್ಲಿ 'ನಾಯಕ' ಎಂಬ ಏಕಮಾದರಿಯ ಚೌಕಟ್ಟಿಗೆ ಸೀಮಿತವಾಗದೆ, ಸಾಮಾನ್ಯ ಮನುಷ್ಯನ ಅನೇಕ ಮುಖಗಳನ್ನು ತೆರೆಗೆ ತಂದ ನಟ. ಅವರ ಅಭಿನಯದಲ್ಲಿ ಅಬ್ಬರಕ್ಕಿಂತ ಸಹಜತೆ, ಸಂಭಾಷಣೆಗಿಂತ ಭಾವ, ನಾಯಕತ್ವಕ್ಕಿಂತ ಪಾತ್ರದ ಒಳಜಗತ್ತು ಮುಖ್ಯವಾಗುತ್ತ ಬಂದಿತು. 1973ರಲ್ಲಿ 'ಸಂಕಲ್ಪ' ಚಿತ್ರದ ಮೂಲಕ ಕನ್ನಡ ಚಿತ್ರರಂಗಕ್ಕೆ ಪ್ರವೇಶಿಸಿದ ಅವರು ನಂತರ ಹಿಂದಿಯ 'ಅಂಕುರ್' ಸೇರಿದಂತೆ ಹಲವು ಭಾರತೀಯ ಭಾಷೆಗಳ ಸಿನಿಮಾಗಳಲ್ಲೂ ನಟಿಸಿದರು. ಐದು ದಶಕಗಳಿಗೂ ಹೆಚ್ಚು ಕಾಲದ ಅವರ ಪಯಣದಲ್ಲಿ 300ಕ್ಕೂ ಅಧಿಕ ಚಿತ್ರಗಳು ದಾಖಲಾಗಿವೆ.

ಅನಂತ್‌ನಾಗ್ ಅವರನ್ನು ಕೇವಲ ಒಬ್ಬ ನಟನಾಗಿ ನೋಡುವುದು ಅವರ ಕಲಾಯಾನದ ವ್ಯಾಪ್ತಿಯನ್ನು ಕುಗ್ಗಿಸಿದಂತಾಗುತ್ತದೆ. ಅವರು ನಟಿಸಿದ ಪಾತ್ರಗಳಲ್ಲಿ ಕನ್ನಡ ಸಮಾಜದ ಮಧ್ಯಮವರ್ಗದ ಕನಸುಗಳು, ಸಂಕಟಗಳು, ಸಂಬಂಧಗಳ ಸೂಕ್ಷ್ಮತೆ, ರಾಜಕೀಯ–ಸಾಮಾಜಿಕ ತಲ್ಲಣಗಳು ಮತ್ತು ಮನುಷ್ಯನ ಅಂತರಂಗದ ಹಲವು ಪದರಗಳು ಕಾಣುತ್ತವೆ. ಅದಕ್ಕಾಗಿಯೇ ಅವರ ಅಭಿನಯವನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ರಂಗಭೂಮಿ ಮತ್ತು ಸಿನಿಮಾದ ಅತ್ಯುತ್ತಮ ಅಂಶಗಳ ಸಂಯೋಜನೆಯಾಗಿ, ಸಹಜ ಮತ್ತು ಸಂಯಮಿತ ಅಭಿನಯವೆಂದು ಉಲ್ಲೇಖಿಸಿದ್ದಾರೆ.

ಅನಂತ್‌ನಾಗ್ ಅವರ ಫಾಲ್ಕೆ ಗೌರವದ ಹಿಂದೆ ಕನ್ನಡ ಚಿತ್ರರಂಗದ ಮತ್ತೊಂದು ದೀರ್ಘ ಪರಂಪರೆಯೂ ಇದೆ. 1995ರಲ್ಲಿ ಡಾ. ರಾಜ್‌ಕುಮಾರ್ ಅವರಿಗೆ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ದೊರಕಿದಾಗ ಕನ್ನಡ ಚಿತ್ರರಂಗದ ಒಬ್ಬ ಮಹಾನ್ ಕಲಾವಿದನ ಸೇವೆಗೆ

ರಾಷ್ಟ್ರಮಟ್ಟದ ಮನ್ನಣೆ ದೊರೆತಿತ್ತು. ಕನ್ನಡದ ಜನಪ್ರಿಯ ಸಂಸ್ಕೃತಿಯಲ್ಲಿ ರಾಜ್‌ಕುಮಾರ್ ಕೇವಲ ನಟನಾಗಿರಲಿಲ್ಲ. ಅವರು ಕನ್ನಡಿಗರ ಸಾಂಸ್ಕೃತಿಕ ಬದುಕಿನ ಒಂದು ಭಾಗವಾಗಿದ್ದರು.

ಪೌರಾಣಿಕ ಪಾತ್ರಗಳಿಂದ ಸಾಮಾಜಿಕ ಪಾತ್ರಗಳವರೆಗೆ, ಭಕ್ತಿಪ್ರಧಾನ ಚಿತ್ರಗಳಿಂದ ಐತಿಹಾಸಿಕ ಪಾತ್ರಗಳವರೆಗೆ, ಹಳ್ಳಿಯ ಸಾಮಾನ್ಯ ಮನುಷ್ಯನಿಂದ ಆದರ್ಶ ವ್ಯಕ್ತಿತ್ವಗಳವರೆಗೆ–ರಾಜ್‌ಕುಮಾರ್ ತಮ್ಮ ಅಭಿನಯದ ಮೂಲಕ ಕನ್ನಡ ಸಿನಿಮಾದ ನಾಯಕತ್ವಕ್ಕೆ ಒಂದು ವಿಶಿಷ್ಟ ರೂಪ ನೀಡಿದರು. ಅವರ ಹಾಡುಗಳೂ ಅಷ್ಟೇ ಮಹತ್ವದವು. ನಟನಾಗಿ ಮಾತ್ರವಲ್ಲದೆ ಗಾಯಕನಾಗಿಯೂ ಜನರೊಂದಿಗೆ ನೇರವಾದ ಭಾವನಾತ್ಮಕ ಸಂಬಂಧ ಬೆಳೆಸಿಕೊಂಡ ಅಣ್ಣಾವ್ರು ಕನ್ನಡದ ಸಾಂಸ್ಕೃತಿಕ ಸ್ಮೃತಿಯಲ್ಲಿ ಅಳಿಸಲಾಗದ ಗುರುತು ಮೂಡಿಸಿದರು. 2008ರಲ್ಲಿ ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿ ಕನ್ನಡ ಮೂಲದ ಮತ್ತೊಬ್ಬ ಮಹತ್ವದ ಸಿನಿಮಾ ಪ್ರತಿಭೆಯಾದ ಛಾಯಾಗ್ರಾಹಕ ವಿ.ಕೆ. ಮೂರ್ತಿ ಅವರನ್ನು ಅರಸಿ ಬಂದಿತು. ನೆರಳು ಬೆಳಕಿನ ಕಾವ್ಯವನ್ನ ಕ್ಯಾಮರಾದಲ್ಲಿ ಕಟ್ಟಿಕೊಟ್ಟವರು ವಿ.ಕೆ. ಮೂರ್ತಿ.

ಮೈಸೂರಿನಲ್ಲಿ ಜನಿಸಿದ ವಿ.ಕೆ. ಮೂರ್ತಿ ಭಾರತೀಯ ಸಿನಿಮಾದ ಛಾಯಾಗ್ರಹಣಕ್ಕೆ ಹೊಸ ದೃಶ್ಯಭಾಷೆಯನ್ನು ನೀಡಿದವರು. ಗುರುದತ್ ಅವರೊಂದಿಗೆ ಅವರು ನಿರ್ಮಿಸಿದ ದೃಶ್ಯಪ್ರಪಂಚ ಭಾರತೀಯ ಸಿನಿಮಾದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಪಡೆದಿದೆ. 'ಕಾಗಜ್ ಕೆ ಫೂಲ್', 'ಸಾಹಿಬ್ ಬೀಬಿ ಔರ್ ಗುಲಾಮ್', 'ಪ್ಯಾಸಾ', 'ಚೌದಹ್ವೀಂ ಕಾ ಚಾಂದ್' ಸೇರಿದಂತೆ ಹಲವು ಚಿತ್ರಗಳ ಛಾಯಾಗ್ರಹಣದಲ್ಲಿ ಅವರ ಕಲಾತ್ಮಕ ದೃಷ್ಟಿ ಕಾಣಿಸಿತು. 'ಕಾಗಜ್ ಕೆ ಫೂಲ್' ಭಾರತದ ಮೊದಲ ಸಿನಿಮಾಸ್ಕೋಪ್ ಚಿತ್ರವಾಗಿದ್ದು, ವಿ.ಕೆ. ಮೂರ್ತಿ ಅದರ ಛಾಯಾಗ್ರಾಹಕರಾಗಿದ್ದರು. ಫಾಲ್ಕೆ ಪ್ರಶಸ್ತಿಯ ಇತಿಹಾಸದಲ್ಲೇ ಛಾಯಾಗ್ರಾಹಕರಾಗಿ ಈ ಗೌರವ ಪಡೆದ ಮೊದಲ ವ್ಯಕ್ತಿ ವಿ.ಕೆ. ಮೂರ್ತಿ ಎಂಬುದು ವಿಶೇಷ.

ಅವರ ಕೊಡುಗೆ ನಮಗೆ ಒಂದು ಮುಖ್ಯ ಸಂಗತಿಯನ್ನು ನೆನಪಿಸುತ್ತದೆ–ಸಿನಿಮಾ ಎಂದರೆ ಕೇವಲ ಪರದೆಯ ಮೇಲಿರುವ ನಟನಲ್ಲ. ಬೆಳಕು, ನೆರಳು, ಫ್ರೇಮ್, ಕ್ಯಾಮೆರಾ ಚಲನೆ, ದೃಶ್ಯಸಂಯೋಜನೆ–ಇವೆಲ್ಲವೂ ಸೇರಿ ಸಿನಿಮಾ ಎಂಬ ಭಾಷೆಯನ್ನು ಕಟ್ಟುತ್ತವೆ. ವಿ.ಕೆ. ಮೂರ್ತಿ ಅವರು 1993ರ ಕನ್ನಡದ 'ಹೂವು ಹಣ್ಣು' ಚಿತ್ರಕ್ಕೂ ಛಾಯಾಗ್ರಹಣ ಮಾಡಿದ್ದರು.

ರಾಜ್‌ಕುಮಾರ್, ವಿ.ಕೆ. ಮೂರ್ತಿ ಮತ್ತು ಅನಂತ್‌ನಾಗ್–ಈ ಮೂವರನ್ನು ಒಂದೇ ಸಾಲಿನಲ್ಲಿ ನಿಲ್ಲಿಸುವುದು ಅವರ ಕಲಾಪ್ರಕಾರ ಒಂದೇ ಎಂಬ ಕಾರಣಕ್ಕೆ ಅಲ್ಲ. ಬದಲಾಗಿ ಕನ್ನಡದ ಸಿನಿಮಾ ಪ್ರತಿಭೆ ಎಷ್ಟು ವೈವಿಧ್ಯಮಯವಾಗಿ ಭಾರತೀಯ ಚಿತ್ರರಂಗವನ್ನು ಶ್ರೀಮಂತಗೊಳಿಸಿದೆ ಎಂಬುದನ್ನು ಈ ಮೂವರು ಪ್ರತಿನಿಧಿಸುತ್ತಾರೆ.

ರಾಜ್‌ಕುಮಾರ್ ನಟನೆಯ ಜನಪರ ಶಕ್ತಿಯ ಪ್ರತೀಕವಾದರೆ, ವಿ.ಕೆ. ಮೂರ್ತಿ ಕ್ಯಾಮೆರಾದ ಸೃಜನಶೀಲ ದೃಷ್ಟಿಯ ಪ್ರತೀಕ. ಅನಂತ್‌ನಾಗ್ ಸಹಜ ಅಭಿನಯದ ಸೂಕ್ಷ್ಮತೆಯ ಪ್ರತೀಕ. ಒಬ್ಬರು ಕೋಟ್ಯಂತರ ಕನ್ನಡಿಗರ ಮನಸ್ಸಿನಲ್ಲಿ ಅಣ್ಣಾವ್ರಾಗಿ ಉಳಿದರು. ಮತ್ತೊಬ್ಬರು ಬೆಳಕು ಮತ್ತು ನೆರಳಿನ ಮೂಲಕ ಭಾರತೀಯ ಸಿನಿಮಾದ ದೃಶ್ಯಭಾಷೆಯನ್ನು ಬದಲಿಸಿದರು. ಇನ್ನೊಬ್ಬರು ಸಾಮಾನ್ಯ ಮನುಷ್ಯನ ಅಂತರಂಗವನ್ನು ತೆರೆಗೆ ತರುವ ನಟನೆಯ ಸಾಧ್ಯತೆಯನ್ನು ವಿಸ್ತರಿಸಿದರು.

ಹೀಗಾಗಿ ಅನಂತ್‌ನಾಗ್ ಅವರಿಗೆ ದೊರೆತ ಫಾಲ್ಕೆ ಪ್ರಶಸ್ತಿ ಕೇವಲ ಒಬ್ಬ ನಟನಿಗೆ ಸಂದ ಗೌರವವಲ್ಲ. ಕನ್ನಡ ಚಿತ್ರರಂಗದ ಹಲವು ದಶಕಗಳ ಸೃಜನಶೀಲ ಪಯಣಕ್ಕೆ ದೊರೆತ ಮತ್ತೊಂದು ರಾಷ್ಟ್ರೀಯ ಮನ್ನಣೆ. ಅನಂತ್‌ನಾಗ್ ಅವರ ಹೆಸರಿನೊಂದಿಗೆ ಈ ಗೌರವದ ಸಾಲಿನಲ್ಲಿ ರಾಜ್‌ಕುಮಾರ್ ಮತ್ತು ವಿ.ಕೆ. ಮೂರ್ತಿ ಅವರ ಹೆಸರುಗಳೂ ನೆನಪಾಗುತ್ತವೆ. ಈ ಮೂವರು ಸೇರಿ ಹೇಳುವ ಕಥೆ ಒಂದೇ–ಕನ್ನಡ ಸಿನಿಮಾ ತನ್ನ ನೆಲದ ಭಾಷೆಯಲ್ಲಿ ಮಾತನಾಡುತ್ತಲೇ ಭಾರತೀಯ ಚಿತ್ರರಂಗದ ವಿಶಾಲ ಆಕಾಶದಲ್ಲಿ ತನ್ನದೇ ಆದ ಗುರುತು ಮೂಡಿಸಿದೆ.

ಅನಂತ್‌ನಾಗ್, ಐದು ದಶಕಗಳ ಅವಧಿಯಲ್ಲಿ ಕನ್ನಡದ ಜತೆಗೆ ಹಿಂದಿ, ಮರಾಠಿ, ತೆಲುಗು, ತಮಿಳು, ಮಲಯಾಳಂ ಮತ್ತು ಇಂಗ್ಲಿಷ್ ಚಿತ್ರಗಳಲ್ಲಿಯೂ ಅಭಿನಯಿಸಿದ್ದಾರೆ. ಸಮಾನಾಂತರ ಚಿತ್ರರಂಗದಿಂದ ವಾಣಿಜ್ಯ ಚಿತ್ರಗಳವರೆಗೆ ವಿಭಿನ್ನ ಪಾತ್ರಗಳನ್ನು ಸಹಜ ಅಭಿನಯದ ಮೂಲಕ ಕಟ್ಟಿಕೊಟ್ಟಿರುವುದು ಅವರ ವೈಶಿಷ್ಟ್ಯ.

'ಅಂಕುರ್', 'ನಿಶಾಂತ್', 'ಭೂಮಿಕಾ', 'ಚಂದನದ ಗೊಂಬೆ', 'ಬಯಲು ದಾರಿ', 'ನಾ ನಿನ್ನ ಬಿಡಲಾರೆ', 'ಗಣೇಶನ ಮದುವೆ', 'ಗೌರಿ ಗಣೇಶ', 'ಆಕ್ಸಿಡೆಂಟ್' ಸೇರಿದಂತೆ ಹಲವು ಚಿತ್ರಗಳು ಅವರ ವೈವಿಧ್ಯಮಯ ಅಭಿನಯಕ್ಕೆ ಸಾಕ್ಷಿಯಾಗಿವೆ. ಕಿರುತೆರೆಯ 'ಮಾಲ್ಗುಡಿ ಡೇಸ್' ಮೂಲಕವೂ ಅವರು ಅಪಾರ ಜನಪ್ರಿಯತೆ ಗಳಿಸಿದರು.

ಅನಂತ್ ನಾಗ್ ಅವರಿಗೆ 2025ರಲ್ಲಿ ಪದ್ಮಭೂಷಣ ಪ್ರಶಸ್ತಿಯೂ ಲಭಿಸಿತ್ತು. ಕರ್ನಾಟಕ ರಾಜ್ಯ ಚಲನಚಿತ್ರ ಪ್ರಶಸ್ತಿಗಳನ್ನೂ ಅವರು ಹಲವು ಬಾರಿ ಪಡೆದಿದ್ದಾರೆ. ದಾದಾಸಾಹೇಬ್ ಫಾಲ್ಕೆ ಪ್ರಶಸ್ತಿಯು ಭಾರತೀಯ ಚಿತ್ರರಂಗಕ್ಕೆ ನೀಡುವ ಅತ್ಯುನ್ನತ ಗೌರವಗಳಲ್ಲಿ ಒಂದಾಗಿದ್ದು, ಅನಂತ್‌ನಾಗ್ ಅವರ ಸಾಧನೆಗೆ ಈ ಗೌರವ ಮತ್ತೊಂದು ಮಹತ್ವದ ಮನ್ನಣೆಯಾಗಿದೆ.

"ಈ ಗೌರವವನ್ನು ಕನ್ನಡಿಗರಿಗೆ ಮತ್ತು ಕರ್ನಾಟಕಕ್ಕೆ ಅರ್ಪಿಸುತ್ತೇನೆ" ಎಂದು ಅನಂತ್‌ನಾಗ್ ಪ್ರತಿಕ್ರಿಯಿಸಿರುವುದು ಅವರ ಕನ್ನಡ ನಂಟಿನ ಗಾಢತೆಯನ್ನು ತೋರಿಸುತ್ತದೆ. ದೆಹಲಿ ಕರ್ನಾಟಕ ಸಂಘ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಅವರಿಗೆ ಹಾರ್ದಿಕ ಅಭಿನಂದನೆಗಳು. ❑

ಅಭಿಮತ ವರದಿ

ದೆಹಲಿಯಲ್ಲಿ ಅನುರಣಿಸಿದ ಕೊಡವ ಸಂಸ್ಕೃತಿಯ ವೈಭವ

ದೆಹಲಿ ಕರ್ನಾಟಕ ಸಂಘವು ದಿನಾಂಕ 20.09.2026 ರಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಕೊಡವ ಸಮಾಜ, ನವದೆಹಲಿ ಸಹಯೋಗದಲ್ಲಿ ಕೊಡವ ಸಾಂಸ್ಕೃತಿಕ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ಕೊಡವ ಸಮಾಜದ ಸಾಂಪ್ರದಾಯಿಕ ಉಡುಗೆಯಲ್ಲಿದ್ದ ಕೊಡವರು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಮತ್ತು ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಉಪಾಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಮತ್ತು ಕಾರ್ಯಕಾರಿ ಸಮಿತಿ ಸದಸ್ಯ ಶ್ರೀ ಶಿವಪ್ಪ ಎಂ. ಅವರನ್ನು ಸಾಂಪ್ರದಾಯಿಕ ವಾದ್ಯ ಮತ್ತು ಹಾಡಿನ ಮೂಲಕ ಸಂಘದ ಮುಖ್ಯ ದ್ವಾರದಿಂದ ವೇದಿಕೆಗೆ ಬರಮಾಡಿಕೊಂಡರು.

ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷ ಶ್ರೀ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ, ಕೊಡವ ಸಮಾಜ ನವದೆಹಲಿಯ ಅಧ್ಯಕ್ಷರಾದ ಶ್ರೀ ಮಾಚಿಮಂಡ ಎ. ಕಾರ್ಯಪ್ಪ, ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಶ್ರೀ ಶ್ರೀ ರೇಣುಕುಮಾರ್ ಆರ್., ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ಶ್ರೀಮತಿ ಡೀನಾ ಬೋಜಣ್ಣ ವಾಯಂಡಿರ ಶಿವಾಜಿ ಅವರು ಪ್ರಾರ್ಥನಾ ಗೀತೆ ಹಾಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುವಾರ್ ಅವರು ಮಾತನಾಡುತ್ತಾ, ಇದು ಒಂದು ವಿಶೇಷವಾದ ಕಾರ್ಯಕ್ರಮ. ಮೊದಲನೆಯದಾಗಿ ತಾಯಿ ಕಾವೇರಿಯನ್ನು ಪೂಜಿಸುವ ನಿಮ್ಮಂತಹ ಮನಸ್ಸುಗಳಿಗೆ ನಮಸ್ಕಾರ, ಜೈ ಕಾವೇರಿ ಮಾತೆ, ಜೈ ಕರ್ನಾಟಕ ಎಂದರು.

ಒಮ್ಮೆ ಒಬ್ಬರು ನನ್ನ ಹತ್ತಿರ ಬಂದು ಯಾವುದೋ ಲೈಬ್ರೆರಿಗೆ ಅಕ್ಸೆಸ್ ಬೇಕೆಂದು ಕೇಳಿದರು. ಹೀಗೆ ಅವರ ಬಳಿ ಮಾತನಾಡುವ ಸಂದರ್ಭದಲ್ಲಿ ಕರ್ನಾಟಕದ ವೀರಶೈವ ಪರಂಪರೆ ಲಿಂಗಾಯತ ಧರ್ಮದ ಬಗ್ಗೆ ನಾಲ್ಕು ಪಿಎಚ್‌ಡಿ ಮಾಡಿದ್ದ ಅವರು ಭಾರತ ದೇಶವೇ ಒಂದು ಬುಡಕಟ್ಟು ದೇಶ, ಭಾರತದಲ್ಲಿರುವವರು ಈಗ ಜಾತಿ, ಧರ್ಮ ಎಂದು ಮಾಡಿಕೊಂಡರೂ ಸಹ ಅವರ ಮೂಲಗಳನ್ನು ಹುಡುಕುತ್ತಾ ಹೋದ್ರೆ ನಾವೆಲ್ಲರೂ ಬುಡಕಟ್ಟು ಜನಾಂಗದವರೇ ಎಂಬ ವಿಷಯದ ಕುರಿತು ಸಾಕಷ್ಟು ಚರ್ಚಿಸಿದರು. ಕಾವೇರಿ ಅಂದ ತಕ್ಷಣ ಕಣ್ಣಿಗೆ ಬರುವುದು ಹಸಿರು, ಸಮೃದ್ಧತೆ, ಸಹನಶೀಲತೆ ಹಾಗಾಗಿ ಅಂತಹ ಕಾವೇರಿ ತಾಯಿಯ ಮಡಿಲಿನಲ್ಲಿ ಬಾಳುತ್ತಾ ಇರುವವರು ನಿಜವಾಗಿಯೂ ವಿಶೇಷರಾಗಿದ್ದೀರಿ ಎಂದು ಮನದುಂಬಿ ನುಡಿದರು. ಭಾರತದ ಜನಸಂಖ್ಯೆಯನ್ನು ಹೋಲಿಸಿದರೆ ಕೊಡವರ ಜನಸಂಖ್ಯೆ ಬೆರಳೆಣಿಕೆಯಷ್ಟು. ಜನಸಂಖ್ಯೆ ಕಡಿಮೆ ಇದ್ದರೂ ಸಹ ನಿಮ್ಮ ಸಾಧನೆಗಳು ಅಪಾರ. ಜನರಲ್ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಅವರಿಂದ ಆರಂಭಿಸಿ ಇಂದಿನವರೆಗಿನ ಸಾಧಕರ ಪಯಣವನ್ನು ನೋಡಿದರೆ, ದೇಶದ ರಕ್ಷಣಾ ಕ್ಷೇತ್ರ, ಕ್ರೀಡೆ, ಆಡಳಿತ, ಸಾಹಿತ್ಯ, ಕಲೆ ಸೇರಿದಂತೆ ಹಲವು ಕ್ಷೇತ್ರಗಳಿಗೆ ಕೊಡಗು ನೀಡಿರುವ ಕೊಡುಗೆಯ ಮಹತ್ವ ಅರಿವಾಗುತ್ತದೆ. ಸಂಖ್ಯೆಯಲ್ಲಿ ಚಿಕ್ಕ ಸಮುದಾಯವಾದರೂ, ದೇಶದ ಇತಿಹಾಸ ಮತ್ತು ವರ್ತಮಾನದಲ್ಲಿ ತನ್ನದೇ ಆದ ವಿಶಿಷ್ಟ ಛಾಪು ಮೂಡಿಸಿರುವ ಕೊಡವರ ಸಾಧನೆ ನಿಜಕ್ಕೂ ಸ್ಮರಣೀಯ.

ಕಾಲ ಬದಲಾದಂತೆ ಮನಸ್ಸುಗಳು ಬದಲಾಗಿವೆ, ಅದಕ್ಕೆ ಭಾರತವೂ ಹೊರತಲ್ಲ ಎನ್ನುತ್ತ ತುಳು ಕೊಡವ ಮುಂತಾದ ಎಲ್ಲ ಸಂಸ್ಕೃತಿಗಳು ಸೇರಿ ಕರುನಾಡು ಕರ್ನಾಟಕವಾಗುತ್ತದೆ. ಮುಂದಿನ ಕಾರ್ಯಕ್ರಮಗಳಲ್ಲಿ ಎಲ್ಲರನ್ನೂ ಒಳಗೊಳ್ಳುವಂತಹ ಕಾರ್ಯಕ್ರಮಗಳನ್ನು ಮಾಡುತ್ತೇವೆ. ನಮ್ಮ ಸಹಕಾರ ನಿಮ್ಮೊಂದಿಗೆ ಇರುತ್ತದೆ ಎನ್ನುವಂತಹ ಆಶಯವನ್ನು ವ್ಯಕ್ತಪಡಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಶ್ರೀ ಅಜ್ಜಿನಿಕಂಡ ಸಿ. ಮಹೇಶ್ ನಾಚಯ್ಯ ಅವರು ಕನ್ನಡಿಗರ ಹೆಮ್ಮೆಯ ಪ್ರತೀಕ ದೆಹಲಿ ಕರ್ನಾಟಕ ಸಂಘಕ್ಕೆ ಧನ್ಯವಾದಗಳನ್ನು ತಿಳಿಸುತ್ತಾ ಹಿರಿಯರು ಕಟ್ಟಿದ ಅಯ್ಯನ ಮನೆ (ನೆಲೆ) ಅಂದರೆ ಊರಿನ ಕುಟುಂಬಸ್ಥರು ಹಬ್ಬ ಹರಿದಿನಗಳಲ್ಲಿ ಸೇರಿ ಎಂದು ಆಚರಿಸುವ ಸ್ಥಳ. ಬಹು ಪರಂಪರೆಯ ಜನಗಳು ಸೇರಲು ಇಂತಹ ಭವ್ಯ ಕಟ್ಟಡವನ್ನು ಸ್ಥಾಪಿಸಿದ ಹಿರಿಯರನ್ನು ಹರಸಿ ಈಗಿನ ಅಧ್ಯಕ್ಷ ಶ್ರೀ ರೇಣುಕುಮಾರ್ ಆರ್. ಮತ್ತು ಕಾರ್ಯಕಾರಿ ಸಮಿತಿಯನ್ನು ಶ್ಲಾಘಿಸಿದರು.

ಕೊಡಗಿನ ಬ್ರಹ್ಮಗಿರಿಯಲ್ಲಿ ಹುಟ್ಟುವ ಕಾವೇರಿ, ನಾಡಿನ ಜೀವನಾಡಿಯಾಗಿ ಹರಿದು ಕರ್ನಾಟಕದ ಹಲವು ಭಾಗಗಳಿಗೆ ನೀರುಣಿಸಿ, ಬಳಿಕ ತಮಿಳುನಾಡಿನತ್ತ ಸಾಗುತ್ತಾಳೆ. ಪ್ರಕೃತಿ ಸೌಂದರ್ಯ, ವೀರ ಪರಂಪರೆ ಮತ್ತು ವಿಶಿಷ್ಟ ಸಂಸ್ಕೃತಿಯ ಸಂಗಮವಾಗಿರುವ ಕೊಡಗಿನಲ್ಲಿ ನೆಲೆಸಿರುವ ಕೊಡವ ಸಮುದಾಯ ತನ್ನದೇ ಆದ ಆಹಾರ ಪದ್ಧತಿ, ಉಡುಗೆ–ತೊಡುಗೆ, ಸಂಪ್ರದಾಯ, ಆಚರಣೆ ಮತ್ತು ಜೀವನಶೈಲಿಯಿಂದ ವಿಶಿಷ್ಟ ಗುರುತನ್ನು ಹೊಂದಿದೆ.

ಈ ಶ್ರೀಮಂತ ಪರಂಪರೆಯನ್ನು ರಾಷ್ಟ್ರ ರಾಜಧಾನಿ ದೆಹಲಿಯಲ್ಲಿಯೂ ಉಳಿಸಿ, ಬೆಳೆಸಿ, ಮುಂದಿನ ಪೀಳಿಗೆಗೆ ಪರಿಚಯಿಸುವಲ್ಲಿ ದೆಹಲಿ ಕೊಡವ ಸಮುದಾಯದ ಪಾತ್ರ ಮಹತ್ವದ್ದಾಗಿದೆ. ದೆಹಲಿ ಕೊಡವ ಸಮಾಜದ ಅಧ್ಯಕ್ಷರಾದ ಕಾರಿಯಪ್ಪನವರು ದೆಹಲಿಯಲ್ಲಿ ರಾಯಭಾರಿಯಾಗಿ ನಮ್ಮ ಸಂಸ್ಕೃತಿಯನ್ನು ಎತ್ತಿ ಹಿಡಿಯುತ್ತಿದ್ದಾರೆ. ಎಂ.ಸಿ. ನಾಣಯ್ಯ ಕೊಡವ ಅಕಾಡೆಮಿ ಸ್ಥಾಪಿಸಲು ಕಾರಣಕರ್ತರು. ಇಂದು ಸುಮಾರು 14 ಅಕಾಡೆಮಿಗಳು ಕರ್ನಾಟಕದಲ್ಲಿವೆ ಎಂದರು.

ತನ್ನದೇ ಆದ ವೈವಿಧ್ಯಮಯ ಭಾಷೆ, ಉಡುಗೆ–ತೊಡುಗೆ ಹೊಂದಿರುವಂತಹ ಅನನ್ಯ ಸಂಸ್ಕೃತಿ ಕೊಡವರದ್ದು ಎಂದ ಅವರು ತುಳುವಿಗೆ ರಾಜ್ಯದ ಎರಡನೇ ಆಡಳಿತ ಭಾಷೆ ಘೋಷಿಸಿದ ಸಂದರ್ಭದಲ್ಲಿ ಅಭಿನಂದಿಸಿದರು. ಕೊಡವ ಭಾಷೆಗೂ ಒಂದು ಮಾನ್ಯತೆ ತಂದುಕೊಡುವಲ್ಲಿ ರೇಣುಕುಮಾರ್ ಅವರು ಒಂದು ಹೆಜ್ಜೆ ಇಡಬೇಕು ಎಂದು ಮನವಿ ಮಾಡಿದರು. ನಮ್ಮ ಯುವ ಜನಾಂಗ ವಿದೇಶದಲ್ಲಿದ್ದಾರೆ ಅವರಿಗಾಗಿ ವಿದೇಶದಲ್ಲಿ ಒಂದು ಕಾರ್ಯಕ್ರಮವನ್ನು ಆಯೋಜನೆ ಮಾಡುವ ಅಭಿಲಾಷೆಯನ್ನು ಹೊಂದಿರುವ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸಿದರು.

ಕೊಡವ ಸಮಾಜ ನವದೆಹಲಿಯ ಅಧ್ಯಕ್ಷರಾದ ಶ್ರೀ ಮಾಚಿಮಂಡ ಎ. ಕಾರ್ಯಪ್ಪ ಅವರು ಮಾತನಾಡುತ್ತಾ ತಲಕಾವೇರಿಯಲ್ಲಿ ಉದ್ಭವಿಸುವ ಕಾವೇರಿ ಕೊಡವ ಪಾಲಿಗೆ ತಾಯಿಯ ಸ್ವರೂಪ. ಆಧುನಿಕತೆಯ ವೇಗದಲ್ಲಿ ಸಂಸ್ಕೃತಿಗಳು ಕೊಚ್ಚಿ ಹೋಗುತ್ತಿರುವ ಸಂದರ್ಭದಲ್ಲಿ ನಾವೆಲ್ಲ ನಮ್ಮ

ಸಂಸ್ಕೃತಿ ಮತ್ತು ಸಂಪ್ರದಾಯ ಬದ್ಧವಾಗಿ ಬದುಕುತ್ತಿರುವುದೇ ನಮ್ಮ ನಿಜವಾದ ಆಸ್ತಿ. ಈ ದೂರದೃಷ್ಟಿಕೋನವೇ ಭಾರತವನ್ನು ಒಗ್ಗೂಡಿಸುವ ಧೀಃಶಕ್ತಿ ಎಂದರು.

ದೆಹಲಿ ಕರ್ನಾಟಕ ಸಂಘದಿಂದ ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರನ್ನು, ದೆಹಲಿ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರನ್ನು ಸನ್ಮಾನಿಸಲಾಯಿತು. ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಶಿವಪ್ಪ ಎಂ. ಅವರು ಎಲ್ಲರನ್ನು ಸ್ವಾಗತಿಸಿದರು. ಕಾರ್ಯಕ್ರಮವನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ನಿರೂಪಿಸಿದರು.

ತದನಂತರ ದುಡಿಕೊಟ್ಟ್ ಪಾಟ್, ಉಮ್ಮತ್ತಾಟ್, ಬೊಳಕಾಟ್, ಗೆಜ್ಜೆ ತಂಡ್, ಮತ್ತು ಕೊಡವ ನೃತ್ಯ ಸಾಂಸ್ಕೃತಿಕ ಕಾರ್ಯಕ್ರಮಗಳು ದೆಹಲಿ ಕನ್ನಡಿಗರ ಮನಸೂರೆಗೊಂಡಿತು.❑

ಅಭಿಮತ ವರದಿ

ಕಲ್ಯಾಣ ಕರ್ನಾಟಕದ ವಿಮೋಚನೆಯ ಕೆಚ್ಚಿನ ಕಿಡಿ– ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿ

ಹೈದರಾಬಾದ್ ಕರ್ನಾಟಕದ ವಿಮೋಚನಾ ಹೋರಾಟದ ಇತಿಹಾಸವೆಂದರೆ ಅದು ಕೇವಲ ಸೆಪ್ಟೆಂಬರ್ 17, 1948ರಂದು ಮುಗಿದ ಒಂದು ರಾಜಕೀಯ ಘಟನೆಯಲ್ಲ. ಅದು ನಿಜಾಮನ ನಿರಂಕುಶ ಆಡಳಿತದ ವಿರುದ್ಧ ಜನರು ನಡೆಸಿದ ದೀರ್ಘ ಹೋರಾಟದ ಕಥೆ. ಸ್ವಾತಂತ್ರ್ಯ ಪಡೆದ ಭಾರತದಲ್ಲಿ ಹೈದರಾಬಾದ್ ಸಂಸ್ಥಾನವೂ ಭಾರತೀಯ ಒಕ್ಕೂಟದ ಭಾಗವಾಗಬೇಕು ಎಂಬ ಆಶಯಕ್ಕಾಗಿ ಸಾವಿರಾರು ಜನರು ಹೋರಾಡಿದರು. ಆ ಹೋರಾಟದಲ್ಲಿ ತಮ್ಮ ಬದುಕನ್ನೇ ಪಣಕ್ಕಿಟ್ಟು ಮುಂಚೂಣಿಯಲ್ಲಿ ನಿಂತ ಅನೇಕ ಹೋರಾಟಗಾರರಲ್ಲಿ ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರ ಹೆಸರು ಪ್ರಮುಖವಾಗಿ ನೆನಪಿಸಿಕೊಳ್ಳಬೇಕಾದದ್ದು.

1947ರ ಆಗಸ್ಟ್ 15ರಂದು ಭಾರತ ಸ್ವಾತಂತ್ರ್ಯ ಪಡೆದರೂ ಹೈದರಾಬಾದ್ ಸಂಸ್ಥಾನದಲ್ಲಿ ನಿಜಾಮನ ಆಡಳಿತ ಮುಂದುವರಿಯಿತು. ಭಾರತೀಯ ಒಕ್ಕೂಟಕ್ಕೆ ಸೇರುವುದನ್ನು ನಿಜಾಮನ ಆಡಳಿತ ಒಪ್ಪಲಿಲ್ಲ. ಮತ್ತೊಂದೆಡೆ, ನಿಜಾಮನ ಆಡಳಿತಕ್ಕೆ ಬೆಂಬಲವಾಗಿ ರಜಾಕಾರರ ಸಂಘಟನೆ ಬಲಗೊಂಡಿತು. ಹಿಂಸೆ, ಬೆದರಿಕೆ ಮತ್ತು ದೌರ್ಜನ್ಯದಿಂದ ಜನರನ್ನು ಭಯಭೀತಗೊಳಿಸುವ ಪ್ರಯತ್ನಗಳು ನಡೆದವು.

ಈ ಪರಿಸ್ಥಿತಿಯಲ್ಲಿ ಹೈದರಾಬಾದ್ ಕರ್ನಾಟಕದ ಗಡಿಭಾಗಗಳು ವಿಮೋಚನಾ ಹೋರಾಟದ ಪ್ರಮುಖ ಕೇಂದ್ರಗಳಾದವು. ಮಹಾರಾಷ್ಟ್ರ ಮತ್ತು ಕರ್ನಾಟಕದ ಗಡಿಭಾಗಗಳಲ್ಲಿ ಸ್ಥಾಪನೆಯಾದ ಗಡಿ ಶಿಬಿರಗಳು ಹೋರಾಟಗಾರರಿಗೆ ಸಂಘಟನೆ ಮತ್ತು ಪ್ರತಿರೋಧದ ಕೇಂದ್ರಗಳಾಗಿ ರೂಪುಗೊಂಡವು. ಅಂತಹ ಸಂದರ್ಭದಲ್ಲಿ ಸಿಂದಗಿ ಗಡಿ ಶಿಬಿರವನ್ನು ಸಂಘಟಿಸಿ ಹೋರಾಟಕ್ಕೆ ನಾಯಕತ್ವ ನೀಡಿದವರಲ್ಲಿ ಸರ್ದಾರ್ ಶರಣಗೌಡ ಇನಾಂದಾರರು ಪ್ರಮುಖರು. ಕರ್ನಾಟಕ ವಿಧಾನಮಂಡಲದ ಪ್ರಕಟಿತ ದಾಖಲೆಯಲ್ಲಿಯೂ ಅವರ ಹೋರಾಟದ ಪಾತ್ರದ ಕುರಿತು ಉಲ್ಲೇಖವಿದೆ. ಸಿಂದಗಿ ಭಾಗದಲ್ಲಿ ಯುವಕರನ್ನು ಸಂಘಟಿಸಿ, ನಿಜಾಮನ ಆಡಳಿತ ಮತ್ತು ರಜಾಕಾರರ ವಿರುದ್ಧದ ಹೋರಾಟವನ್ನು ಬಲಪಡಿಸುವಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು.

ಅವರ ಹೋರಾಟದ ವಿಶೇಷತೆ ಕೇವಲ ವೈಯಕ್ತಿಕ ಶೌರ್ಯದಲ್ಲಿರಲಿಲ್ಲ. ಜನರನ್ನು ಸಂಘಟಿಸುವ ಸಾಮರ್ಥ್ಯದಲ್ಲಿತ್ತು. ಒಬ್ಬ ವ್ಯಕ್ತಿಯ ಧೈರ್ಯ ಒಂದು ಘಟನೆಯನ್ನು ಬದಲಾಯಿಸಬಹುದು. ಆದರೆ ಜನರನ್ನು ಸಂಘಟಿಸಿದ ಹೋರಾಟವೇ ಒಂದು ಪ್ರದೇಶದ ಇತಿಹಾಸವನ್ನು ಬದಲಾಯಿಸುತ್ತದೆ. ಶರಣಗೌಡ ಇನಾಂದಾರರು ಯುವಕರನ್ನು ಸಂಘಟಿಸಿ ಹೋರಾಟದ ಕಿಡಿಯನ್ನು ಹಳ್ಳಿಹಳ್ಳಿಗೆ ಕೊಂಡೊಯ್ದರು ಎಂಬ ನೆನಪುಗಳು ಈ ಭಾಗದಲ್ಲಿ ಇಂದಿಗೂ ಜೀವಂತವಾಗಿವೆ.

ಅವರ ಹೆಸರು ಯಡ್ರಾಮಿ, ದುಮ್ಮದ್ರಿ, ಸಿಂದಗಿ ಮತ್ತು ಸುತ್ತಮುತ್ತಲಿನ ಪ್ರದೇಶಗಳ ಜನಸ್ಮೃತಿಯಲ್ಲಿ ಉಳಿದಿರುವುದಕ್ಕೂ ಇದೇ ಕಾರಣ. ರಜಾಕಾರರ ವಿರುದ್ಧ ಜನಪ್ರತಿರೋಧ. ಹೈದರಾಬಾದ್ ಕರ್ನಾಟಕದ ಗ್ರಾಮೀಣ ಪ್ರದೇಶಗಳಲ್ಲಿ ರಜಾಕಾರರ ದೌರ್ಜನ್ಯ ಜನರ ಬದುಕಿನಲ್ಲಿ ಆಳವಾದ ಗಾಯಗಳನ್ನು ಮೂಡಿಸಿತ್ತು. ಆ ದಿನಗಳನ್ನು ಕಣ್ಣಾರೆ ಕಂಡ ಹಿರಿಯರ ನೆನಪುಗಳಲ್ಲಿ ಭಯದ ಜೊತೆಗೆ ಪ್ರತಿರೋಧದ ಕಥೆಗಳೂ ಇವೆ.

ಒಂದೆಡೆ ರಜಾಕಾರರ ಶಸ್ತ್ರಸಜ್ಜಿತ ಪಡೆಗಳು ಜನರನ್ನು ಬೆದರಿಸುತ್ತಿದ್ದರೆ, ಮತ್ತೊಂದೆಡೆ ಗಡಿಶಿಬಿರಗಳಲ್ಲಿ ಸ್ವಾತಂತ್ರ್ಯ ಹೋರಾಟಗಾರರು ಪ್ರತಿರೋಧವನ್ನು ಸಂಘಟಿಸುತ್ತಿದ್ದರು. ಈ ಹೋರಾಟದಲ್ಲಿ ಶರಣಗೌಡ ಇನಾಂದಾರರಂತಹ ನಾಯಕರು ಸ್ಥಳೀಯ ಜನರ ವಿಶ್ವಾಸವನ್ನು ಗಳಿಸಿ ಯುವಕರನ್ನು ಚಳವಳಿಯೊಂದಿಗೆ ಜೋಡಿಸಿದರು. ಹೀಗಾಗಿ ವಿಮೋಚನಾ ಹೋರಾಟ ನಗರಗಳ ರಾಜಕೀಯ ಚಟುವಟಿಕೆಯಾಗದೆ ಗ್ರಾಮೀಣ ಪ್ರದೇಶಗಳಿಗೂ ವ್ಯಾಪಿಸಿತು. ಹೈದರಾಬಾದ್ ಕರ್ನಾಟಕದ ವಿಮೋಚನೆಯ ಕಥೆಯನ್ನು ಅರ್ಥಮಾಡಿಕೊಳ್ಳುವಾಗ ಈ ಸ್ಥಳೀಯ ನಾಯಕತ್ವದ ಮಹತ್ವವನ್ನು ಮರೆಯಬಾರದು.

ಸೆಪ್ಟೆಂಬರ್ 17ರ ಹಿಂದೆ ನಡೆದ ಹೋರಾಟ

1948ರ ಸೆಪ್ಟೆಂಬರ್ 13ರಂದು ಭಾರತೀಯ ಸೇನೆಯ ಕಾರ್ಯಾಚರಣೆ ಆರಂಭವಾಯಿತು. ಐದು ದಿನಗಳ ನಂತರ, ಸೆಪ್ಟೆಂಬರ್ 17ರಂದು ನಿಜಾಮನ ಪಡೆಗಳು ಶರಣಾದವು. ಹೈದರಾಬಾದ್ ಸಂಸ್ಥಾನದ ಭಾರತೀಯ ಒಕ್ಕೂಟದೊಂದಿಗೆ ಏಕೀಕರಣದ ಪ್ರಕ್ರಿಯೆಯಲ್ಲಿ ಇದು ನಿರ್ಣಾಯಕ ತಿರುವಾಯಿತು.

ಆದರೆ ಸೆಪ್ಟೆಂಬರ್ 17ರ ದಿನಾಂಕವನ್ನು ಮಾತ್ರ ನೆನಪಿಸಿಕೊಂಡರೆ ವಿಮೋಚನಾ ಹೋರಾಟದ ಸಂಪೂರ್ಣ ಚಿತ್ರಣ ಸಿಗುವುದಿಲ್ಲ. ಆ ದಿನದ ಹಿಂದೆ ವರ್ಷಗಳ ಕಾಲ ನಡೆದ ಜನಚಳವಳಿ, ಸತ್ಯಾಗ್ರಹ, ಭೂಗತ ಹೋರಾಟ, ಗಡಿಶಿಬಿರಗಳ ಸಂಘಟನೆ ಮತ್ತು ಸ್ಥಳೀಯ ಹೋರಾಟಗಾರರ ತ್ಯಾಗಗಳಿದ್ದವು. ಅದರಲ್ಲಿಯೇ ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರಂತಹ ಹೋರಾಟಗಾರರ ಕೊಡುಗೆಯನ್ನು ಗುರುತಿಸುವ ಅಗತ್ಯವಿದೆ.

ಇತಿಹಾಸದ ಪುಟಗಳಲ್ಲಿ ಕಾಣದ ಹೆಸರುಗಳು

ಸ್ವಾತಂತ್ರ್ಯ ಹೋರಾಟದ ಇತಿಹಾಸವನ್ನು ಬರೆಯುವಾಗ ರಾಷ್ಟ್ರಮಟ್ಟದ ನಾಯಕರ ಹೆಸರುಗಳು ಸಹಜವಾಗಿಯೇ ಮುಂಚೂಣಿಗೆ ಬರುತ್ತವೆ. ಆದರೆ ಪ್ರತಿಯೊಂದು ದೊಡ್ಡ ಚಳವಳಿಯ ಹಿಂದೆ ಸಾವಿರಾರು ಸ್ಥಳೀಯ ಹೋರಾಟಗಾರರ ಶ್ರಮ ಇರುತ್ತದೆ.

ಅವರಲ್ಲಿ ಹಲವರು ಇತಿಹಾಸದ ಪುಸ್ತಕಗಳಲ್ಲಿ ದೊಡ್ಡ ಸ್ಥಾನ ಪಡೆಯಲಿಲ್ಲ. ಆದರೆ ತಮ್ಮ ತಮ್ಮ ಪ್ರದೇಶಗಳಲ್ಲಿ ಅವರು ಜನರನ್ನು ಸಂಘಟಿಸಿದರು, ಹೋರಾಟಕ್ಕೆ ಧೈರ್ಯ ತುಂಬಿದರು ಮತ್ತು ಜನರ ಸ್ವಾತಂತ್ರ್ಯದ ಕನಸನ್ನು ಜೀವಂತವಾಗಿಟ್ಟರು.

ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರನ್ನು ಅಂತಹ ಸ್ಥಳೀಯ ಇತಿಹಾಸದ ಪ್ರಮುಖ ಕೊಂಡಿಯಾಗಿ ನೋಡಬೇಕಾಗಿದೆ.

ಅವರ ಹೋರಾಟದ ಬದುಕು ಕೇವಲ ಒಂದು ಕುಟುಂಬದ ಅಥವಾ ಒಂದು ಊರಿನ ಹೆಮ್ಮೆಯ ವಿಷಯವಾಗಬಾರದು. ಅದು ಕಲ್ಯಾಣ ಕರ್ನಾಟಕದ ಸಾಮೂಹಿಕ ಇತಿಹಾಸದ ಭಾಗವಾಗಬೇಕು.

ಸ್ಮರಣೆ ಕೇವಲ ಪ್ರತಿಮೆಯಲ್ಲಿ ನಿಲ್ಲಬಾರದು

ವಿಮೋಚನಾ ಹೋರಾಟದಲ್ಲಿ ಭಾಗವಹಿಸಿದ ಹಿರಿಯರು ಒಬ್ಬೊಬ್ಬರಾಗಿ ನಮ್ಮಿಂದ ದೂರವಾಗುತ್ತಿದ್ದಾರೆ. ಅವರೊಂದಿಗೆ ಅವರ ನೆನಪುಗಳು, ಅನುಭವಗಳು ಮತ್ತು ಮೌಖಿಕ ಇತಿಹಾಸವೂ ಕಣ್ಮರೆಯಾಗುವ ಅಪಾಯವಿದೆ. ಆದ್ದರಿಂದ ಈಗಲೇ ಈ ಇತಿಹಾಸವನ್ನು ದಾಖಲಿಸುವ ಕೆಲಸ ಆರಂಭವಾಗಬೇಕು.

ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರ ಬದುಕು ಮತ್ತು ಹೋರಾಟದ ಕುರಿತು ಲಭ್ಯವಿರುವ ದಾಖಲೆಗಳನ್ನು ಸಂಗ್ರಹಿಸಬೇಕು. ಅವರೊಂದಿಗೆ ಹೋರಾಡಿದವರ ಕುಟುಂಬಗಳು, ಅವರನ್ನು ಕಂಡ ಹಿರಿಯರು ಮತ್ತು ಸ್ಥಳೀಯ ಜನಸ್ಮೃತಿಗಳನ್ನು ದಾಖಲಿಸಬೇಕು. ಅವರ ಹೆಸರಿನ ಸ್ಮಾರಕದ ಜೊತೆಗೆ ಅವರ ಹೋರಾಟದ ದಾಖಲೆಗಳನ್ನೊಳಗೊಂಡ ಸ್ಮೃತಿ ಕೇಂದ್ರ, ಗ್ರಂಥಾಲಯ ಅಥವಾ ಅಧ್ಯಯನ ಕೇಂದ್ರ ನಿರ್ಮಾಣವಾದರೆ ಅದು ಇನ್ನಷ್ಟು ಅರ್ಥಪೂರ್ಣವಾಗುತ್ತದೆ.

ಇಂದು ಹೈದರಾಬಾದ್ ಕರ್ನಾಟಕವನ್ನು ನಾವು ಕಲ್ಯಾಣ ಕರ್ನಾಟಕ ಎಂದು ಕರೆಯುತ್ತೇವೆ. ಹೆಸರು ಬದಲಾಗಿದೆ. ಆಡಳಿತಾತ್ಮಕ ಆದ್ಯತೆಗಳು ಬದಲಾಗಿವೆ. ಅಭಿವೃದ್ಧಿಯ ಪ್ರಶ್ನೆಗಳು ಹೊಸ ರೂಪ ಪಡೆದಿವೆ. ಆದರೆ ಈ ನೆಲದ ಇತಿಹಾಸ ಬದಲಾಗಿಲ್ಲ. ಈ ನೆಲದ ಜನರು ತಮ್ಮ ಹಕ್ಕು, ಗೌರವ ಮತ್ತು ಸ್ವಾತಂತ್ರ್ಯಕ್ಕಾಗಿ ನಡೆಸಿದ ಹೋರಾಟ ನಮ್ಮ ಸಾಮೂಹಿಕ ಸ್ಮೃತಿಯ ಭಾಗವಾಗಿಯೇ ಉಳಿಯಬೇಕು.

ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರಂತಹ ಹೋರಾಟಗಾರರನ್ನು ಸ್ಮರಿಸುವುದು ಕೇವಲ ಭೂತಕಾಲವನ್ನು ನೆನಪಿಸಿಕೊಳ್ಳುವುದಲ್ಲ. ಸ್ವಾತಂತ್ರ್ಯವೆಂದರೆ ಏನು, ಜನರ ಹಕ್ಕು ಎಂದರೇನು, ಪ್ರಜಾಪ್ರಭುತ್ವಕ್ಕಾಗಿ ಜನರು ಎಷ್ಟು ಬೆಲೆ ತೆತ್ತಿದ್ದಾರೆ ಎಂಬುದನ್ನು ಮುಂದಿನ ಪೀಳಿಗೆಗೆ ತಿಳಿಸುವುದು.

ವಿಮೋಚನಾ ದಿನದ ಆಚರಣೆ ಹೂವಾಲೆ, ಧ್ವಜಾರೋಹಣ ಮತ್ತು ಭಾಷಣಗಳಿಗೆ ಮಾತ್ರ ಸೀಮಿತವಾಗಬಾರದು. ಆ ದಿನದ ಹಿಂದಿನ ಹೋರಾಟದ ಇತಿಹಾಸವನ್ನು ತಿಳಿದುಕೊಳ್ಳುವ, ದಾಖಲಿಸುವ ಮತ್ತು ಮುಂದಿನ ಪೀಳಿಗೆಗೆ ತಲುಪಿಸುವ ಸಂಕಲ್ಪದ ದಿನವಾಗಬೇಕು.

ಕಲ್ಯಾಣ ಕರ್ನಾಟಕವೆಂದರೆ ಕೇವಲ ಭೌಗೋಳಿಕ ಪ್ರದೇಶವಲ್ಲ. ಇದು ಬಸವಣ್ಣ, ಅಲ್ಲಮಪ್ರಭು, ಅಕ್ಕಮಹಾದೇವಿ ಸೇರಿದಂತೆ ನೂರಾರು ಶರಣರು ಸಮಾನತೆ, ಕಾಯಕ, ದಾಸೋಹ ಮತ್ತು ಮಾನವ ಘನತೆಯ ಸಂದೇಶ ಸಾರಿದ ಶರಣರ ನಾಡು. ಅನುಭವ ಮಂಟಪದ ಮೂಲಕ ಸಮಾನತೆಯ ಸಂವಾದಕ್ಕೆ ಹೊಸ ದಿಕ್ಕು ತೋರಿದ ನೆಲ.

ಹೀಗಾಗಿ ಅವರ ಹೋರಾಟವನ್ನು ಕೇವಲ 1948ರ ರಾಜಕೀಯ ಘಟನೆಯಾಗಿ ನೋಡಲಾಗದು. ಅದು ಶರಣರ ನಾಡಿನ ಸಮಾನತೆ ಮತ್ತು ಸ್ವಾಭಿಮಾನದ ಪರಂಪರೆಯಲ್ಲಿ ಮೂಡಿದ ಜನಪ್ರತಿರೋಧದ

ಮತ್ತೊಂದು ಅಧ್ಯಾಯವಾಗಿಯೂ ನೋಡಬಹುದು.

ಇಂದು ಹೈದರಾಬಾದ್ ಕರ್ನಾಟಕವನ್ನು ನಾವು ಕಲ್ಯಾಣ ಕರ್ನಾಟಕ ಎಂದು ಕರೆಯುತ್ತೇವೆ. ಹೆಸರು ಬದಲಾಗಿದೆ. ಕಾಲ ಬದಲಾಗಿದೆ. ಆದರೆ ಈ ನೆಲದ ಹೋರಾಟದ ಚೈತನ್ಯ ಬದಲಾಗಿಲ್ಲ.

ವಚನಕಾರರು ಮನುಷ್ಯನ ಘನತೆಯ ಬಗ್ಗೆ ಮಾತನಾಡಿದ ನೆಲ ಇದು. ಅನ್ಯಾಯದ ವಿರುದ್ಧ ಧ್ವನಿ ಎತ್ತಿದ ಶರಣರ ನೆಲ ಇದು. ಅದೇ ನೆಲದಲ್ಲಿ ಸ್ವಾತಂತ್ರ್ಯ ಮತ್ತು ಹಕ್ಕಿಗಾಗಿ ರಜಾಕಾರರ ವಿರುದ್ಧ ಹೋರಾಡಿದ ಸರ್ದಾರ್ ಶರಣಗೌಡ ದುಮ್ಮದ್ರಿಯಂತಹ ಹೋರಾಟಗಾರರು ಹುಟ್ಟಿಕೊಂಡರು.

ಆದ್ದರಿಂದ ಸೆಪ್ಟೆಂಬರ್ 17ರ ವಿಮೋಚನಾ ದಿನವು ನಮಗೆ ಎರಡು ಪರಂಪರೆಗಳನ್ನು ನೆನಪಿಸುತ್ತದೆ– ಶರಣರ ಸಮಾನತೆಯ ಪರಂಪರೆ ಮತ್ತು ವಿಮೋಚನಾ ಹೋರಾಟಗಾರರ ಸ್ವಾತಂತ್ರ್ಯದ ಪರಂಪರೆ.

ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರಂತಹ ಹೋರಾಟಗಾರರನ್ನು ಸ್ಮರಿಸುವುದು ಕೇವಲ ಭೂತಕಾಲವನ್ನು ನೆನಪಿಸಿಕೊಳ್ಳುವುದಲ್ಲ. ಈ ನೆಲದ ಜನಪರ, ಸಮಾನತೆಯ ಮತ್ತು ಸ್ವಾಭಿಮಾನದ ಪರಂಪರೆಯನ್ನು ಮುಂದಿನ ಪೀಳಿಗೆಗೆ ಕೊಂಡೊಯ್ಯುವ ಜವಾಬ್ದಾರಿಯೂ ಹೌದು.

ಇದು ಶರಣರ ನಾಡು.

ಇದು ಹೋರಾಟಗಾರರ ನಾಡು.

ಇದು ಸ್ವಾಭಿಮಾನದ ನಾಡು.

ಸರ್ದಾರ್ ಶರಣಗೌಡ ಇನಾಂದಾರ ದುಮ್ಮದ್ರಿಯವರೂ ಸೇರಿದಂತೆ ಹೈದರಾಬಾದ್ ಕರ್ನಾಟಕದ ವಿಮೋಚನೆಗಾಗಿ ಹೋರಾಡಿದ ಎಲ್ಲ ಪರಿಚಿತ–ಅಪರಿಚಿತ ಹೋರಾಟಗಾರರಿಗೆ ಗೌರವಪೂರ್ವಕ ನಮನಗಳು.❑

ದೆಹಲಿ ಕರ್ನಾಟಕ ಸಂಘದಲ್ಲಿ ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ

ದೆಹಲಿ ಕರ್ನಾಟಕ ಸಂಘವು ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್, ನವದೆಹಲಿ ಇವರ ಸಹಯೋಗದೊಂದಿಗೆ ದಿನಾಂಕ 17.09.2026 ರಂದು ಕಲ್ಯಾಣ ಕರ್ನಾಟಕ ವಿಮೋಚನಾ ದಿನಾಚರಣೆಯ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ಕಾರ್ಯಕ್ರಮವನ್ನು ಆಯೋಜಿಸಿತ್ತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಮತ್ತು ಗೌರವ ಉಪಸ್ಥಿತರಿದ್ದ ಮಾಜಿ ಶಾಸಕರಾದ ಶ್ರೀ ಮಲ್ಲಿಕಾರ್ಜುನ ಖುಬಾ ಹಾಗೂ ಕರ್ನಾಟಕ ಬ್ಯಾಂಕಿನ ಪ್ರಾದೇಶಿಕ ಕಚೇರಿಯ ಜನರಲ್ ಮ್ಯಾನೇಜರ್ ಶ್ರೀ ಬಸವರಾಜ ಎಸ್. ದೇಸಳ್ಳಿ ಅವರು ಧ್ವಜಾರೋಹಣವನ್ನು ನೆರವೇರಿಸಿ, ಈ ಐತಿಹಾಸಿಕ ದಿನವನ್ನು ಗೌರವಪೂರ್ವಕವಾಗಿ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಸಂಘದ ಅಧ್ಯಕ್ಷ ಶ್ರೀ ರೇಣುಕುಮಾರ್ ಅವರು ಕಲ್ಯಾಣ ಕರ್ನಾಟಕ ವಿಮೋಚನೆಯು ಈ ಭಾಗದ ಜನರ ಸ್ವಾಭಿಮಾನ, ಹೋರಾಟ ಮತ್ತು ತ್ಯಾಗದ ಪ್ರತೀಕವಾಗಿದೆ ಎಂದು ಹೇಳಿದರು. ಹೈದರಾಬಾದ್ ನಿಜಾಮರ ಆಡಳಿತದಿಂದ ಕಲ್ಯಾಣ ಕರ್ನಾಟಕವನ್ನು ವಿಮೋಚನೆಗೊಳಿಸಲು ಅನೇಕ ಮಹನೀಯರು ಮತ್ತು ಹೋರಾಟಗಾರರು ತಮ್ಮ ಜೀವನವನ್ನೇ ಮುಡಿಪಾಗಿಟ್ಟಿದ್ದರು. ಅವರ ತ್ಯಾಗ, ಹೋರಾಟ ಮತ್ತು ದೇಶಭಕ್ತಿಯನ್ನು ನಾವು ಸದಾ ಸ್ಮರಿಸಬೇಕು. ಇಂದು ನಾವು ಅನುಭವಿಸುತ್ತಿರುವ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವದ ವಾತಾವರಣವು ಅವರ ತ್ಯಾಗದ ಫಲವಾಗಿದೆ ಎಂದು ಅವರು ಸ್ಮರಿಸಿದರು. ಕಲ್ಯಾಣ ಕರ್ನಾಟಕ ಅಭಿವೃದ್ಧಿಯಲ್ಲಿ ಶಿಕ್ಷಣ, ಉದ್ಯೋಗ, ಸಾಮಾಜಿಕ ಜಾಗೃತಿ ಹಾಗೂ ನಮ್ಮ ಭಾಷೆ ಮತ್ತು ಸಂಸ್ಕೃತಿಯ ಸಂರಕ್ಷಣೆಗೆ ಹೆಚ್ಚಿನ ಆದ್ಯತೆ ನೀಡಬೇಕಿದೆ. ಕಲ್ಯಾಣ ಕರ್ನಾಟಕದ ಇತಿಹಾಸ ಮತ್ತು ಹೋರಾಟದ ಪರಂಪರೆಯನ್ನು ಮುಂದಿನ ಪೀಳಿಗೆಗೆ ಪರಿಚಯಿಸುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ ಎಂದರು. ಕಲ್ಯಾಣ ಕರ್ನಾಟಕದ ಜನರ ಒಗ್ಗಟ್ಟು ಮತ್ತು ಪರಸ್ಪರ ಸಹಕಾರದಿಂದ ಈ ಭಾಗವನ್ನು ಮತ್ತಷ್ಟು ಅಭಿವೃದ್ಧಿಯತ್ತ ಕೊಂಡೊಯ್ಯಬಹುದು. ದೆಹಲಿಯಲ್ಲಿರುವ ಕಲ್ಯಾಣ ಕರ್ನಾಟಕದ ಕನ್ನಡಿಗರು ತಮ್ಮ ನೆಲ, ನುಡಿ ಮತ್ತು ಸಂಸ್ಕೃತಿಯೊಂದಿಗೆ ಸದಾ ಸಂಪರ್ಕದಲ್ಲಿದ್ದು, ಈ ಭಾಗದ ಅಭಿವೃದ್ಧಿಗೆ ತಮ್ಮದೇ ಆದ ಕೊಡುಗೆ ನೀಡಬೇಕು ಎಂದು ಅವರು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ, ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್‌ನ ಗೌರವ ಅಧ್ಯಕ್ಷ ಶ್ರೀ ವಿ.ವಿ. ಬಿರಾದಾರ, ಅಧ್ಯಕ್ಷ ಡಾ. ಎಸ್.ಎಲ್. ಭಂಡಾರಕರ್, ಪ್ರಧಾನ ಕಾರ್ಯದರ್ಶಿ ಶ್ರೀ ರಾಜಕುಮಾರ ನೀಲೂರ ಮತ್ತು ಇನ್ನೂ ಅನೇಕ ಸದಸ್ಯರು ಕಾರ್ಯಕ್ರಮದಲ್ಲಿ ಭಾಗವಹಿಸಿ ಯಶಸ್ವಿಗೊಳಿಸಿದರು.❑

ದೆಹಲಿ ಕರ್ನಾಟಕ ಸಂಘ ಆಯೋಜಿಸಿದ ಕಲ್ಯಾಣ ಕರ್ನಾಟಕ ಉತ್ಸವ

ದೆಹಲಿ ಕರ್ನಾಟಕ ಸಂಘವು ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್, ನವದೆಹಲಿ ಇವರ ಸಹಯೋಗದಲ್ಲಿ ದಿನಾಂಕ 27.09.2026 ರಂದು ಸಂಘದ ಸಭಾಂಗಣದಲ್ಲಿ ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು.

ಕಾರ್ಯಕ್ರಮದ ಮೊದಲಿಗೆ ದೆಹಲಿ ಹಾಗೂ ಎನ್‌ಸಿಆರ್‌ನ ಸ್ಥಳೀಯ ಮಹಿಳೆಯರು ನಾಡಗೀತೆಯನ್ನು ಹಾಡಿದರು. ಗಣ್ಯರು ದೀಪ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ದೀಪ ಬೆಳಗಿಸುವ ಸಂದರ್ಭದಲ್ಲಿ ಗುರುಗಾಂವ್‌ನ ಕಲ್ಯಾಣ ಕರ್ನಾಟಕದ ಮಹಿಳೆಯರಿಂದ ಪ್ರಸ್ತುತಪಡಿಸಿದ "ಜ್ಞಾನಪೂರ್ಣಂ ಜಗಂ ಜ್ಯೋತಿ, ನಿರ್ಮಲವಾದ ಮನವೇ ಕರ್ಪೂರದಾರತಿ".... ಎನ್ನುವ ಪ್ರಾರ್ಥನೆಯ ಹಾಡು ಕಾರ್ಯಕ್ರಮದ ಚಾಲನೆಗೆ ಮತ್ತಷ್ಟು ಮೆರಗು ತಂದು ಕೊಟ್ಟಿತ್ತು. ಕಾರ್ಯಕ್ರಮದಲ್ಲಿ ಭಾಗವಹಿಸಿದ ಗಣ್ಯರನ್ನು ಹಾಗೂ ಎಲ್ಲಾ ಕನ್ನಡಿಗರನ್ನು, ಕಲಾವಿದರನ್ನು "ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟಿನ" ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ರಾಜಕುಮಾರ ನೀಲೂರ ಅವರು ಆತ್ಮೀಯವಾಗಿ ಸ್ವಾಗತಿಸಿದರು

ಪ್ರಾಸ್ತಾವಿಕ ನುಡಿಗಳನ್ನಾಡಿದ ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಟ್ರಸ್ಟಿನ ಅಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರಕರ್ ಅವರು ಈ ವರ್ಷದ "ಕಲ್ಯಾಣ ಕರ್ನಾಟಕ ರತ್ನ" ಪ್ರಶಸ್ತಿಗೆ ಭಾಜನರಾದ ಸಾಧಕರಿಗೆ ಅಭಿನಂದಿಸುತ್ತಾ ಟ್ರಸ್ಟಿನ ಕಾರ್ಯವೈಖರಿ, ಸಾಂಸ್ಕೃತಿಕ, ಸಾಮಾಜಿಕ ಹಾಗು ಸಾಹಿತ್ಯಿಕ ಧ್ಯೇಯ ಉದ್ದೇಶಗಳನ್ನು ವಿವರಿಸಿದರಲ್ಲದೇ, ಕಲ್ಯಾಣ ಕರ್ನಾಟಕ ವಿಮೋಚನಾ ದಿನದ ಅಂಗವಾಗಿ ರಾಷ್ಟ್ರ ಧ್ವಜಾರೋಹಣ ಮತ್ತು ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮಗಳನ್ನು ತುಂಬಾ ಅಚ್ಚುಕಟ್ಟಾಗಿ ಆಯೋಜಿಸಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಿಗೆ, ಪ್ರಧಾನ ಕಾರ್ಯದರ್ಶಿಗಳಿಗೆ, ಸಂಘದ ಪದಾಧಿಕಾರಿಗಳಿಗೆ, ಕಾರ್ಯಕಾರಿ ಸಮಿತಿಯ ಸದಸ್ಯರಿಗೆ ಧನ್ಯವಾದಗಳನ್ನು ತಿಳಿಸಿದರು.

ಜೊತೆಗೆ ಈ ಕಾರ್ಯಕ್ರಮಗಳನ್ನು ಯಶಸ್ವಿಯಾಗಲು ಶ್ರಮಿಸಿದ ಟ್ರಸ್ಟಿನ ಎಲ್ಲಾ ಪದಾಧಿಕಾರಿಗಳನ್ನು, ಕಾರ್ಯಕಾರಿ ಸಮಿತಿಯ ಸದಸ್ಯರನ್ನು ಅಭಿನಂದಿಸುತ್ತಾ, ಕಲ್ಯಾಣ ಕರ್ನಾಟಕದ ಇತಿಹಾಸದ ವೈಭವೀಕರಣ ಮತ್ತು ಪ್ರಸ್ತುತ ಸಮಸ್ಯೆಗಳ ಬಗ್ಗೆ ಬಿಡಿ ಬಿಡಿಯಾಗಿ ವಿವರಿಸಿದರು.

ನಂತರ ಕಲ್ಯಾಣ ಕನ್ನಡಿಗರ ಸಾಂಸ್ಕೃತಿಕ ಟ್ರಸ್ಟ್(ರಿ) ವತಿಯಿಂದ ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಎಸ್. ಅಪ್ಪ ಅಧ್ಯಕ್ಷರು ಶರಣಬಸವೇಶ್ವರ ವಿದ್ಯಾವರ್ಧಕ ಸಂಘ, ಕಲಬುರ್ಗಿ, ಇವರು ಕಲ್ಯಾಣ ಕರ್ನಾಟಕ ಭಾಗದಲ್ಲಿ ಮಾಡಿದ ಸಾಮಾಜಿಕ ಮತ್ತು ಶೈಕ್ಷಣಿಕ ಸೇವೆಯನ್ನು ಗುರುತಿಸಿ ಮತ್ತು ಡಾ. ಗುರುಲಿಂಗಪ್ಪ ಎಂ. ಪಾಟೀಲ ವಿಶ್ರಾಂತ ಸಹ ಉಪ ಕುಲಪತಿಗಳು ದೆಹಲಿ ಎನ್‌ಸಿಆರ್, ಇವರ ಶೈಕ್ಷಣಿಕ ಸಾಧನೆಯನ್ನು ಗುರುತಿಸಿ ಈ ಇಬ್ಬರು ಸಾಧಕರಿಗೆ ಕಲ್ಯಾಣ ಕರ್ನಾಟಕ ರತ್ನ ಪ್ರಶಸ್ತಿಯನ್ನು ನೀಡಿ ಗೌರವಿಸಲಾಯಿತು.

ಮಾತೋಶ್ರೀ ಪೂಜ್ಯ ಡಾ. ದಾಕ್ಷಾಯಿಣಿ ಎಸ್. ಅಪ್ಪ ಅವರ ಅನುಪಸ್ಥಿತಿಯಲ್ಲಿ ರತ್ನ ಪ್ರಶಸ್ತಿಯನ್ನು ಸ್ವೀಕರಿಸಿ ಮಾತನಾಡಿದ ಶರಣಬಸವೇಶ್ವರ ವಿದ್ಯಾವರ್ಧಕ ಸಂಘ ಕಲಬುರ್ಗಿಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜ ದೇಶಮುಖ್ ಅವರು ಸಂಸ್ಥೆಯು ಸುಮಾರು 200 ವರ್ಷಗಳಿಂದ ಮಾಡಿಕೊಂಡು ಬರುತ್ತಿರುವ ಅನ್ನ ಮತ್ತು ಅಕ್ಷರ ದಾಸೋಹ ಹಾಗೂ ಸಾಮಾಜಿಕ ಸೇವೆಗಳನ್ನು ಸಂಕ್ಷಿಪ್ತವಾಗಿ ವಿವರಿಸಿದರು.

ರತ್ನ ಪ್ರಶಸ್ತಿಯನ್ನು ಸ್ವೀಕರಿಸಿದ ಇನ್ನೋರ್ವ ಸಾಧಕರಾದ ಡಾ. ಗುರುಲಿಂಗಪ್ಪ ಎಂ. ಪಾಟೀಲ ಅವರು ಈ ಪ್ರಶಸ್ತಿಯನ್ನು ತಮ್ಮ ತಂದೆ ತಾಯಿ, ಗುರು ಹಿರಿಯರು ಹಾಗೂ ತಾವು ಆರಾಧಿಸುವ ಶಿವನಿಗೆ ಅರ್ಪಿಸಿ ಮಾತನಾಡುತ್ತಾ ನಾವು ಏನಾದರೂ ಸಾಧಿಸಬೇಕಾದರೆ ನಮಗೆ ಮೊದಲು ಸಾಧಿಸುವ ಛಲ ಬೇಕು ಮತ್ತು ಶ್ರೇಷ್ಠ ಸಾಧನೆಗಾಗಿ ಹುಚ್ಚರಂತೆ ಶ್ರಮಿಸಬೇಕು ಎಂದು ಹೇಳಿದರು.

ಗೌರವ ಅತಿಥಿಗಳಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದ ಕರ್ನಾಟಕ ಬ್ಯಾಂಕಿನ ಜನರಲ್ ಮ್ಯಾನೇಜರ್ ಶ್ರೀ ಬಸವರಾಜ ದೇಸಳ್ಳಿ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ನನಗೆ ತುಂಬಾ ಖುಷಿಯಾಗಿದೆ, ದೆಹಲಿ ಕರ್ನಾಟಕ ಸಂಘವು ನಿರಂತರವಾಗಿ ಕಾರ್ಯಕ್ರಮವನ್ನು ಆಯೋಜಿಸುವ ಮೂಲಕ ಸಾಂಸ್ಕೃತಿಕ ಹಾಗೂ

ಸಾಹಿತಿಕ ಕಾರ್ಯಕ್ರಮಗಳ ಸುರಿಮಳೆಯನ್ನೇ ಸುರಿಸುತ್ತಿದ್ದಾರೆ ಇದು ನಿರಂತರವಾಗಿ ಸಾಗಲಿ ಎಂದು ಹಾರೈಸಿದರು.

ಇನ್ನೋರ್ವ ಅತಿಥಿಗಳಾದ ಡಾ. ಅಲ್ಲಮಪ್ರಭು ಗುಡ್ಡ, ಅಧ್ಯಕ್ಷರು ಆಯುರ್ವೇದಿಕ್ ಮಂಡಳಿ, ಆಯುಷ್ ಮಂತ್ರಾಲಯ, ಭಾರತ ಸರ್ಕಾರ, ಇವರು ಮಾತನಾಡಿ ಕಲ್ಯಾಣ ಕರ್ನಾಟಕದ ವಿಶೇಷತೆಯನ್ನು ವರ್ಣಿಸುತ್ತಾ ಕಲಬುರ್ಗಿಯಲ್ಲಿ ತಯಾರಾಗುವ ಸಿಮೆಂಟನ್ನು ಭಾರತದ 50 ಪ್ರತಿಶತ ಕಟ್ಟಡಗಳಲ್ಲಿ ಉಪಯೋಗಿಸಲಾಗುತ್ತಿದೆ ಎಂದು ಹೇಳಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ಕಲ್ಯಾಣ ಕರ್ನಾಟಕ ಉತ್ಸವ ಕಾರ್ಯಕ್ರಮಕ್ಕೆ ಶುಭ ಕೋರಿ ಮಾತನಾಡುತ್ತಾ, ಸಂಘದ ಹೊಸ ಸಮಿತಿ ಬಂದಾಗಿನಿಂದ ಕರ್ನಾಟಕದ ವಿವಿಧ ಭಾಗಗಳ ಸ್ಥಳೀಯ ಸಂಘ ಸಂಸ್ಥೆಗಳ ಜೊತೆಗೂಡಿ ಅಖಂಡ ಕರ್ನಾಟಕದ ವಿವಿಧ ಭಾಗಗಳ ಕಲೆ, ಸಾಂಸ್ಕೃತಿಕ, ಸಾಹಿತ್ಯ ಮತ್ತು ಇತಿಹಾಸವನ್ನು ವೈಭವಗೊಳಿಸುವ ಕಾರ್ಯಕ್ರಮಗಳನ್ನು ನಮ್ಮ ಸಮಿತಿ ನಿರಂತರವಾಗಿ ಮಾಡುತ್ತಿದೆ, ಇದು ಹೀಗೆ ಮುಂದುವರಿಯುತ್ತದೆ ಎಂದು ಭರವಸೆಕೊಟ್ಟರು.

ಕಾರ್ಯಕ್ರಮದ ನಿಮಿತ್ತವಾಗಿ ಸ್ಥಳೀಯ ಸಂಘ ಸಂಸ್ಥೆಯ ಕಲಾವಿದರಿಂದ ಹಾಗೂ ದೆಹಲಿ-ಎನ್‌ಸಿಆರ್ ಕನ್ನಡಿಗರಿಂದ ಸಮೂಹ ಗಾಯನ, ಸಮೂಹ ನೃತ್ಯ ಹಾಗೂ ಇನ್ನಿತರ ಸಾಂಸ್ಕೃತಿಕ ಕಾರ್ಯಕ್ರಮಗಳು ತುಂಬಾ ಅದ್ಭುತವಾಗಿ ಮೂಡಿಬಂದವು.

ಜೊತೆಗೆ ಕರ್ನಾಟಕದಿಂದ ಬಂದಂತಹ ಖ್ಯಾತ ಹಾಸ್ಯ ಕಲಾವಿದರಾದ ಡಾ. ಬೆಣ್ಣಿ ಬಸವರಾಜ ಅವರು ತಮ್ಮ ಹಾಸ್ಯ ಕಲೆಯಿಂದ ಸಭಾಂಗಣದಲ್ಲಿ ನೆರೆದಿದ್ದ ಕನ್ನಡಿಗರನ್ನು ರಂಜಿಸಿದರು. ಕು. ಭೂಮಿಕಾ ಗಡಾದ ಅವರು ತಮ್ಮ ಮಧುರ ಕಂಠದ ಗಾಯನದಿಂದ ರಂಜಿಸಿದರು ಹಾಗೂ ಸ್ಥಳೀಯ ಕನ್ನಡಿಗರು ಅವರ ಹಾಡಿಗೆ ಹೆಜ್ಜೆ ಹಾಕಿ ಕುಣಿದು ಕುಪ್ಪಳಿಸಿದರು.

ವೇದಿಕೆ ಕಾರ್ಯಕ್ರಮವನ್ನು ಕಲ್ಯಾಣ ಕರ್ನಾಟಕ ಸಾಂಸ್ಕೃತಿಕ ಟ್ರಸ್ಟಿನ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಪ್ರಭಾಕರ ಮಡ್ಡಿತೋಟ ನಡೆಸಿಕೊಟ್ಟರೆ, ಉಪಾಧ್ಯಕ್ಷರಾದ ಶ್ರೀಮತಿ ಸೀಮಾ ಬಿರಾದಾರ ಹಾಗೂ ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕಾಶಿನಾಥ ಬಿರಾದಾರ ಅವರು ಸ್ಥಳೀಯ ಕಲಾವಿದರ ಸಾಂಸ್ಕೃತಿಕ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

ದೆಹಲಿ ಕರ್ನಾಟಕ ಸಂಘದ ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ಅವರು ವಂದನಾರ್ಪಣೆ ಮಾಡಿದರು.

ದೆಹಲಿ-ಎನ್‌ಸಿಆರ್ ಕನ್ನಡಿಗರಿಂದ ಸಂಘದ ಸಭಾಂಗಣ ತುಂಬಿ ತುಳುಕುತ್ತಿತ್ತು.❑

ರಾಜಕುಮಾರ ನೀಲೂರ

ದೆಹಲಿ ಕರ್ನಾಟಕ ಸಂಘದಲ್ಲಿ ಗಣೇಶ ಚತುರ್ಥಿ ಹಾಗೂ ಸಾಂಸ್ಕೃತಿಕ ಉತ್ಸವ



ರಾಷ್ಟ್ರ ರಾಜಧಾನಿ ನವದೆಹಲಿಯ ದೆಹಲಿ ಕರ್ನಾಟಕ ಸಂಘದ ಆವರಣದಲ್ಲಿ ಗಣೇಶ ಚತುರ್ಥಿಯ ಅಂಗವಾಗಿ “ಗಣೇಶ ಸಾಂಸ್ಕೃತಿಕ ಉತ್ಸವ”ವನ್ನು ಸೆಪ್ಟೆಂಬರ್ 14 ರಿಂದ 16,2026 ರವರೆಗೆ ಸಂಘದ ಆವರಣದಲ್ಲಿ ಭಕ್ತಿಭಾವದಿಂದ ನೆರವೇರಿಸಲಾಯಿತು. ಮೂರು ದಿನಗಳ ಕಾಲ ನಡೆದ ಈ ಉತ್ಸವದ ಅಂಗವಾಗಿ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಆರ್. ದಂಪತಿಗಳು ಹಾಗೂ ಉಪಾಧ್ಯಕ್ಷರಾದ ಶ್ರೀಮತಿ ಶೋಭಾ ಗೌಡ ದಂಪತಿಗಳು ಶ್ರೀ ಗಣೇಶನ ಮೂರ್ತಿಯ ಪ್ರತಿಷ್ಠಾಪನೆ ಮತ್ತು ಪೂಜಾ ಕಾರ್ಯಕ್ರಮವನ್ನು ನೆರವೇರಿಸಿದರು. ಈ ಸಂದರ್ಭದಲ್ಲಿ ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್., ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಶಿವಪ್ಪ ಎಂ. ಹಾಗೂ ಶ್ರೀ ಚಂದ್ರಶೇಖರ ಎನ್.ಪಿ. ಸೇರಿದಂತೆ ದೆಹಲಿ ಹಾಗೂ ಸುತ್ತಮುತ್ತಲಿನ ಎನ್‌ಸಿಆರ್ ಪ್ರದೇಶಗಳಲ್ಲಿ ನೆಲೆಸಿರುವ ಕನ್ನಡಿಗರು ಗಣೇಶೋತ್ಸವದಲ್ಲಿ ಉತ್ಸಾಹದಿಂದ ಪಾಲ್ಗೊಂಡು, ಶ್ರೀ ಗಣೇಶನಿಗೆ ವಿಶೇಷ ಪೂಜೆ ಸಲ್ಲಿಸಿ, ಭಕ್ತಿಭಾವದಿಂದ ಹಬ್ಬವನ್ನು ಆಚರಿಸಿದರು.

ಸಂಜೆ ಪೂಜೆಯನ್ನು ಪ್ರಧಾನ ಕಾರ್ಯದರ್ಶಿ ಶ್ರೀ ರಾಧಾಕೃಷ್ಣ ದಂಪತಿಗಳು ಮತ್ತು ಉಪಾಧ್ಯಕ್ಷ ಶ್ರೀ ವಸಂತ ಶೆಟ್ಟಿ ಬೆಳ್ಳಾರೆಯವರು ನೆರವೇರಿಸಿದರು.

ಎರಡನೇ ದಿನಾಂಕ 15.09.2026 ರಂದು ಬೆಳಗ್ಗಿನ ಪೂಜಾ ಕಾರ್ಯಕ್ರಮವನ್ನು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ನೆರವೇರಿಸಿದರು. ಸಂಜೆಯ ಪೂಜೆಯನ್ನು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ನಾರಾಯಣ ಬಿ. ದಂಪತಿಗಳು ಮತ್ತು ಶ್ರೀ ರಾಜಕುಮಾರ್ ದಂಪತಿಗಳು ನೆರವೇರಿಸಿದರು.

ಮೂರನೇ ದಿನ 16.09.2026 ರಂದು ಬೆಳಗ್ಗಿನ ಪೂಜಾ ಕಾರ್ಯಕ್ರಮವನ್ನು ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀ ಶಿವಪ್ಪ ಎಂ. ಮತ್ತು ಶ್ರೀಮತಿ ಶುಭಾ ದೇವಿಪ್ರಸಾದ್ ನೆರವೇರಿಸಿದರು. ಸಂಜೆಯ ಪೂಜಾ ಕಾರ್ಯಕ್ರಮವನ್ನು ಖಜಾಂಚಿ ಶ್ರೀಮತಿ ಆಶಾಲತಾ ಎಂ. ದಂಪತಿಗಳು, ಜಂಟಿ ಕಾರ್ಯದರ್ಶಿ ಶ್ರೀ ಸಂತೋಷ ಜೆ. ದಂಪತಿಗಳು ಮತ್ತು ಕಾರ್ಯಕಾರಿ ಸಮಿತಿಯ ಸದಸ್ಯರಾದ ಶ್ರೀ ಕೃಷ್ಣಪ್ಪ ಎಂ. ಅವರು ನೆರವೇರಿಸಿದರು. ತದನಂತರ ಗಣೇಶ ವಿಸರ್ಜನಾ ಪೂಜೆ ನಡೆದು ಸಂಘದ ಆವರಣದಲ್ಲಿ ಶ್ರೀಗಣೇಶನನ್ನು ವಿಸರ್ಜಿಸಲಾಯಿತು. ಇದೇ ಸಂದರ್ಭದಲ್ಲಿ ಆರ್.ಕೆ. ಪುರಂ ಕ್ಷೇತ್ರದ ಶಾಸಕರಾದ ಶ್ರೀ ಅನಿಲ್ ಶರ್ಮಾ ಅವರು ಪೂಜಾ ಕಾರ್ಯಕ್ರಮದಲ್ಲಿ ಭಾಗಹಿಸಿದ್ದರು.

ಉತ್ಸವದ ಅಂಗವಾಗಿ ಸ್ಥಳೀಯ ಪ್ರತಿಭೆಗಳಿಂದ ಪ್ರತಿದಿನ ಸಂಜೆ ಭಕ್ತಿಗೀತೆಗಳ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. “ಗಣೇಶ ಸಾಂಸ್ಕೃತಿಕ ಉತ್ಸವ”ವು ದೆಹಲಿಯ ಕನ್ನಡಿಗರನ್ನು ಒಂದೆಡೆ ಸೇರಿಸುವುದರ ಜೊತೆಗೆ, ಕನ್ನಡ ನಾಡಿನ ಸಂಸ್ಕೃತಿ, ಪರಂಪರೆ ಮತ್ತು ಭಕ್ತಿಯ ಸೊಬಗನ್ನು ರಾಷ್ಟ್ರ ರಾಜಧಾನಿಯಲ್ಲಿ ಪರಿಚಯಿಸುವ ವಿಶೇಷ ವೇದಿಕೆಯಾಗಿದೆ. ❑

ಅಭಿಮತ ವರದಿ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ ಗಣೇಶ ಚತುರ್ಥಿ

ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ವತಿಯಿಂದ ‘ಗಣೇಶ ಚತುರ್ಥಿ’ ಹಬ್ಬವನ್ನು ಭಕ್ತಿಪೂರ್ವಕವಾಗಿ ಆಚರಿಸಲಾಯಿತು. ವಿದ್ಯೆ ಹಾಗೂ ಜ್ಞಾನದ ಅಧಿಪತಿಯಾದ ಗಣಪನಿಗೆ ಶಾಲಾ ಸಂಸ್ಕೃತ ಶಿಕ್ಷಕರು ಹಾಗೂ ಪಂಡಿತರಾದ ಡಾ. ಗಣೇಶ ಹೆಗಡೆ ಅವರ ಪೌರೋಹಿತ್ಯದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿ ಹಾಗೂ ಗೌರವ ಖಜಾಂಜಿ ಕಾಶಿನಾಥ್ ಬಿರಾದರ್, ಶಾಲೆಯ ಗೌರವ ವ್ಯವಸ್ಥಾಪಕ ಉಮೇಶ್ ಬಿ. ಆರ್. ಹಾಗೂ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ಅವರು ಪೂಜಾ ವಿಧಿವಿಧಾನಗಳನ್ನು ನೆರವೇರಿಸಿದರು. ಶಿಕ್ಷಕ ವೃಂದದವರಿಂದ ಭಜನಾ ಕಾರ್ಯಕ್ರಮವು ನೆರವೇರಿತು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ್ ರಾವ್, ಉಪಾಧ್ಯಕ್ಷೆ ಶ್ರೀಮತಿ ವೀಣಾ ಜಗದೀಶ್, ಆಡಳಿತ ಮಂಡಳಿ ಸದಸ್ಯರುಗಳಾದ ಗಿರೀಶ್ ಎಸ್., ವಸಂತ ಶೆಟ್ಟಿ ಬೆಳ್ಳಾರೆ, ರಾಧಾಕೃಷ್ಣ, ಬಿ. ಎನ್. ಮೋಹನ್ ಕುಮಾರ್, ಶಾಲಾ ಉಪಪ್ರಾಂಶುಪಾಲೆ ಪ್ರೇಮಲತಾ ಬಿ. ಉಪಸ್ಥಿತರಿದ್ದರು. ಶಿಕ್ಷಕ, ಶಿಕ್ಷಕೇತರ ವೃಂದದವರು, ಪೋಷಕರು ಪಾಲ್ಗೊಂಡು ವಿನಾಯಕನ ದರ್ಶನ ಪಡೆದರು. ಬಳಿಕ ಸಂಜೆ ವಿವಿಧ ಪೂಜಾ ವಿಧಿವಿಧಾನಗಳನ್ನು ಪಡೆದ ಗಣಪನನ್ನು ಶಾಲಾ ವಠಾರದಲ್ಲಿ ವಿಸರ್ಜನೆ ಮಾಡಲಾಯಿತು.❑

ದೆಹಲಿ ಪೊಲೀಸ್ ಕಲ್ಯಾಣ ಸಮಿತಿಯ ಗಣೇಶೋತ್ಸವ

ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು ಈ ವರ್ಷದ ಗಣೇಶ ಹಬ್ಬವನ್ನು ಬಹಳ ವಿಜೃಂಭಣೆಯಿಂದ ಆಚರಿಸಿದರು. ದಿನಾಂಕ 18ನೇ ತಾರೀಖಿನಿಂದ 20ನೇ ತಾರೀಖಿನವರೆಗೆ ಮೂರು ದಿನಗಳ ಕಾಲ ಗಣೇಶನ ಮೂರ್ತಿಯನ್ನು ಪೂಜಿಸಲಾಯಿತು. 18ನೇ ತಾರೀಕು ಬೆಳಿಗ್ಗೆ ಅರ್ಚಕರಾದ ಶ್ರೀ ದೇವಿಪ್ರಸಾದ್, ಸಮಸ್ತ ದೆಹಲಿ ಪೊಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಕುಟುಂಬಗಳು, ದೆಹಲಿ ಕನ್ನಡಿಗರು ಹಾಗೂ ಅಶೋಕ್ ವಿಹಾರ್ ಪೊಲೀಸ್ ಕಾಲೋನಿ ನಿವಾಸಿಗಳ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ ಗಣೇಶ ವಿಗ್ರಹವನ್ನು ಪ್ರತಿಷ್ಠಾಪಿಸಿದರು. ವಿಧಿವತ್ತಾದ ಪೂಜೆ ನಂತರ ಎಲ್ಲರಿಗೂ ಮಹಾಪ್ರಸಾದ ವಿತರಣೆಯಾಯಿತು.

ಅದೇ ರೀತಿ ಮೂರು ದಿನಗಳ ಕಾಲ ಶಾಸ್ತ್ರೋಕ್ತವಾಗಿ ಬೆಳಿಗ್ಗೆ ಹಾಗೂ ಸಂಜೆ ಪೂಜಾ ಕಾರ್ಯಕ್ರಮಗಳು ನಡೆದವು. ಈ ಮೂರು ದಿನವೂ ನಮ್ಮ ಸಮಿತಿಯ ಸದಸ್ಯರಾದ ಶ್ರೀ ರಾಜಕುಮಾರ್ ಅವರು ಪೂಜಾ ಕಾರ್ಯಕ್ರಮಗಳನ್ನು ನೆರವೇರಿಸಿದರು. 20ನೇ ತಾರೀಖು ಅರ್ಚಕರಾದ ಶ್ರೀ ದೇವಿ ಪ್ರಸಾದ್ ಬೆಳಿಗ್ಗೆ ಭಕ್ತಿಭಾವದಿಂದ ಪುಷ್ಪಾಲಂಕಾರ, ಧೂಪದೀಪ–ಮಂತ್ರ ಘೋಷದಿಂದ ಪೂಜೆಯನ್ನು ಆರಂಭಿಸಿದರು. 12 ಗಂಟೆಗೆ ಮಹಾ ಮಂಗಳಾರತಿಯ ನಂತರ ಎಲ್ಲರಿಗೂ ಪ್ರಸಾದ ನೀಡಲಾಯಿತು.

ನಮ್ಮ ಈ ಪೂಜಾ ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ರವಿನಂದನ್ ಬಿ.ಎಂ. ಐಪಿಎಸ್ ಅವರು ಮಾತನಾಡಿ ನಾವೆಲ್ಲರೂ ನಮ್ಮ ಕೆಲಸದ ನಿಮಿತ್ತ ಇಲ್ಲಿ ನೆಲೆಸಿದ್ದು, ನಾಡು ನುಡಿ ಸಂಸ್ಕೃತಿಯನ್ನು ಉಳಿಸಿಕೊಂಡು ಹೋಗುತ್ತಿರುವುದಕ್ಕಾಗಿ ಎಲ್ಲರಿಗೂ ಶುಭ ಕೋರಿದರು. ತಾಯ್ನಾಡಿನಿಂದ ದೂರ ಪ್ರಥಮ ಬಾರಿಗೆ ದೆಹಲಿಯಲ್ಲಿ ದೆಹಲಿ ಪೊಲೀಸ್ ಕನ್ನಡಿಗರು ಗಣೇಶನ ಪೂಜಾ ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಕ್ಕೆ ಧನ್ಯವಾದಗಳನ್ನು ತಿಳಿಸಿದರು. ಅವರ ಧರ್ಮಪತ್ನಿ ಶ್ರೀಮತಿ ಸೃಷ್ಟಿ ಭಟ್ ಐಪಿಎಸ್ ಅವರು ಮಾತನಾಡಿ ಮೊಟ್ಟ ಮೊದಲ ಬಾರಿಗೆ ಗಣೇಶನ ಪೂಜೆಯಲ್ಲಿ ಪಾಲ್ಗೊಳ್ಳುತ್ತಿರುವುದು ಅದು ದೆಹಲಿ ಕನ್ನಡಿಗರ ಪೂಜಾ ಕಾರ್ಯಕ್ರಮದಲ್ಲಿ ಭಾಗಿಯಾಗಿದ್ದಕ್ಕೆ ಸಂತೋಷ ವ್ಯಕ್ತಪಡಿಸಿದರು.

ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳ ವಿಶೇಷ ಕರ್ತವ್ಯ ಅಧಿಕಾರಿಗಳಾದ ಶ್ರೀ ಅಭಿಜಿತ್ ಗೌಡ ಅವರು ಮಾತನಾಡಿ ಎಲ್ಲರೂ ಒಗ್ಗೂಡಿ ಮಾಡುತ್ತಿರುವ ಈ ಶುಭ ಕಾರ್ಯಕ್ಕೆ ತಮ್ಮನ್ನು ಆಹ್ವಾನಿಸಿರುವುದಕ್ಕಾಗಿ ಹರ್ಷ ವ್ಯಕ್ತಪಡಿಸಿದರು. ನಂತರ ಕಾರ್ಯಕಾರಿ ಸಮಿತಿ ಸದಸ್ಯರು ಆಗಮಿಸಿದ ಅತಿಥಿಗಳಿಗೆ ಗೌರವ ಸಲ್ಲಿಸಿದರು. ದೆಹಲಿ ಪೊಲೀಸ್ ಕನ್ನಡಿಗರ ಮಹಿಳೆಯರು ಹಾಗೂ ಮಕ್ಕಳು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ನೀಡುವುದರ ಮೂಲಕ ಭಕ್ತವೃಂದವನ್ನು ರಂಜಿಸಿದರು. ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿದ ಎಲ್ಲರಿಗೂ ಸಮಿತಿಯ ಪರವಾಗಿ ಉಡುಗೊರೆಯನ್ನು ನೀಡಿ ಗೌರವಿಸಲಾಯಿತು. ಕೊನೆಯದಾಗಿ ಎಲ್ಲರೂ ಮಹಾಪ್ರಸಾದವನ್ನು ಸವಿದರು.

ಸಾಯಂಕಾಲ ಗಣೇಶನ ವಿಸರ್ಜನೆಯ ಕಾರ್ಯಕ್ರಮದ ಪ್ರಯುಕ್ತ ಗಣೇಶನನ್ನು ರೋಹಿಣಿ ಸೆಕ್ಟರ್ 16ರ ನದಿಯಲ್ಲಿ ಶಾಸ್ತ್ರೋಕ್ತವಾಗಿ ವಿರ್ಜಿಸಲಾಯಿತು. ಹೀಗೆ ಮೂರು ದಿನಗಳ ಈ ಶುಭ ಕಾರ್ಯಕ್ರಮ ಯಶಸ್ವಿಯಾಗಿ ನಡೆಯಿತು.❑

ಗಿರೀಶ್ ಗೌಡ

ಕರ್ನಾಟಕ ಸರ್ಕಾರದ ವಸತಿ ಗೃಹಗಳ ಸಮುಚ್ಚಯ ಆರ್.ಬಿ.ಐ. ಕಾಲೋನಿ ಫೇಸ್–1 ರ 'ಗಣೇಶೋತ್ಸವ ಗೆಳೆಯರ ಬಳಗ' ವು 14ನೇ ವರ್ಷದ ಗಣೇಶೋತ್ಸವ ಆಚರಣೆಯನ್ನು 14–16 ಸೆಪ್ಟೆಂಬರ್ 2026 ರವರೆಗೆ ಅದ್ದೂರಿಯಾಗಿ ಆಚರಿಸಿತು.

ಗಣೇಶ ಮಿತ್ರ ಮಂಡಳಿಯು 35ನೇ ವರ್ಷದ ಗಣೇಶೋತ್ಸವವನ್ನು ದಿನಾಂಕ 14.09.2026 ರಂದು ಆಚರಿಸಿತು. ಶ್ರೀಗಣೇಶನ ಪ್ರತಿಷ್ಠಾಪನಾ ಪೂಜೆಯನ್ನು ಶ್ರೀ ಡಿ.ಎ. ಶ್ರೀನಿವಾಸ ಮೂರ್ತಿ ದಂಪತಿಗಳು ನೆರವೇರಿಸಿಕೊಟ್ಟರು. ಸಂಜೆಯ ಮಹಾಮಂಗಳಾರತಿಯೊಂದಿಗೆ ವಿಸರ್ಜನಾ ಪೂಜೆಯನ್ನು ನೆರವೇರಿಸಿ ಶ್ರೀಗಣೇಶನನ್ನು ಸಂಘದ ಆವರಣದಲ್ಲಿ ವಿಸರ್ಜಿಸಲಾಯಿತು.

ಲಾಜ್‌ಪತ್ ನಗರದಲ್ಲಿರುವ ಶ್ರೀನಿವಾಸಪುರಿಯಲ್ಲಿ ಗಣೇಶೋತ್ಸವದಲ್ಲಿ ದೆಹಲಿ ಕರ್ನಾಟಕ ಸಂಘದ ಪದಾಧಿಕಾರಿಗಳು, ಕಾರ್ಯಕಾರಿ ಸಮಿತಿ ಸದಸ್ಯರು ಮತ್ತು ಆಜೀವ ಸದಸ್ಯರು ಸಂಜೆಯ ಪೂಜಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವದ ಗಣೇಶೋತ್ಸವ

ದಿನಾಂಕ 27.09.2026 ರಂದು ಜನಕಪುರಿ ಕನ್ನಡ ಕೂಟದಲ್ಲಿ ಸುವರ್ಣ ಮಹೋತ್ಸವದ ಗಣೇಶೋತ್ಸವವನ್ನು ಬಹಳ ವಿಜೃಂಭಣೆಯಿಂದ ಆಚರಿಸಿತು. ಜನಕಪುರಿಯ ಸದಸ್ಯರೆಲ್ಲರೂ ಬೆಳಗಿನ 8.00 ಘಂಟೆಗೆ ಬಂದು ಗಣೇಶನ ಸಂಭ್ರಮದಲ್ಲಿ ಪಾಲ್ಗೊಂಡರು. ಗಣೇಶನ ಅಲಂಕಾರಕ್ಕಾಗಿ ಬೆಳಗಿನಿಂದಲೇ ಅಧ್ಯಕ್ಷರಾದ ಡಾ. ಅಶೋಕ ಎಂ ಈಟಿ, ಜನಕಪುರಿ ಮಹಿಳಾ ಮಂಡಳಿ ಅಧ್ಯಕ್ಷೆ ಡಾ. ರೂಪಶ್ರೀ, ಕಾರ್ಯದರ್ಶಿ ಡಾ. ಬಸವರಾಜ, ಶ್ರೀಮತಿ ಲಾವಣ್ಯ, ಉಪಾಧ್ಯಕ್ಷ ಡಾ. ಭಂಡಾರಕರ್, ಶ್ರೀಮತಿ ಸವಿತಾ ಭಂಡಾರಕರ್ ಹಾಗೂ ಜಂಟಿ ಕಾರ್ಯದರ್ಶಿ ಶ್ರೀ ಕೃಷ್ಣರಾಜ ತಮ್ಮನ್ನು ತೊಡಗಿಸಿಕೊಂಡಿದ್ದರು. ಬೆಳಗಿನ 9.00 ಘಂಟೆಗೆ ಶ್ರೀ ಗಣೇಶನ ಪ್ರತಿಷ್ಠಾಪನೆ ನಡೆಯಿತು. ಶ್ರೀ ಗಣೇಶನ ಪೂಜೆಯಲ್ಲಿ ಡಾ. ಎಸ್. ಎಲ್. ಭಂಡಾರಕರ್ ಹಾಗೂ ಶ್ರೀಮತಿ ಸವಿತಾ ಭಂಡಾರಕರ್ ದಂಪತಿಗಳು ಭಾಗವಹಿಸಿದರು. ಶ್ರೀ ಗಣೇಶನ ಪೂಜೆಯನ್ನು ಶ್ರೀ ಅಶೋಕ ಹನಮಸಾಗರ ಹಾಗು ಶ್ರೀಮತಿ ಅಶ್ವಿನಿ ಹನಮಸಾಗರ ದಂಪತಿಗಳು ಬಹಳ ಅಚ್ಚುಕಟ್ಟಾಗಿ ನೆರವೇರಿಸಿಕೊಟ್ಟರು. ಈ ಸಂದರ್ಭದಲ್ಲಿ ಜನಕಪುರಿ ಮಹಿಳಾ ಮಂಡಳಿಯ ಸದಸ್ಯೆಯರು ಸುಶ್ರಾವ್ಯವಾಗಿ ಭಜನೆಗಳನ್ನು ಹಾಡಿದರು.

ಕರ್ನಾಟಕ ಭವನ–3 ಭೀಮಾ (ಕೆ.ಎಸ್.ಟಿ.ಡಿ.ಸಿ) ವತಿಯಿಂದ ಶ್ರೀ ಗಣೇಶ ಚತುರ್ಥಿ ಸಂಭ್ರಮಾಚರಣೆ

ಜನಕಪುರಿ ಕನ್ನಡ ಕೂಟದ ಪುರುಷ ಸದಸ್ಯರೆಲ್ಲ ವಿಶೇಷವಾಗಿ ಬಿಳಿ ಬಟ್ಟೆ, ಧರಿಸಿ, ಬಿಳಿ ಪಂಚೆ ತೊಟ್ಟು ಬಿಳಿ ಶಲ್ಯ ಧರಿಸಿದ್ದು ಕಾರ್ಯಕ್ರಮಕ್ಕೆ ಹೊಸ ಮೆರುಗು ನೀಡಿತು. ಜನಕಪುರಿ ಮಹಿಳಾ ಮಂಡಳಿಯ ಮಹಿಳೆಯರೆಲ್ಲ ಬಣ್ಣ-ಬಣ್ಣದ ಸೀರೆಯುಟ್ಟು ತೊಟ್ಟು ಇನ್ನಷ್ಟು ಸೊಬಗನ್ನು ಹೆಚ್ಚಿಸಿದರು. ಈ ಸಂದರ್ಭದಲ್ಲಿ ಶ್ರೀ ರಾಮಮಂದಿರದ ಪ್ರಧಾನರನ್ನು ಸನ್ಮಾನಿಸಿ ಕೂಟದ ವತಿಯಿಂದ ಡಾ ಅಶೋಕ ಈಟಿ, ಶ್ರೀ ಸಂಜೀವ ದೇಶಪಾಂಡೆ, ಶಾಲು ಹೊದಿಸಿದರು ಹಾಗೂ ಕಾರ್ಯದರ್ಶಿ, ಉಪಾಧ್ಯಕ್ಷ, ಖಜಾಂಚಿ ಹಾಗೂ ನಿಕಟಪೂರ್ವ ಅಧ್ಯಕ್ಷರು ಅವರಿಗೆ ಜನಕಪುರಿ ಕನ್ನಡ ಕೂಟದ ಸವಿನೆನಪಿನ ಕಾಣಿಕೆಯನ್ನು ನೀಡಿದರು.

ಸುವರ್ಣ ಮಹೋತ್ಸವದ ಗಣೇಶೋತ್ಸವದಲ್ಲಿ ನಿಕಟಪೂರ್ವ ಅಧ್ಯಕ್ಷ ಶ್ರೀ ಎನ್.ಆರ್. ಶ್ರೀನಾಥ, ಸುವರ್ಣ ಮಹೋತ್ಸವ ಸಂಚಾಲಕರಾದ ಶ್ರೀ ಬಿ.ಕೆ. ಬಸವರಾಜು, ಶ್ರೀ ಎಂ.ವಿ. ವೆಂಕಟೇಶ್, ಶ್ರೀ ಶೇಷಗಿರಿ ನಾಯಕ್, ಶ್ರೀ ಗಂಗಾಧರ, ಶ್ರೀ ನರಸಿಂಹ ಮೂರ್ತಿ, ಶ್ರೀ ಸಾಹುಕಾರ, ಶ್ರೀ ಶಿರಿಷ ಹಾಗೂ ಸವಿತಾ ಇನಾಮದಾರ್, ಶ್ರೀ ಮುಕುಂದ ಮೂರ್ತಿ ದಂಪತಿಗಳು ಹಾಗೂ ಶ್ರೀಮತಿ ಪವಿತ್ರಾ ತಾಮ್ಹಣಕರ್, ಶ್ರೀಮತಿ ಮಾಲಿನಿ ಪ್ರಹ್ಲಾದ, ಶ್ರೀಮತಿ ವೈಜಯಂತಿ ಹಾಗೂ ಶ್ರೀಮತಿ ಉಮಾ ರಾವ್, ಶ್ರೀಮತಿ ನಯನಾ ಮನಕಾಪುರೆ, ಶ್ರೀ ಶ್ರೀಹರಿ ಹಾಗೂ ಇನ್ನೂ ಅನೇಕರು ಭಾಗವಹಿಸಿದ್ದರು,

ಈ ಗಣೇಶೋತ್ಸವಕ್ಕೆ ದೆಹಲಿ ಕರ್ನಾಟಕ ಸಂಘದ ಕಾರ್ಯದರ್ಶಿಗಳಾದ ಶ್ರೀ ರಾಧಾಕೃಷ್ಣ ಹಾಗೂ ಸಂಘದ ಸದಸ್ಯ ಶ್ರೀ ನಾರಾಯಣ ಬಂದು ಭಾಗವಹಿಸಿ ಶ್ರೀ ಗಣೇಶನ ಆಶೀರ್ವಾದ ಪಡೆದರು. ಇದೇ ಸಂದರ್ಭದಲ್ಲಿ ಸುವರ್ಣ ಮಹೋತ್ಸವ ಆಚರಣೆಯ ಅಂಗವಾಗಿ ವಿಶೇಷ ಸರ್ವ ಸದಸ್ಯರ ಸಭೆ ನಡೆಯಿತು. ತದನಂತರ ಪ್ರಸಾದ ವಿತರಣೆ ನಡೆಯಿತು. ಸುಮಾರು 2.00 ಘಂಟೆಗೆ ಶ್ರೀ ಗಣೇಶನ ವಿಸರ್ಜನೆ ನೆರವೇರಿತು. ಇದರಲ್ಲಿ ಪ್ರತಿವರ್ಷದಂತೆ ಶ್ರೀ ನರಸಿಂಹಮೂರ್ತಿಯವರ ಹಾಗೂ ಶ್ರೀ ಸಾಹುಕಾರ ಅವರ ಉದ್ಘೋಷಣೆ ತುಂಬಾ ಸೊಗಸಾಗಿತ್ತು.

ಡಾ. ಎಸ್.ಎಲ್. ಭಂಡಾರಕರ್

ಶಿಕ್ಷಕರ ದಿನಾಚರಣೆ–ಅಭಿನಂದನೆ

ಸೆಪ್ಟೆಂಬರ್ 5, 2026 ಶಿಕ್ಷಕರ ದಿನಾಚರಣೆಯ ಅಂಗವಾಗಿ ಸಂಘದಲ್ಲಿ ನಡೆಯುವ ಕಲಿಕಾ ಕೇಂದ್ರದ ಕನ್ನಡ ಶಿಕ್ಷಕರಾದ ಶ್ರೀ ಅರವಿಂದ ಬಿಜೈ, ಸಂಗೀತ ಶಿಕ್ಷಕಿಯಾದ ಶ್ರೀಮತಿ ಶುಭಾ ದೇವಿಪ್ರಸಾದ್ ಮತ್ತು ನೃತ್ಯ ಶಿಕ್ಷಕಿಯಾದ ಶ್ರೀಮತಿ ಶ್ರುತಿ ಸಿನ್ಹ ಅವರನ್ನು ಸಂಘದ ಪ್ರಧಾನ ಕಾರ್ಯದರ್ಶಿ, ಖಜಾಂಚಿ ಶ್ರೀಮತಿ ಆಶಾಲತಾ ಎಂ. ಮತ್ತು ಜಂಟಿ ಕಾರ್ಯದರ್ಶಿ ಶ್ರೀಮತಿ ಅಶ್ವಿನಿ ಬಿ.ಎಸ್. ಅವರು ದೆಹಲಿ ಕರ್ನಾಟಕ ಸಂಘದ ಪರವಾಗಿ ಆತ್ಮೀಯವಾಗಿ ಅಭಿನಂದಿಸಿದರು.

ಕನ್ನಡ ಭಾಷೆ, ಸಂಗೀತ ಹಾಗೂ ನೃತ್ಯ ಕಲಿಕೆಯಲ್ಲಿ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡುತ್ತಿರುವ ಶಿಕ್ಷಕರ ಸೇವೆಯನ್ನು ಈ ಸಂದರ್ಭದಲ್ಲಿ ಗೌರವದಿಂದ ಸ್ಮರಿಸಲಾಯಿತು.

ಗ್ರಾಮೀಣ ಕನ್ನಡ ಶಾಲೆಯನ್ನು ಉಳಿಸುವ ಪ್ರಯತ್ನಕ್ಕೆ ಸಂದ ರಾಷ್ಟ್ರಪ್ರಶಸ್ತಿ

ಸೆಪ್ಟೆಂಬರ್ 6 ರಂದು ಸಂಘದ ವಿಚಾರ ಸಂಕಿರಣ ಭವನದಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀಮತಿ ರತ್ನಕುಮಾರಿ ಎಸ್ ಅವರಿಗೆ ಸನ್ಮಾನಿಸಿ ಅಭಿನಂದಿಸಲಾಯಿತು. ಕಾರ್ಯಕ್ರಮದಲ್ಲಿ ಸಂಘದ ಅಧ್ಯಕ್ಷರಾದ ರೇಣುಕುಮಾರ್ ಅವರು ಆಗಮಿಸಿದ ಅತಿಥಿಗಳನ್ನು ಸ್ವಾಗತಿಸುತ್ತಾ ಸಂಘದ ಚಟುವಟಿಕೆಗಳು ಮತ್ತು ಧ್ಯೇಯೋದ್ದೇಶಗಳ ಕುರಿತು ಪರಿಚಯಿಸಿಕೊಟ್ಟರು.

ಕೇಂದ್ರ ಸರ್ಕಾರದ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಪ್ರಕಟಿಸಿರುವ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿ 2026ಕ್ಕೆ ಆಯ್ಕೆಯಾದ ಒಟ್ಟು 48 ಶಿಕ್ಷಕರಲ್ಲಿ ಕರ್ನಾಟಕದಿಂದ ಆಯ್ಕೆಯಾದ ಏಕೈಕ ಶಿಕ್ಷಕಿ ಶ್ರೀಮತಿ ರತ್ನಕುಮಾರಿ ಎಸ್ ಅವರ ಪರಿಚಯವನ್ನು ಆಶಾಲತಾ ಎಂ ಅವರು ಮಾಡಿಕೊಟ್ಟರು.

ಶಿವಮೊಗ್ಗೆಯ ಹೊಸನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಕಮಟಗಾರುವಿನಲ್ಲಿ ಮುಖ್ಯ ಶಿಕ್ಷಕಿಯಾಗಿರುವ ರತ್ನಕುಮಾರಿಯವರಿಗೆ ಮೂರು ದಶಕಕ್ಕೂ ಹೆಚ್ಚಿನ ಬೋಧನಾ ಅನುಭವವಿದ್ದು ಇವರ ಮುಂದಾಳತ್ವದಲ್ಲಿ ಆ ಶಾಲೆಯಲ್ಲಿ ನಡೆಯುತ್ತಿರುವ ಕಲಿಕಾ ಕುಟೀರ, ಮನರಂಜನೆಯ ಸಲಕರಣೆಗಳ ಮೂಲಕ ಕಲಿಕೆ, ತೆರೆದ ವಿಶೇಷ ರಂಗಮಂದಿರ, ಔಷಧಿ ವನ, ವಿಜ್ಞಾನ ವನಗಳಿಂದಾಗಿ ಆ ಶಾಲೆಗೆ ಪರಿಸರ ಮಿತ್ರ ಪ್ರಶಸ್ತಿ, ಧನ್ವಂತರಿ ಪ್ರಶಸ್ತಿಗಳಂಥ ಹಲವಾರು ಪ್ರಶಸ್ತಿಗಳು ಹುಡುಕಿಕೊಂಡು ಬಂದಿವೆ. ಇವರಿಗೆ 2019–20ನೇ ಸಾಲಿನ ರಾಜ್ಯಮಟ್ಟದ ಉತ್ತಮ ಶಿಕ್ಷಕಿ ಪ್ರಶಸ್ತಿಯೂ ಸಂದಿದೆ.

ಸಂಘದ ಅಭಿನಂದನಾ ಸನ್ಮಾನಕ್ಕೆ ಉತ್ತರವಾಗಿ ಮಾತನಾಡಿದ ರತ್ನಕುಮಾರಿಯವರು ದೆಹಲಿಯಂಥ ದೂರದ ಸ್ಥಳದಲ್ಲಿ ಕನ್ನಡಿಗರು ಇಷ್ಟೊಂದು ಅಭಿಮಾನದಿಂದ ತಮ್ಮನ್ನು ಬರಮಾಡಿಕೊಂಡು ಅಭಿನಂದಿಸುತ್ತಿರುವುದು ತಮಗೆ ಎಲ್ಲಿಲ್ಲದ ಸಂತಸ ತಂದಿದೆ, ಈ ಕಾಲದಲ್ಲೂ ಕೂಡಾ ಆದರಾತಿಥ್ಯದ ಸಂಸ್ಕಾರವನ್ನು ಕನ್ನಡಿಗರು ಇಟ್ಟುಕೊಂಡಿರುವುದು ತಮಗೆ ಹೆಮ್ಮೆ ಎನಿಸುತ್ತಿದೆ ಎಂದು ಹೇಳಿದರು. ಕರ್ನಾಟಕದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ಇಂಗ್ಲಿಷ್ ವ್ಯಾಮೋಹದ ನಡುವೆ ಕನ್ನಡ ಶಾಲೆಗಳಲ್ಲಿ ವಿದ್ಯಾರ್ಥಿಗಳನ್ನು ಆಕರ್ಷಿಸುವುದು, ನಗರ ಪ್ರದೇಶಗಳ ಶಾಲೆಯ ವ್ಯಾಮೋಹದ ಸೆಳೆತದ ನಡುವೆ ಕನ್ನಡ ಶಾಲೆಗಳನ್ನು ನಡೆಸಿಕೊಂಡು ಹೋಗುವುದು ಬಲುದೊಡ್ಡ ಸವಾಲಾಗಿದೆ ಎಂಬ ಕಳವಳವನ್ನು ಅವರು ವ್ಯಕ್ತಪಡಿಸಿದರು. ಸರಕಾರ ಕೊಡಮಾಡುವ ಇತಿಮಿತಿಯ ಸಂಪನ್ಮೂಲಗಳನ್ನೇ ಬಳಸಿಕೊಂಡು ಕಲಿಸಲೇಬೇಕೆಂಬ ಹಠ, ಮಕ್ಕಳು ಶಾಲೆಯಲ್ಲಿ ಕಡಿಮೆ ಆಗಬಾರದು ಎನ್ನುವ ಹೋರಾಟ ಈ ಹಂಬಲವೇ ನಮಗೆ ಶಾಲೆಯಲ್ಲಿ ಒಂದು ನಾವೀನ್ಯ ರೀತಿಯ ಕಲಿಕಾ ವಾತಾವರಣವನ್ನು ಸೃಷ್ಟಿ ಮಾಡುವುದಕ್ಕೆ ಅವಕಾಶ ಮಾಡಿಕೊಟ್ಟಿತು, ಕಸದಿಂದ ರಸ ಮಾಡುವ ಕೌಶಲಕ್ಕೆ ಗ್ರಾಮೀಣರ ಸಹಕಾರ ಸಿಕ್ಕಿತು, ಶಾಲೆಯಲ್ಲೇ ಇರುವ ತೋಟಗಾರಿಕೆ ಚಟುವಟಿಕೆಯು ಮಕ್ಕಳಲ್ಲಿ ಸ್ವಾವಲಂಬನೆಯ ಮನೋಭಾವನೆಯನ್ನು ಬೆಳೆಸುತ್ತಾ ಇದೆ ಎಂದು ರಾಷ್ಟ್ರಪ್ರಶಸ್ತಿ ವಿಜೇತ ಶಿಕ್ಷಕಿ ತಿಳಿಸಿದರು. ಶಾಲಾ ಸಮಯದ ನಂತರ ಸಮಯಾಭಾವದ ನಡುವೆಯೂ ಮಕ್ಕಳಿಗೆ ನೆನಪಿನ ಶಕ್ತಿ ಮತ್ತು ಉಚ್ಚಾರಣೆಯ ಸುಧಾರಣೆಗಾಗಿ ಬಾಯಿಪಾಠ, ಭಗವದ್ಗೀತೆ ಇತ್ಯಾದಿಗಳನ್ನು ರೂಢಿ ಮಾಡಿಸುತ್ತಿದ್ದೇವೆ, ಇದರ ಫಲವಾಗಿ ಮಕ್ಕಳು ಈಗ ಚೆನ್ನಾಗಿ ಸಂಸ್ಕೃತದಲ್ಲಿ ಮಾತನಾಡಬಲ್ಲರು ಎಂದು ಹೆಮ್ಮೆಯಿಂದ ಹೇಳಿದರು. ತಮ್ಮ ಶಾಲೆಗೆ ಬರುವ 52 ವಿದ್ಯಾರ್ಥಿಗಳೂ ಆರ್ಥಿಕವಾಗಿ ಹಿಂದುಳಿದವರು, ಅವರ ಶಾಲಾ ವಾಹನ, ಪಠ್ಯಪುಸ್ತಕ ವ್ಯವಸ್ಥೆಗೆ ಬೇಕಾದ ಹಣಕಾಸಿನ ನೆರವನ್ನು ಬೆಂಗಳೂರಿನ ವಸುಧೈವ ಕುಟುಂಬಕಂ ಟ್ರಸ್ಟ್, ಶ್ರೀಗಂಧ ಕನ್ನಡ ಬಳಗ ಚಾರಿಟೆಬಲ್ ಟ್ರಸ್ಟ್‌ನಂಥ ಐದು ಸಂಘಟನೆಗಳು ಕೊಡುತ್ತಿವೆ, ಅವೇ ಕಮಟಗಾರು ಶಾಲೆಯ ಕಣ್ಣೀರು ಒರೆಸುತ್ತಿರುವವರು ಎಂದರೆ ತಪ್ಪಾಗಲಾರದು ಎಂದು ಹೇಳಿ ದಾನಿಗಳನ್ನು ಈ ಸಂದರ್ಭದಲ್ಲಿ ನೆನಪಿಸಿಕೊಂಡರು. ಬಿಸಿಯೂಟಕ್ಕಾಗಿ ಸರ್ಕಾರ ಕೊಡುವ ಧನಸಹಾಯ ಸಾಕಾಗಲಾರದು ಹೀಗಾಗಿ ಆ ಕೊರತೆಯನ್ನು ನಮ್ಮ ಶಿಕ್ಷಕವೃಂದವೇ ಭರಿಸಿ ಶಾಲೆಯನ್ನು ಉಳಿಸಿಕೊಂಡು ಹೋಗುವ ಪ್ರಯತ್ನದಲ್ಲಿ ಕೈಜೋಡಿಸಿದೆ ಎಂದು ಅವರು ಹೇಳಿದರು. ಈ ಎಲ್ಲಾ ಕಾರ್ಯಗಳಿಂದಾಗಿ ರಾಷ್ಟ್ರಪ್ರಶಸ್ತಿ ಬಂದಿರುವುದು ನಮಗೆ ಇನ್ನಷ್ಟು ಹೆಚ್ಚು ವಿದ್ಯಾಸೇವೆ ಮಾಡಲು ಸ್ಫೂರ್ತಿ ನೀಡಿದೆ, ಪ್ರಶಸ್ತಿಗೆ ಬಂದ ಹಣವನ್ನು ಶಾಲೆಗೇ ನೀಡುವುದಾಗಿ ಹೇಳಿ ದೆಹಲಿ ಕರ್ನಾಟಕ ಸಂಘದ ಅಭಿಮಾನ, ಅಭಿನಂದನೆಗಳಿಗೆ ಧನ್ಯವಾದ ಹೇಳಿದರು.

ರತ್ನಕುಮಾರಿಯವರೊಂದಿಗೆ ಅವರ ಪತಿ ವಸಂತ ಎಸ್.ವಿ. ಮತ್ತು ಸಹೋದ್ಯೋಗಿ ಅಂಬಿಕಾ ಎಲ್. ಯು. ಸಹ ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಕಾರ್ಯಕ್ರಮದ ಕೊನೆಗೆ ಸಂಘದ ಜಂಟಿ ಕಾರ್ಯದರ್ಶಿ ಅಶ್ವಿನಿ ಬಿ.ಎಸ್ ಅವರು ಕಮಟಗಾರು ಶಾಲೆಗೆ ವೈಯಕ್ತಿಕವಾಗಿ ಧನಸಹಾಯ ನೀಡುವುದಾಗಿ ವಾಗ್ದಾನ ನೀಡಿದರು. ❑

ಸಂತೋಷ್ ಕುಮಾರ್ ಉಪಾಧ್ಯಾಯ

ದೆಹಲಿಯ ಕನ್ನಡಿಗರೇ,

ಈ ಕರ್ನಾಟಕ ರಾಜ್ಯೋತ್ಸವದ ಸಂದರ್ಭದಲ್ಲಿ **“ನನ್ನೂರಿನ ನೆನಪುಗಳು”** ಎಂಬ ವಿಷಯದ ಕುರಿತು ನಿಮ್ಮ ಬಾಲ್ಯದ ನೆನಪುಗಳು, ನಿಮ್ಮ ಭಾಷೆ, ನಿಮ್ಮ ಊರಿನ ಸೊಗಡು, ಮಣ್ಣಿನ ನಂಟು ಹಾಗೂ ಮರೆಯಲಾಗದ ಅನುಭವಗಳನ್ನು ಪ್ರಬಂಧದ ರೂಪದಲ್ಲಿ ಅಭಿಮತದೊಂದಿಗೆ ಹಂಚಿಕೊಳ್ಳಿ.

ನಿಮ್ಮ ನೆನಪುಗಳ ಮೂಲಕ ನಿಮ್ಮೂರನ್ನು ನಮ್ಮ ಓದುಗರಿಗೆ ಪರಿಚಯಿಸಿ. ಇಮೇಲ್ : **dksangha@gmail.com**

ಪ್ರಧಾನ ಸಂಪಾದಕರು

ಸಂಘದಲ್ಲಿ ರಾಷ್ಟ್ರಸಂತ ಶ್ರೀ ಸಿದ್ದೇಶ್ವರ ಸ್ವಾಮೀಜಿಗಳ ಕುರಿತ ಲೇಖಕ 'ರಾಗಂ' ವಿರಚಿತ 'ಯೋಗಸ್ಥ: ಭಾಗ–2 ಕೃತಿ ಬಿಡುಗಡೆ'

ದಿನಾಂಕ 26.9.2026 ರಂದು ದೆಹಲಿ ಕರ್ನಾಟಕ ಸಂಘದಲ್ಲಿ ರಾಷ್ಟ್ರ ಸಂತರೆಂದೆ ಖ್ಯಾತರಾದ ಶ್ರೀ ಸಿದ್ದೇಶ್ವರ ಸ್ವಾಮೀಜಿಯವರನ್ನು ಕುರಿತ, ರಾಗಂ ಎಂದೇ ಪರಿಚಿತರಾದ ಶ್ರೀ ರಾಜಶೇಖರಯ್ಯ ಮಠಪತಿ ಅವರು ಬರೆದ ಯೋಗಸ್ಥ: ಭಾಗ–2 ಕೃತಿ ಬಿಡುಗಡೆಯಾಯಿತು. ಕೃತಿಯನ್ನು ಕುರಿತು ಗೃಹ ಸಚಿವಾಲಯದ ಭಾರತೀಯ ಜನಗಣತಿ ಆಯುಕ್ತರ ಕಚೇರಿ ಸಹಾಯಕ ರಿಜಿಸ್ಟ್ರಾರ್ ಜನರಲ್ ಆದ ಡಾ. ಬಿ.ಪಿ. ಹೇಮಾನಂದ ಅವರು ಮಾತನಾಡಿ, ಯೋಗಸ್ಥ ಕೃತಿಯಲ್ಲಿ ವಿವರಿಸಲಾಗಿರುವ ವಿಷಯಗಳು ಅಧ್ಯಯನ ಯೋಗ್ಯವಾಗಿದ್ದು, ಸಾಹಿತ್ಯಕ, ಭಾಷಿಕ ಶೈಲಿಯ ದೃಷ್ಟಿಯಿಂದಲೂ ಓದುಗರಲ್ಲಿ ಆಸಕ್ತಿಯನ್ನು ಉಂಟುಮಾಡುವಲ್ಲಿ ಬಹಳ ಚೆನ್ನಾಗಿ ನಿರೂಪಿತಗೊಂಡಿದೆ ಎಂದು ಲೇಖಕರ ಪ್ರಯತ್ನವನ್ನು ಮುಕ್ತ ಮನಸ್ಸಿನಿಂದ ಶ್ಲಾಘಿಸಿದರು. ಆಯುಷ್ ಸಚಿವಾಲಯದ ಆಯುರ್ವೇದ ಮಂಡಳಿಯ ಅಧ್ಯಕ್ಷರಾದ ಡಾ. ಅಲ್ಲಮಪ್ರಭು ಗುಡ್ಡ ಅವರು ಉದ್ಘಾಟಿಸಿದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ರೇಣುಕುಮಾರ್ ಆರ್. ಅವರು ವಹಿಸಿದ್ದರು.

ಮುಖ್ಯ ಅತಿಥಿಗಳಾಗಿ ಡಾ. ಚಂದ್ರಶೇಖರ್ ಎನ್.ಪಿ., ಅಧ್ಯಕ್ಷರು ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ ದೆಹಲಿ, ಡಾ. ಪ್ರವೀಣ್ ಕುಮಾರ್ ಎಸ್., ದೆಹಲಿ, ರಾಧಾಕೃಷ್ಣ ಪ್ರಧಾನ ಕಾರ್ಯದರ್ಶಿ, ದೆಹಲಿ ಕರ್ನಾಟಕ ಸಂಘ, ಶ್ರೀ ವಿಶ್ವನಾಥ್ ಬಿರಾದಾರ್, ಹಾಗೂ ಬಸವರಾಜ ಮೇಲಿನಮನಿ ಭಾಗವಹಿಸಿದ್ದರು.

ದೆಹಲಿ ಕರ್ನಾಟಕ ಸಂಘದ ಖಜಾಂಚಿ ಶ್ರೀಮತಿ ಆಶಾಲತಾ ಎಂ. ಕಾರ್ಯಕ್ರಮದ ನಿರೂಪಣೆ ನಡೆಸಿಕೊಟ್ಟರು. ಕಾರ್ಯಕ್ರಮದ ರೂವಾರಿಗಳಾದ ಡಾ. ದೇವಿಕಾ ಎಸ್, ಲೇಖಕಿ ಪ್ರಾಧ್ಯಾಪಕಿ ಬೆಂಗಳೂರು ಇವರು ಪ್ರಾಸ್ತಾವಿಕ ನುಡಿಯನ್ನು ನೆರವೇರಿಸಿದ್ದು, ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ಪ್ರಧಾನ ಕಾರ್ಯದರ್ಶಿಗಳಾದ ಶ್ರೀ ಶಿವಪ್ಪ ಎಂ. ಅವರು ವಂದನಾರ್ಪಣೆಯನ್ನು ನಡೆಸಿಕೊಟ್ಟರು. ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಎಲ್ಲರಿಗೂ ಪ್ರಸಾದ ವ್ಯವಸ್ಥೆ ಮಾಡಲಾಗಿತ್ತು. ❑

ತುಳುವಿಗೆ ಎರಡನೇ ಅಧಿಕೃತ ಭಾಷೆಯ ಮಾನ್ಯತೆ: ಕರ್ನಾಟಕ ಸರ್ಕಾರಕ್ಕೆ ಅಭಿನಂದನೆ

ಪಂಚ ದ್ರಾವಿಡ ಭಾಷೆಯಾದ ತುಳುವನ್ನು ಕರ್ನಾಟಕ ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಮಾಡಬೇಕೆಂಬ ತುಳುವರ ಒಕ್ಕೊರಲ ಬೇಡಿಕೆಯನ್ನು ಕರ್ನಾಟಕ ಸರಕಾರವು ಮಂಗಳೂರಿನ ಜಿಲ್ಲಾಧಿಕಾರಿ ಕಚೇರಿಯಲ್ಲಿ ನಡೆದ ವಿಶೇಷ ರಾಜ್ಯ ಸಚಿವ ಸಂಪುಟ ಸಭೆಯಲ್ಲಿ ಅಧಿಕೃತವಾಗಿ ತೀರ್ಮಾನಿಸಿರುವುದು ಸಂತಸದ ಸಂಗತಿ.

ಕಳೆದ ಚುನಾವಣೆಯ ಸಂದರ್ಭದಲ್ಲಿ ಕರ್ನಾಟಕದ ಎಲ್ಲ ಪಕ್ಷಗಳು ತಮ್ಮ ಪ್ರಣಾಳಿಕೆಯಲ್ಲಿ ಪಂಚ ದ್ರಾವಿಡ ಭಾಷೆಯಾದ ತುಳುವನ್ನು ರಾಜ್ಯದ ಎರಡನೇ ಅಧಿಕೃತ ಭಾಷೆಯನ್ನಾಗಿ ಘೋಷಣೆ ಮಾಡಬೇಕೆಂಬ ಮನವಿಯನ್ನು ದೆಹಲಿ ತುಳುಸಿರಿಯ ವತಿಯಿಂದ ಮಾಡಲಾಗಿತ್ತು. ಕರ್ನಾಟಕ ಕಾಂಗ್ರೆಸ್ ಪಕ್ಷ ಚುನಾವಣಾ ಪೂರ್ವ ತನ್ನ ಪ್ರಣಾಳಿಕೆಯಲ್ಲಿ ಈ ಅಂಶವನ್ನು ನೀಡಿತ್ತು. ಇದೀಗ ತನ್ನ ಪ್ರಣಾಳಿಕೆಯಂತೆ ನಡೆದುಕೊಂಡಿರುವುದು ತುಳುನಾಡಿನ ಜನತೆಗೆ ಅವಿಸ್ಮರಣೀಯ ಕ್ಷಣವಾಗಿದೆ.

ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರ್ಪಡೆಗೊಳಿಸಬೇಕಾದರೆ ಕರ್ನಾಟಕ ಸರಕಾರವು ತುಳು ಭಾಷೆಯನ್ನು ರಾಜ್ಯದ ಅಧಿಕೃತ ಭಾಷೆಯನ್ನಾಗಿಸಬೇಕೆಂಬ ಪ್ರಸ್ತಾಪವನ್ನು ಮೊದಲು ಸರಕಾರದ ಗಮನಕ್ಕೆ ತಂದದ್ದು ದೆಹಲಿ ತುಳುಸಿರಿ. ದೆಹಲಿ ತುಳುಸಿರಿಯ ಈ ಕೋರಿಕೆಯ ಮೇರೆಗೆ ವಿಶೇಷವಾಗಿ ಮುತುವರ್ಜಿ ವಹಿಸಿ ಕಾರ್ಯಗೈದ ಪ್ರೊಫೆಸರ್ ರಾಧಾಕೃಷ್ಣ ಅವರಿಗೆ ಇದರ ಪೂರ್ಣ ಶ್ರೇಯಸ್ಸು ಸಲ್ಲಬೇಕಾದುದು. ಅವರು ಕಾಂಗ್ರೆಸ್ ಪಕ್ಷದ ಚುನಾವಣಾ ಪ್ರಣಾಳಿಕೆ ಸಮಿತಿಯ ಉಪಾಧ್ಯಕ್ಷರಾಗಿದ್ದರು. ಅಧ್ಯಕ್ಷರಾಗಿದ್ದ ಅಂದಿನ ಮಾಜಿ ಉಪಮುಖ್ಯಮಂತ್ರಿ ಡಾ. ಜಿ. ಪರಮೇಶ್ವರ್ ಅವರಿಗೆ, ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್ ಅವರಿಗೂ ದೆಹಲಿ ತುಳುಸಿರಿಯು ಅನಂತ ಕೃತಜ್ಞತೆಗಳನ್ನು ಸಲ್ಲಿಸುತ್ತದೆ. ಪ್ರಸ್ತುತ ಸರಕಾರದ ಸಚಿವ ಸಂಪುಟಕ್ಕೆ, ಈ ಹೋರಾಟದ ಹಿಂದೆ ಶ್ರಮಿಸಿದ ಕರಾವಳಿಯ ಶಾಸಕರಿಗೆ, ಸಂಸದರಿಗೆ ಹಾಗೂ ಮಹನೀಯರಿಗೆ ಅಭಿನಂದನೆಗಳನ್ನು ಸಲ್ಲಿಸುತ್ತದೆ. ಈ ಐತಿಹಾಸಿಕ ಕ್ಷಣವನ್ನು ಒದಗಿಸಿಕೊಟ್ಟ ಮಾನ್ಯ ಮುಖ್ಯಮಂತ್ರಿಗಳನ್ನು ದೆಹಲಿಯಲ್ಲಿ ತುಳುವರು ಆದರಾಭಿಮಾನದಿಂದ ಅಭಿನಂದಿಸಲಿದ್ದಾರೆ.

ತುಳು ಭಾಷೆ, ಸಂಸ್ಕೃತಿಗಾಗಿ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ದೆಹಲಿ ತುಳುಸಿರಿಯು ಸುಮಾರು ಮೂರು ದಶಕಗಳಿಂದ ನಿರಂತರವಾಗಿ ಕಾರ್ಯಗೈಯುತ್ತಿದೆ. ಸಂವಿಧಾನದ ಎಂಟನೇ ಪರಿಚ್ಛೇದಕ್ಕೆ ತುಳು ಭಾಷೆಯನ್ನು ಸೇರ್ಪಡೆಗೊಳಿಸಲು ಅಪಾರ ಶ್ರಮವಹಿಸಿದೆ. ಮುಂದಿನ ದಿನಗಳಲ್ಲಿಯೂ ಈ ಪ್ರಯತ್ನವು ಮುಂದುವರಿಯಲಿದೆ ಎಂದು ದೆಹಲಿ ತುಳುಸಿರಿ ಅಧ್ಯಕ್ಷ, ಕರ್ನಾಟಕ ತುಳು ಸಾಹಿತ್ಯ ಅಕಾಡೆಮಿಯ ಮಾಜಿ ಸದಸ್ಯ ವಸಂತ ಶೆಟ್ಟಿ ಬೆಳ್ಳಾರೆ ಪ್ರಕಟನೆಯಲ್ಲಿ ತಿಳಿಸಿದ್ದಾರೆ. ತಮ್ಮ ಈ ಸಾರ್ಥಕ ಕೊಡುಗೆಗೆ ಮತ್ತೊಮ್ಮೆ ನಮ್ಮ ಹೃತ್ಪೂರ್ವಕ ಆಭಾರ, ಗೌರವ ಮತ್ತು ಕೃತಜ್ಞತೆಗಳು. ❑

ವರದಿ : ***ದೆಹಲಿ ತುಳು ಸಿರಿ***

ಓಕಾಯೋ ಕತೆ–ದೌರ್ಬಲ್ಯವೇ ಶಕ್ತಿಯಾದಾಗ

ಜಪಾನ್‌ನ ಒಂದು ಸಣ್ಣ ಪಟ್ಟಣದಲ್ಲಿ ವಾಸಿಸುತ್ತಿದ್ದ ಹತ್ತು ವರ್ಷದ ಓಕಾಯೋನಿಗೆ ಜೂಡೋ ಕಲಿಯುವುದೆಂದರೆ ತುಂಬಾ ಆಸೆ. ಆದರೆ ಬಾಲ್ಯದಲ್ಲಿ ನಡೆದ ಒಂದು ಅಪಘಾತದಲ್ಲಿ ಆತನ ಎಡಗೈ ಕತ್ತರಿಸಿ ಹೋಗಿದ್ದರಿಂದ, ಆತನ ಪೋಷಕರು ಜೂಡೋ ಕಲಿಯಲು ಅನುಮತಿ ನೀಡುತ್ತಿರಲಿಲ್ಲ. ಆದರೆ ಈಗ ಆತ ದೊಡ್ಡವನಾಗುತ್ತಿದ್ದಂತೆ ಆತನ ಹಠವೂ ಹೆಚ್ಚಾಗುತ್ತಾ ಹೋಯಿತು.

ಕೊನೆಗೆ ಪೋಷಕರು ಆತನ ಹಠಕ್ಕೆ ತಲೆಬಾಗಲೇಬೇಕಾಯಿತು. ಅವರು ಓಕಾಯೋನನ್ನು ಹತ್ತಿರದ ನಗರದಲ್ಲಿದ್ದ ಒಬ್ಬರು ಪ್ರಸಿದ್ಧ ಮಾರ್ಷಲ್ ಆರ್ಟ್ಸ್ ಗುರುವಿನ ಬಳಿ ಸೇರಿಸಲು ಕರೆದುಕೊಂಡು ಹೋದರು.

ಗುರುಗಳು ಓಕಾಯೋನನ್ನು ನೋಡಿದಾಗ ಅವರಿಗೆ ಆಶ್ಚರ್ಯವಾಯಿತು. ಎಡಗೈಯೇ ಇಲ್ಲದ ಈ ಹುಡುಗ ಜೂಡೋವನ್ನು ಹೇಗೆ ತಾನೇ ಕಲಿಯಲು ಸಾಧ್ಯ ಎಂದು ಯೋಚಿಸಿದರು. ಅವರು, "ನಿನಗೆ ಎಡಗೈಯೇ ಇಲ್ಲವಲ್ಲ, ಹಾಗಿರುವಾಗ ನೀನು ಉಳಿದ ಹುಡುಗರೊಂದಿಗೆ ಹೇಗೆ ತಾನೇ ಸ್ಪರ್ಧಿಸುತ್ತೀಯಾ?" ಎಂದು ಕೇಳಿದರು.

"ಅದನ್ನು ಹೇಳಿಕೊಡುವುದು ನಿಮ್ಮ ಕೆಲಸ", ಎಂದ ಓಕಾಯೋ. "ನನಗೆ ಗೊತ್ತಿರುವುದು ಒಂದೇ–ನಾನು ಎಲ್ಲರನ್ನೂ ಸೋಲಿಸಬೇಕು ಮತ್ತು ಒಂದು ದಿನ ನಾನೇ 'ಸೆನ್ಸೇಯ್' (ಮಾಸ್ಟರ್) ಆಗಬೇಕು" ಎಂದನು.

ಆತನ ಕಲಿಯುವ ದೃಢ ಇಚ್ಛಾಶಕ್ತಿಯನ್ನು ಕಂಡು ಗುರುಗಳು ತುಂಬಾ ಪ್ರಭಾವಿತರಾದರು ಮತ್ತು "ಸರಿ, ನಾನು ನಿನಗೆ ಹೇಳಿಕೊಡುತ್ತೇನೆ. ಆದರೆ ಒಂದು ಷರತ್ತು, ನೀನು ನನ್ನ ಪ್ರತಿಯೊಂದು ಸೂಚನೆಯನ್ನು ಪಾಲಿಸಬೇಕು ಮತ್ತು ಅದರಲ್ಲಿ ಸಂಪೂರ್ಣ ನಂಬಿಕೆ ಇಡಬೇಕು" ಎಂದರು. ಓಕಾಯೋ ಒಪ್ಪಿಗೆಯ ಸೂಚನೆಯಾಗಿ ಗುರುಗಳ ಮುಂದೆ ತಲೆಬಾಗಿಸಿದನು.

ಗುರುಗಳು ಒಟ್ಟಿಗೆ ಸುಮಾರು ಐವತ್ತು ವಿದ್ಯಾರ್ಥಿಗಳಿಗೆ ಜೂಡೋ ಕಲಿಸಲು ಪ್ರಾರಂಭಿಸಿದರು. ಓಕಾಯೋ ಕೂಡ ಉಳಿದ ಹುಡುಗರಂತೆ ಕಲಿಯುತ್ತಿದ್ದನು. ಆದರೆ ಕೆಲವು ದಿನಗಳ ನಂತರ ಆತ ಗಮನಿಸಿದ ವಿಷಯವೆಂದರೆ–ಗುರುಗಳು ಉಳಿದ ಹುಡುಗರಿಗೆ ಬೇರೆ ಬೇರೆ ಪಟ್ಟುಗಳನ್ನು ಕಲಿಸುತ್ತಿದ್ದರು, ಆದರೆ ತನಗೆ ಮಾತ್ರ ಆರಂಭದಲ್ಲಿ ಕಲಿಸಿದ ಅದೇ ಒಂದು 'ಕಿಕ್' (ಒದೆತ) ಅನ್ನು ಅಭ್ಯಾಸ ಮಾಡಲು ಹೇಳುತ್ತಿದ್ದರು. ಆತನಿಗೆ ತಡೆಯಲು ಸಾಧ್ಯವಾಗದೆ ಗುರುಗಳ ಬಳಿ ಹೋಗಿ ಕೇಳಿದನು, "ಗುರುಗಳೇ, ನೀವು ಉಳಿದ ಹುಡುಗರಿಗೆ ಹೊಸ ಹೊಸ ಪಟ್ಟುಗಳನ್ನು ಕಲಿಸುತ್ತಿದ್ದೀರಿ, ಆದರೆ ನಾನು ಇನ್ನೂ ಆ ಒಂದು ಕಿಕ್ ಹೊಡೆಯುವುದನ್ನೇ ಅಭ್ಯಾಸ ಮಾಡುತ್ತಿದ್ದೇನೆ. ನಾನು ಬೇರೆ ತಂತ್ರಗಳನ್ನು ಕಲಿಯಬಾರದೇ?"

ಗುರುಗಳು, "ನಿನಗೆ ಕೇವಲ ಈ ಒಂದು ಕಿಕ್‌ನಲ್ಲಿ ಮಹಾರಥಿ ಆಗುವ ಅಗತ್ಯವಿದೆ" ಎಂದು ಹೇಳಿ ಅಲ್ಲಿಂದ ಮುಂದೆ ನಡೆದರು. ಓಕಾಯೋನಿಗೆ ಆಶ್ಚರ್ಯವಾಯಿತಾದರೂ, ಆತನಿಗೆ ತನ್ನ ಗುರುವಿನ ಮೇಲೆ ಪೂರ್ಣ ನಂಬಿಕೆಯಿತ್ತು. ಆತ ಮತ್ತೆ ಅಭ್ಯಾಸದಲ್ಲಿ ಮುಳುಗಿದನು.

ಸಮಯ ಉರುಳಿತು, ನೋಡನೋಡುತ್ತಿದ್ದಂತೆ ಎರಡು ವರ್ಷಗಳು ಕಳೆದು ಹೋದವು. ಆದರೆ ಓಕಾಯೋ ಇನ್ನೂ ಅದೇ ಒಂದು ಕಿಕ್ ಅನ್ನು ಅಭ್ಯಾಸ ಮಾಡುತ್ತಿದ್ದನು. ಮತ್ತೊಮ್ಮೆ ಓಕಾಯೋನಿಗೆ ಚಿಂತೆಯಾಗಿ ಗುರುಗಳ ಬಳಿ ಬಂದು, "ನಾನು ಇನ್ನೂ ಇದನ್ನೇ ಮಾಡುತ್ತಿರಬೇಕೇ? ಉಳಿದವರೆಲ್ಲಾ ಹೊಸ ಹೊಸ ತಂತ್ರಗಳಲ್ಲಿ ಪರಿಣಿತರಾಗುತ್ತಿದ್ದಾರೆ" ಎಂದನು.

ಗುರುಗಳು, "ನಿನಗೆ ನನ್ನ ಮೇಲೆ ನಂಬಿಕೆಯಿದ್ದರೆ, ಅಭ್ಯಾಸವನ್ನು ಮುಂದುವರಿಸು" ಎಂದರು. ಓಕಾಯೋ ಗುರುಗಳ ಆಜ್ಞೆಯನ್ನು ಪಾಲಿಸುತ್ತಾ, ಯಾವುದೇ ಪ್ರಶ್ನೆ ಕೇಳದೆ ಮುಂದಿನ 6 ವರ್ಷಗಳ ಕಾಲ ಅದೇ ಒಂದು ಕಿಕ್ ಅನ್ನು ನಿರಂತರವಾಗಿ ಅಭ್ಯಾಸ ಮಾಡಿದನು.

ಎಲ್ಲರೂ ಜೂಡೋ ಕಲಿಯಲು ಆರಂಭಿಸಿ ಎಂಟು ವರ್ಷಗಳಾಗಿದ್ದವು. ಒಂದು ದಿನ ಗುರುಗಳು ಎಲ್ಲಾ ಶಿಷ್ಯರನ್ನು ಕರೆದು ಹೀಗೆಂದರು, "ನಾನು ನಿಮಗೆ ನೀಡಬೇಕಾಗಿದ್ದ ಜ್ಞಾನವನ್ನು ನೀಡಿದ್ದೇನೆ. ಈಗ ಗುರುಕುಲದ ಸಂಪ್ರದಾಯದಂತೆ ಅತ್ಯುತ್ತಮ ಶಿಷ್ಯನನ್ನು ಆಯ್ಕೆ ಮಾಡಲು ಒಂದು ಸ್ಪರ್ಧೆಯನ್ನು ಏರ್ಪಡಿಸಲಾಗುವುದು. ಇದರಲ್ಲಿ ವಿಜಯಿಯಾಗುವ ಶಿಷ್ಯನಿಗೆ 'ಸೆನ್ಸೇಯ್' ಎಂಬ ಪದವಿ ನೀಡಿ ಗೌರವಿಸಲಾಗುವುದು."

ಸ್ಪರ್ಧೆ ಆರಂಭವಾಯಿತು. ಗುರುಗಳು ಓಕಾಯೋನನ್ನು ಆತನ ಮೊದಲ ಪಂದ್ಯಕ್ಕಾಗಿ ಕರೆದರು.

ಓಕಾಯೋ ಹೋರಾಡಲು ಪ್ರಾರಂಭಿಸಿದನು ಮತ್ತು ತನಗೇ ಆಶ್ಚರ್ಯವಾಗುವಂತೆ ಆತ ಮೊದಲ ಎರಡು ಪಂದ್ಯಗಳನ್ನು ಅತ್ಯಂತ ಸುಲಭವಾಗಿ ಗೆದ್ದುಕೊಂಡನು. ಮೂರನೇ ಪಂದ್ಯ ಸ್ವಲ್ಪ ಕಠಿಣವಾಗಿತ್ತು. ಆದರೆ ಸ್ವಲ್ಪ ಹೋರಾಟದ ನಂತರ, ಎದುರಾಳಿ ಕೆಲವು ಕ್ಷಣಗಳ ಕಾಲ ತನ್ನ ಗಮನವನ್ನು ಬೇರೆಡೆಗೆ ಸೆಳೆದನು. ಓಕಾಯೋನಿಗೆ ಬೇಕಾಗಿದ್ದೂ ಇದೇ ಅವಕಾಶವಾಗಿತ್ತು! ಆತ ತನ್ನ ಅಚೂಕಾದ ಕಿಕ್ ಅನ್ನು ಎದುರಾಳಿಗೆ ಬಾರಿಸಿ ಪಂದ್ಯವನ್ನು ತನ್ನದಾಗಿಸಿಕೊಂಡನು. ತನ್ನ ಯಶಸ್ಸಿನ ಆಶ್ಚರ್ಯದಲ್ಲೇ ಇದ್ದ ಓಕಾಯೋ ಫೈನಲ್ ಪಂದ್ಯಕ್ಕೆ ಲಗ್ಗೆ ಇಟ್ಟಿದ್ದನು.

ಈ ಬಾರಿಯ ಎದುರಾಳಿ ಮುಂಚಿನವರಿಗಿಂತ ಹೆಚ್ಚು ಶಕ್ತಿಶಾಲಿ, ಅನುಭವಿ ಮತ್ತು ಬೃಹತ್ ಕಾಯದವನಾಗಿದ್ದನು. ಆತನನ್ನು ನೋಡಿದರೆ ಓಕಾಯೋ ಆತನ ಮುಂದೆ ಒಂದು ನಿಮಿಷವೂ ನಿಲ್ಲಲಾರ ಎಂದು ಅನಿಸುತ್ತಿತ್ತು.

ಪಂದ್ಯ ಆರಂಭವಾಯಿತು. ಎದುರಾಳಿ ಓಕಾಯೋನ ಮೇಲೆ ಸವಾರಿ ಮಾಡುತ್ತಿದ್ದನು. ರೆಫ್ರಿ ಪಂದ್ಯವನ್ನು ನಿಲ್ಲಿಸಿ ಎದುರಾಳಿಯನ್ನೇ ವಿಜೇತ ಎಂದು ಘೋಷಿಸಲು ಮುಂದಾದರು. ಆದರೆ ತಕ್ಷಣವೇ ಗುರುಗಳು ಅವರನ್ನು ತಡೆದು, "ಬೇಡ, ಪಂದ್ಯ ಪೂರ್ತಿಯಾಗಿ ನಡೆಯಲಿ" ಎಂದರು.

ಪಂದ್ಯ ಮತ್ತೆ ಶುರುವಾಯಿತು. ಎದುರಾಳಿ ಅತಿಯಾದ ಆತ್ಮವಿಶ್ವಾಸದಿಂದ ಬೀಗುತ್ತಿದ್ದನು ಮತ್ತು ಓಕಾಯೋನನ್ನು ಕೀಳಾಗಿ ಅಂದಾಜಿಸುತ್ತಿದ್ದನು. ಇದೇ ಅಹಂಕಾರದಲ್ಲಿ ಆತ ಒಂದು ದೊಡ್ಡ ತಪ್ಪು ಮಾಡಿದನು; ತನ್ನ ರಕ್ಷಣಾತ್ಮಕ ಪಟ್ಟನ್ನು ಸಡಿಲಗೊಳಿಸಿದನು! ಓಕಾಯೋ ಇದರ ಲಾಭವನ್ನು ಪಡೆದು, ತಾನು ಎಂಟು ವರ್ಷಗಳಿಂದ ನಿರಂತರವಾಗಿ ಪ್ರಾಕ್ಟೀಸ್ ಮಾಡಿದ್ದ ಆ ಕಿಕ್ ಅನ್ನು ಇಡೀ ಶಕ್ತಿ ಮತ್ತು ನಿಖರತೆಯೊಂದಿಗೆ ಎದುರಾಳಿಗೆ ಬಾರಿಸಿ, ಆತನನ್ನು ನೆಲಸಮ ಮಾಡಿದನು. ಆ ಕಿಕ್‌ನಲ್ಲಿ ಎಷ್ಟೊಂದು ಶಕ್ತಿಯಿತ್ತೆಂದರೆ ಎದುರಾಳಿ ಅಲ್ಲೇ ಪ್ರಜ್ಞೆ ತಪ್ಪಿ ಬಿದ್ದನು ಮತ್ತು ಓಕಾಯೋನನ್ನು ವಿಜೇತನೆಂದು ಘೋಷಿಸಲಾಯಿತು.

ಪಂದ್ಯ ಗೆದ್ದ ನಂತರ ಓಕಾಯೋ ಗುರುಗಳ ಬಳಿ ಬಂದು ಕೇಳಿದನು, "ಸೆನ್ಸೇಯ್, ನಾನು ಕೇವಲ ಒಂದೇ ಒಂದು ಪಟ್ಟನ್ನು ಕಲಿತು ಈ ಇಡೀ ಸ್ಪರ್ಧೆಯನ್ನು ಹೇಗೆ ಗೆಲ್ಲಲು ಸಾಧ್ಯವಾಯಿತು?"

ಗುರುಗಳು ಮುಗುಳ್ನಗುತ್ತಾ ಉತ್ತರಿಸಿದರು, "ನೀನು ಎರಡು ಕಾರಣಗಳಿಗಾಗಿ ಗೆದ್ದಿದ್ದೀಯಾ. ಮೊದಲನೆಯದು, ನೀನು ಜೂಡೋದಲ್ಲೇ ಅತ್ಯಂತ ಕಠಿಣವಾದ ಕಿಕ್ ಮೇಲೆ ಅದೆಂತಹ ಹಿಡಿತ ಸಾಧಿಸಿದ್ದೀಯೆ ಎಂದರೆ, ಈ ಪ್ರಪಂಚದಲ್ಲಿ ಬೇರಾರೂ ಆ ಕಿಕ್ ಅನ್ನು ಇಷ್ಟು ಪರಿಣಾಮಕಾರಿಯಾಗಿ ಹೊಡೆಯಲು ಸಾಧ್ಯವಿಲ್ಲ. ಎರಡನೆಯದಾಗಿ, ಈ ಕಿಕ್‌ನಿಂದ ಬಚಾವಾಗಲು (ತಪ್ಪಿಸಿಕೊಳ್ಳಲು) ಜೂಡೋದಲ್ಲಿ ಒಂದೇ ಒಂದು ಉಪಾಯವಿದೆ; ಅದೇನೆಂದರೆ ಎದುರಾಳಿಯ ಎಡಗೈಯನ್ನು ಹಿಡಿದು ಆತನನ್ನು ನೆಲಕ್ಕೆ ಉರುಳಿಸುವುದು!"

ಓಕಾಯೋನಿಗೆ ಈಗ ಎಲ್ಲವೂ ಅರ್ಥವಾಗಿತ್ತು. ಇಂದು ಆತನ ಅತ್ಯಂತ ದೊಡ್ಡ ದೌರ್ಬಲ್ಯವೇ ಆತನ ಅತ್ಯಂತ ದೊಡ್ಡ ಶಕ್ತಿಯಾಗಿ ಮಾರ್ಪಟ್ಟಿತ್ತು!

ಸ್ನೇಹಿತರೇ, ಮನುಷ್ಯರಾಗಿ ಹುಟ್ಟುವುದೆಂದರೆ ನಾವ್ಯಾರೂ ಪರಿಪೂರ್ಣರಲ್ಲ (Imperfect) ಎಂದರ್ಥ. ಅಪರಿಪೂರ್ಣತೆ ಅಥವಾ ಕೊರತೆಗಳು ತಾನಾಗಿಯೇ ಕೆಟ್ಟದ್ದಲ್ಲ; ಆದರೆ ನಾವು ಅದನ್ನು ಹೇಗೆ ಎದುರಿಸುತ್ತೇವೆ ಎಂಬುದು ಮುಖ್ಯ. ಓಕಾಯೋ ಬಯಸಿದ್ದರೆ ತನಗೆ ಎಡಗೈ ಇಲ್ಲ ಎಂದು ಅಳುತ್ತಾ ಒಬ್ಬ ಅಂಗವಿಕಲನಂತೆ ಇಡೀ ಜೀವನವನ್ನು ಕಳೆಯಬಹುದಿತ್ತು. ಆದರೆ ಆತ ಆ ಕಾರಣಕ್ಕಾಗಿ ಎಂದಿಗೂ ತನ್ನನ್ನು ಕೀಳಾಗಿ ಕಾಣಲಿಲ್ಲ. ತನ್ನ ಕನಸನ್ನು ನನಸು ಮಾಡಿಕೊಳ್ಳಬೇಕೆಂಬ ದೃಢ ಇಚ್ಛಾಶಕ್ತಿ ಆತನಲ್ಲಿತ್ತು. ನೆನಪಿಡಿ, ಯಾರಲ್ಲಿ ಅಂತಹ ತೀವ್ರವಾದ ಆಸೆಯಿರುತ್ತದೆಯೋ, ದೇವ ಖಂಡಿತವಾಗಿ ಅವರಿಗೆ ಯಾರಾದರೂ ಒಬ್ಬ ಗುರುವಿನ ರೂಪದಲ್ಲಿ ಸಹಾಯ ಕಳುಹಿಸುತ್ತಾನೆ. ಅಂತಹ ಗುರು ನಮ್ಮ ಅತಿ ದೊಡ್ಡ ದೌರ್ಬಲ್ಯವನ್ನೇ ನಮ್ಮ ಅತಿ ದೊಡ್ಡ ಶಕ್ತಿಯನ್ನಾಗಿ ಮಾರ್ಪಡಿಸಿ ನಮ್ಮ ಕನಸುಗಳನ್ನು ನನಸಾಗಿಸಬಲ್ಲರು.❑

ವಿಶ್ವ ಅಲ್ಝೈಮರ್ ದಿನ (World Alzheimer's Day) ಸೆಪ್ಟೆಂಬರ್-21



ಲೇಖಕರು : ರಮ್ಯಾ ಆರ್.ಎಸ್.
ಚಿಕಿತ್ಸಕಿ
ಟ್ರಾಮಾ-ಇನ್‌ಫಾರ್ಮ್ಡ್ ಪ್ರಾಕ್ಟಿಷನರ್
ಇಮೇಲ್ : rrs2397@gmail.com

ವಿಶ್ವ ಅಲ್ಝೈಮರ್ ದಿನದಂದು ನಾವು ಸಾಮಾನ್ಯವಾಗಿ ನೆನಪಿನ ನಷ್ಟದ ಬಗ್ಗೆ ಮಾತನಾಡುತ್ತೇವೆ-ಹೆಸರುಗಳು ಮರೆತುಹೋಗುವುದು, ಪರಿಚಿತ ಸ್ಥಳಗಳು ಅಪರಿಚಿತವಾಗುವುದು, ನಡೆದ ಸಂಭಾಷಣೆಗಳು ಹಾಗೂ ಬದುಕಿನ ಅಮೂಲ್ಯ ಕ್ಷಣಗಳು ನೆನಪಿನಿಂದ ಜಾರಿಹೋಗುವುದು ಇವೆಲ್ಲವೂ ಮರೆವಿನ ರೋಗದ ಪ್ಯಾಕೇಜ್‌ನೊಂದಿಗೆ ಬರುತ್ತವೆ. ಆದರೆ ಚಿಕಿತ್ಸಕರ ದೃಷ್ಟಿಯಲ್ಲಿ ಅಲ್ಝೈಮರ್ ಎಂದರೆ ಕೇವಲ ನೆನಪಿನ ನಷ್ಟವಲ್ಲ. ಅದು ವ್ಯಕ್ತಿತ್ವ, ಸಂಬಂಧಗಳು, ನೋವು, ಹೊಂದಾಣಿಕೆ ಮತ್ತು ಮಾನವೀಯ ಸಂಪರ್ಕದ ಕಥೆಯೂ ಹೌದು.

ಯಾರಿಗಾದರೂ ಅಲ್ಝೈಮರ್ ಉಂಟಾದಾಗ, ಅದರ ಪರಿಣಾಮವನ್ನು ಅನುಭವಿಸುವ ವ್ಯಕ್ತಿಗೆ ಮಾತ್ರವಲ್ಲ, ಅವರನ್ನು ಪ್ರೀತಿಸುವ ಪ್ರತಿಯೊಬ್ಬರಿಗೂ ಅದು ಭಯ ಮತ್ತು ಗೊಂದಲವನ್ನು ಉಂಟುಮಾಡಬಹುದು. ದೈಹಿಕವಾಗಿ ನಮ್ಮೊಂದಿಗೇ ಇರುವ ವ್ಯಕ್ತಿಯನ್ನೇ ನಿಧಾನವಾಗಿ ಕಳೆದುಕೊಳ್ಳುತ್ತಿರುವ ಅನುಭವ ಕುಟುಂಬದವರಿಗೆ ಉಂಟಾಗಬಹುದು. ಜೀವನ ಸಂಗಾತಿಗೆ ಹಿಂದೆ ಹಂಚಿಕೊಂಡ ಮಾತುಕತೆಗಳು ನೆನಪಾಗಬಹುದು. ಬೆಳೆದ ಮಗುವೊಂದು ಕ್ರಮೇಣ ತಂದೆ-ತಾಯಿಯ ಆರೈಕೆದಾರನ ಪಾತ್ರವನ್ನು ವಹಿಸಿಕೊಳ್ಳಬೇಕಾಗಬಹುದು. ಈ ಎಲ್ಲ ಭಾವನೆಗಳನ್ನೂ ಗುರುತಿಸಿ, ಒಪ್ಪಿಕೊಳ್ಳುವುದು ಅಗತ್ಯ.

ವ್ಯಕ್ತಿ ಮೊದಲು, ರೋಗ ನಿರ್ಣಯದ ನಂತರ ಕುಟುಂಬಗಳು ಸದಾ ನೆನಪಿನಲ್ಲಿಟ್ಟುಕೊಳ್ಳಬೇಕಾದ ಅತ್ಯಂತ ಮುಖ್ಯವಾದ ಸಂಗತಿಯೆಂದರೆ

ಅಲ್ಝೈಮರ್‌ನ ರೋಗನಿರ್ಣಯ, ರೋಗ ಪತ್ತೆಯಾಗುವಿಕೆ ವ್ಯಕ್ತಿಯ ಅಸ್ತಿತ್ವವನ್ನಾಗಲಿ, ವ್ಯಕ್ತಿತ್ವವನ್ನಾಗಲಿ ಅಳಿಸಿಹಾಕುವುದಿಲ್ಲ. ಅಲ್ಝೈಮರ್‌ನೊಂದಿಗೆ ಬದುಕುತ್ತಿರುವ ವ್ಯಕ್ತಿಗೆ ನಿಮ್ಮ ಹೆಸರು ನೆನಪಿರದಿರಬಹುದು. ಆದರೆ ನಿಮ್ಮ ಧ್ವನಿಯಲ್ಲಿರುವ ಆತ್ಮೀಯತೆಯನ್ನು ಅವರು ಇನ್ನೂ ಅನುಭವಿಸಬಹುದು. ನೀವು ಹೇಳಿದ ಮಾತು ಅವರಿಗೆ ನೆನಪಿನಲ್ಲಿ ಉಳಿಯದಿರಬಹುದು. ಆದರೆ ಅವರ ಪಕ್ಕದಲ್ಲಿ ಕುಳಿತುಕೊಂಡಾಗ ದೊರೆಯುವ ಸಾಂತ್ವನವನ್ನು ಅವರು ಅನುಭವಿಸಬಹುದು. ಪರಿಚಿತ ಮುಖವನ್ನು ಗುರುತಿಸಲು ಅವರಿಗೆ ಕಷ್ಟವಾಗಬಹುದು; ಆದರೆ ಅವರ ಬದುಕಿನ ಯಾವುದೋ ಹಿಂದಿನ ಅಧ್ಯಾಯಕ್ಕೆ ಸಂಬಂಧಿಸಿದ ಸಂಗೀತವನ್ನು ಕೇಳಿದಾಗ ಅವರು ಅದಕ್ಕೆ ಸ್ಪಂದಿಸಬಹುದು.

"ನಾನು ಇದನ್ನು ಈಗಾಗಲೇ ಹೇಳಿದ್ದೇನೆ" ಅಥವಾ "ನಿನಗೆ ನೆನಪಿಲ್ಲವೇ?" ಎಂದು ಪದೇಪದೇ ಸರಿಪಡಿಸುವ ಬದಲು, ಕೆಲವೊಮ್ಮೆ ತಿದ್ದುವುದಕ್ಕಿಂತ ಭರವಸೆ ಮತ್ತು ಆತ್ಮೀಯತೆಯನ್ನು ನೀಡುವುದನ್ನು ಆಯ್ಕೆ ಮಾಡಬಹುದು. ಇದರ ಅರ್ಥ ರೋಗವನ್ನು ನಿರ್ಲಕ್ಷಿಸುವುದಲ್ಲ. ವ್ಯಕ್ತಿಯ ಘನತೆ ಮತ್ತು ಗೌರವವನ್ನು ಕಾಪಾಡುವುದೂ ಆರೈಕೆಯ ಒಂದು ಭಾಗ ಎಂಬುದನ್ನು ಅರಿತುಕೊಳ್ಳುವುದು.

ಆರೈಕೆ ಮಾಡುವವರಿಗೂ ಆರೈಕೆ ಬೇಕು

ಆರೈಕೆ ಮಾಡುವುದು ಆಳವಾದ ಪ್ರೀತಿಯ ಅಭಿವ್ಯಕ್ತಿಯಾಗಿರಬಹುದು. ಆದರೆ ಪ್ರೀತಿ ಮಾತ್ರ ಅದನ್ನು ಸುಲಭವಾಗಿಸುವುದಿಲ್ಲ. ಆರೈಕೆದಾರರು ದಣಿವು, ಕಿರಿಕಿರಿ, ಅಪರಾಧ ಪ್ರಜ್ಞೆ, ಒಂಟಿತನ ಮತ್ತು ದುಃಖವನ್ನು ಅನುಭವಿಸಬಹುದು. ಸ್ವಲ್ಪ ವಿಶ್ರಾಂತಿ ಬೇಕೆಂದು ಅನಿಸಿದರೂ, ತಾವು ಅಸಹನೆಯಿಂದ ವರ್ತಿಸಿದರೂ, ಕೆಲವೊಮ್ಮೆ ಅವರು ತಮ್ಮನ್ನೇ ತಪ್ಪಿತಸ್ಥರೆಂದು ಭಾವಿಸಬಹುದು.

ಕುಟುಂಬಗಳಿಗೆ ನಾನು ಆಗಾಗ ನೆನಪಿಸುವ ಮಾತೆಂದರೆ-ಆರೈಕೆದಾರರ ಆರೋಗ್ಯ ಮತ್ತು ನೆಮ್ಮದಿಯ ಬಗ್ಗೆ ಕಾಳಜಿ ವಹಿಸುವುದು ಸ್ವಾರ್ಥವಲ್ಲ; ಅದು ನಿರಂತರ ಮತ್ತು ಸಮರ್ಥ ಆರೈಕೆಯ ಒಂದು ಭಾಗವಾಗಿದೆ. ಸಹಾಯ ಕೇಳುವುದು, ಸ್ವಲ್ಪ ವಿರಾಮ ತೆಗೆದುಕೊಳ್ಳುವುದು, ತಜ್ಞರೊಂದಿಗೆ ಮಾತನಾಡುವುದು ಅಥವಾ ನಿಮಗಾಗಿ ಸ್ವಲ್ಪ ಸಮಯ ಮೀಸಲಿಡುವುದು ಅಗತ್ಯವೂ ಹೌದು- ಎಂದರೆ ನಿಮ್ಮ ಪ್ರೀತಿ ಕಡಿಮೆಯಾಗಿದೆ ಎಂದರ್ಥವಲ್ಲ. ಎಲ್ಲ ಜವಾಬ್ದಾರಿಯನ್ನು ಒಬ್ಬರೇ ಹೊತ್ತುಕೊಂಡು ಸಾಗುವುದಕ್ಕೆ ಯಾವುದೇ ಬಹುಮಾನವಿಲ್ಲ. ಸೇವಾ ಮನೋಭಾವ, ಸಾರ್ಥಕತೆಯೇ ಬದುಕನ್ನು ಸಹ್ಯಗೊಳಿಸುತ್ತದೆ.

ಸಂಪರ್ಕಕ್ಕೆ ಯಾವಾಗಲೂ ಮಾತುಗಳೇ ಬೇಕಿಲ್ಲ. ಬೌದ್ಧಿಕ ಸಾಮರ್ಥ್ಯಗಳು ಬದಲಾಗುತ್ತಿದ್ದಂತೆ ನಾವು ಸಂಭಾಷಣೆಗೆ ಹೆಚ್ಚು ಮಹತ್ವ ನೀಡುತ್ತೇವೆ. ಆದರೆ ಸಂಪರ್ಕ ಹಲವು ರೂಪಗಳಲ್ಲಿ ಸಾಧ್ಯ.

ಪರಿಚಿತ ಹಾಡೊಂದನ್ನು ಕೇಳಿಸುವುದು, ಹಳೆಯ ಛಾಯಾಚಿತ್ರಗಳನ್ನು ಒಟ್ಟಿಗೆ ನೋಡುವುದು, ಒಂದೇ ಸಮಯಕ್ಕೆ ಊಟ ಮಾಡುವುದು, ಪರಿಚಿತ ದಿನಚರಿಯನ್ನು ಮುಂದುವರಿಸುವುದು ಅಥವಾ ಏನನ್ನೂ ಮಾತನಾಡದೆ ಪಕ್ಕದಲ್ಲಿ ಸುಮ್ಮನೆ ಕುಳಿತುಕೊಳ್ಳುವುದೂ ಒಂದು ರೀತಿಯ ಸಂಪರ್ಕವೇ.

ಕ್ರಮೇಣ ಪ್ರಶ್ನೆಯೂ ಬದಲಾಗುತ್ತದೆ. "ಅವರಿಗೆ ಹೇಗೆ ನೆನಪಿಸಲಿ?" ಎಂಬುದರಿಂದ "ಈ ಕ್ಷಣದಲ್ಲಿ ಅವರಿಗೆ ಸುರಕ್ಷಿತ, ಗೌರವಯುತ ಮತ್ತು ಆತ್ಮೀಯವಾದ ಅನುಭವವನ್ನು ಹೇಗೆ ನೀಡಲಿ?" ಎಂಬುದೇ ಪ್ರಧಾನ ಕಾಳಜಿಯಾಗಿರುತ್ತದೆ. ಈ ಬದಲಾವಣೆ ಅತ್ಯಂತ ಚಿಕಿತ್ಸಾತ್ಮಕವಾಗಿರಬಹುದು.

ಈ ವಿಶ್ವ ಅಲ್ಝೈಮರ್ ದಿನದಂದು, ರೋಗ ನಿರ್ಣಯದ ಆಚೆಗೆ ನೋಡೋಣ. ಮೊದಲು ವ್ಯಕ್ತಿಯನ್ನು ನೋಡೋಣ.

ಈ ವಿಶ್ವ ಅಲ್ಝೈಮರ್ ದಿನದಂದು, ರೋಗವನ್ನು ನೋಡದೇ ರೋಗದೊಳಗಿನ ವ್ಯಕ್ತಿಯನ್ನು ನೋಡೋಣ; ನೆನಪುಗಳಾಚೆಗೆ ಅವರ ಅಸ್ತಿತ್ವವನ್ನು ಗುರುತಿಸೋಣ.

ಅಲ್ಝೈಮರ್ ಒಬ್ಬ ವ್ಯಕ್ತಿಯ ನೆನಪುಗಳನ್ನು ನಿಧಾನವಾಗಿ ಮಸುಕಾಗಿಸಬಹುದು. ಆದರೆ ಅವರ ಬದುಕಿನ ಮೌಲ್ಯವನ್ನಾಗಲಿ, ಘನತೆಯನ್ನಾಗಲಿ, ಅವರು ಹಂಚಿಕೊಂಡ ಪ್ರೀತಿಯ ಅರ್ಥವನ್ನಾಗಲಿ ಎಂದಿಗೂ ಅಳಿಸಿಹಾಕುವುದಿಲ್ಲ. ನೆನಪುಗಳು ಮಸುಕಾದರೂ ವ್ಯಕ್ತಿ ಮಸುಕಾಗುವುದಿಲ್ಲ. ಹೆಸರುಗಳು ಮರೆತು ಹೋದರೂ ಸಂಬಂಧಗಳು ಅರ್ಥ ಕಳೆದುಕೊಳ್ಳುವುದಿಲ್ಲ. ಅಲ್ಝೈಮರ್ ನೆನಪನ್ನು ಕಸಿದುಕೊಳ್ಳಬಹುದು; ಆದರೆ ಬದುಕಿನ ಮೌಲ್ಯವನ್ನೂ, ಮಾನವೀಯ ಘನತೆಯನ್ನೂ ಕಸಿದುಕೊಳ್ಳಲು ಸಾಧ್ಯವಿಲ್ಲ. ಏಕೆಂದರೆ ಅಲ್ಝೈಮರ್ ವ್ಯಕ್ತಿಯು ತನ್ನ ಬದುಕನ್ನು ನೆನಪಿಸಿಕೊಳ್ಳುವ ರೀತಿಯನ್ನು ಬದಲಾಯಿಸಬಹುದು. ಆದರೆ ಆ ಬದುಕಿನ ಮೌಲ್ಯವನ್ನು ಎಂದಿಗೂ ಕಡಿಮೆ ಮಾಡುವುದಿಲ್ಲ. ನೆನಪುಗಳು ಮಸುಕಾಗತೊಡಗಿದಾಗ, ಸಂಬಂಧವೇ ಪ್ರೀತಿಯನ್ನು ನೆನಪಿನಲ್ಲಿಟ್ಟುಕೊಳ್ಳುವ ಸ್ಥಳವಾಗಬಹುದು.

ಪ್ರತಿಯೊಂದು ಜೀವವೂ ಅಮೂಲ್ಯ. ಪ್ರತಿಯೊಂದು ಬದುಕಿನ ಕಥೆಯೂ ಇನ್ನೊಂದು ಅಧ್ಯಾಯಕ್ಕೆ ಅರ್ಹವಾಗಿದೆ. ಮತ್ತು ಭರವಸೆ-ಯಾರೋ ಒಬ್ಬರು ನಮ್ಮನ್ನು ನಿಜವಾಗಿಯೂ ಅರ್ಥಮಾಡಿಕೊಳ್ಳಲು ಸಿದ್ಧರಾಗಿದ್ದಾರೆ ಎಂಬ ಅರಿವಿನಿಂದಲೇ ಆರಂಭವಾಗುತ್ತದೆ.❑

ದೆಹಲಿ ಪೋಲಿಸ್ ಇಲಾಖೆಯಲ್ಲಿ ಸೇವೆ ಸಲ್ಲಿಸಿ ಇದೀಗ ಸೇವಾ ನಿವೃತ್ತರಾಗಿ ತಾಯ್ನಾಡಿಗೆ ತೆರಳುತ್ತಿರುವ ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಶ್ರೀ ಪೀರಪ್ಪ ದಂಪತಿಗಳನ್ನು ದಿನಾಂಕ 01.09.2026 ರಂದು ಸಂಘದ ಪರವಾಗಿ ಆತ್ಮೀಯವಾಗಿ ಅಭಿನಂದಿಸಿ ಬೀಳ್ಕೊಡಲಾಯಿತು. ಇದೇ ಸಂದರ್ಭದಲ್ಲಿ ಜಂಟಿ ಕಾರ್ಯದರ್ಶಿಗಳಾದ ಸಂತೋಷ ಜಿ., ಶ್ರೀಮತಿ ಅಶ್ವಿನಿ ಬಿ.ಎಸ್. ಕಾರ್ಯಕಾರಿ ಸಮಿತಿಯ ಸದಸ್ಯರುಗಳಾದ ಶ್ರೀಮತಿ ಪೂಜಾ ಪಿ. ರಾವ್ ಹಾಗೂ ಶಿವಪ್ಪ ಎಂ. ಅವರು ಉಪಸ್ಥಿತರಿದ್ದರು.

ಆನಂದ್ ಶೆಣೈಗೆ ಪ್ರತಿಷ್ಠಿತ 'ಇಗ್ನ್ಯಾಟ್ಜ್' (IGNATZ) ಪ್ರಶಸ್ತಿ

ದೆಹಲಿ ಕರ್ನಾಟಕ ಸಂಘದ ಆಜೀವ ಸದಸ್ಯರಾದ ಬಸ್ತಿ ದಿನೇಶ್ ಶೆಣೈ ಹಾಗೂ ಶೋಭಾ ಶೆಣೈ ಅವರ ಪುತ್ರ ಆನಂದ್ ಶೆಣೈ, ತಾವೇ ಪ್ರಕಟಿಸಿರುವ ZOO #5 ಕಾಮಿಕ್ ಪುಸ್ತಕಕ್ಕಾಗಿ Outstanding Comic ವಿಭಾಗದಲ್ಲಿ ಪ್ರತಿಷ್ಠಿತ 'ಇಗ್ನ್ಯಾಟ್ಜ್' ಪ್ರಶಸ್ತಿಯನ್ನು ಗೆದ್ದಿದ್ದಾರೆ.

ಅಮೆರಿಕದಲ್ಲಿ ಕಳೆದ ಸುಮಾರು ಮೂರು ದಶಕಗಳಿಂದ ನೀಡಲಾಗುತ್ತಿರುವ ಇಗ್ನ್ಯಾಟ್ಜ್ ಪ್ರಶಸ್ತಿಗಳು, ಸ್ವತಂತ್ರ ಹಾಗೂ ಪರ್ಯಾಯ ಕಾಮಿಕ್ ಕ್ಷೇತ್ರದಲ್ಲಿ ಗಮನಾರ್ಹ ಸಾಧನೆ ಮಾಡಿದ ಕಲಾವಿದರನ್ನು ಗುರುತಿಸುತ್ತವೆ. ವಿಶ್ವದಾದ್ಯಂತದ ಕಲಾವಿದರು ಈ ಪ್ರಶಸ್ತಿಗೆ ತಮ್ಮ ಕೃತಿಗಳನ್ನು ಸಲ್ಲಿಸುತ್ತಾರೆ. ಸ್ವತಂತ್ರ ಕಾಮಿಕ್ ಕ್ಷೇತ್ರದ ಅತ್ಯಂತ ಪ್ರತಿಷ್ಠಿತ ಗೌರವಗಳಲ್ಲಿ ಒಂದೆಂದು ಪರಿಗಣಿಸಲ್ಪಡುವ ಈ ಪ್ರಶಸ್ತಿಗಳನ್ನು ಪ್ರತಿವರ್ಷ ಅಮೆರಿಕದಲ್ಲಿ ನಡೆಯುವ Small Press Expo (SPX) ಸಂದರ್ಭದಲ್ಲಿ ಪ್ರದಾನ ಮಾಡಲಾಗುತ್ತದೆ.

ಇದೇ ಸೆಪ್ಟೆಂಬರ್ 13, 2026 ರಂದು ಆನಂದ್ ಪರವಾಗಿ, ಅಮೆರಿಕದ ಅವರ ಪ್ರಕಾಶಕರಾದ ಬಬಲ್ಸ್ ಪಬ್ಲಿಷಿಂಗ್‌ನ ಬ್ರಿಯಾನ್ ಬೇನ್ಸ್ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಆನಂದ್ ಅವರ ಕಲಾ ಪಯಣ

ಆನಂದ್ ತಮ್ಮ ಏಳನೇ ವಯಸ್ಸಿನಲ್ಲೇ ಕಲೆಯತ್ತ ಆಸಕ್ತಿ ಬೆಳೆಸಿಕೊಂಡರು. ಮಣ್ಣಿನಿಂದ ಗೊಂಬೆಗಳನ್ನು ತಯಾರಿಸಿ, ಅವುಗಳಿಗೆ ಚಲನೆ ನೀಡಿ, ಸಣ್ಣ ಸಣ್ಣ ಸ್ಟಾಪ್-ಮೋಷನ್ ಚಿತ್ರಗಳನ್ನು, ಅಂದರೆ ಕ್ಲೇಮೇಷನ್ ಚಿತ್ರಗಳನ್ನು ತಯಾರಿಸುವ ಮೂಲಕ ತಮ್ಮ ಕಲಾ ಪಯಣವನ್ನು ಆರಂಭಿಸಿದರು.

ಅವರ ಪ್ರತಿಭೆಗೆ ಬಾಲ್ಯದಲ್ಲೇ ಮನ್ನಣೆ ದೊರೆಯಿತು. 2008ರಲ್ಲಿ, ತಮ್ಮ 12ನೇ ವಯಸ್ಸಿನಲ್ಲಿ, Artists ವಿಭಾಗದಲ್ಲಿ ಪ್ರತಿಷ್ಠಿತ Pogo Amazing Kids Award ಪ್ರಶಸ್ತಿಯನ್ನು ಅವರು ಗೆದ್ದರು. ಈ ಪ್ರಶಸ್ತಿ ಕಲೆಯನ್ನು ತಮ್ಮ ವೃತ್ತಿಯನ್ನಾಗಿ ಆಯ್ಕೆ ಮಾಡಿಕೊಳ್ಳುವ ಆತ್ಮವಿಶ್ವಾಸವನ್ನು ಅವರಿಗೆ ನೀಡಿತು. ಆ ನಿರ್ಧಾರಕ್ಕೆ ಅವರ ತಂದೆ-ತಾಯಿ ಇಬ್ಬರೂ ಸಂಪೂರ್ಣ ಪ್ರೋತ್ಸಾಹ ನೀಡಿದರು.

ವಸಂತಕುಂಜದ ಪೂರ್ಣ ಪ್ರಜ್ಞಾ ಶಾಲೆಯಲ್ಲಿ 12ನೇ ತರಗತಿ ಪೂರ್ಣಗೊಳಿಸಿದ ನಂತರ, ಬೆಂಗಳೂರಿನ ಚಿತ್ರಕಲಾ ಪರಿಷತ್ ಸೇರಿ 2014ರಿಂದ 2018ರವರೆಗೆ ಲಲಿತಕಲೆಯಲ್ಲಿ ಪದವಿ ಪಡೆದರು. ಶಿಲ್ಪಕಲೆಯನ್ನು ತಮ್ಮ ವಿಶೇಷ ವಿಷಯವನ್ನಾಗಿ ಆಯ್ಕೆ ಮಾಡಿಕೊಂಡಿದ್ದರೂ, ಕ್ರಮೇಣ ಕಾಮಿಕ್ ಕಲೆಯತ್ತ ಅವರ ಆಸಕ್ತಿ ಹೆಚ್ಚಾಯಿತು.

ಕಲಾ ಕಾಲೇಜಿನ ಮೂರನೇ ವರ್ಷದಲ್ಲಿದ್ದಾಗಲೇ ಆನಂದ್ ತಮ್ಮದೇ ಕಥೆಗಳ ಜೊತೆಗೆ ಇತರ ಕಲಾವಿದರ ಕೃತಿಗಳನ್ನು ಒಳಗೊಂಡ ಕಾಮಿಕ್

ಪುಸ್ತಕಗಳನ್ನು ಪ್ರಕಟಿಸಲು ಆರಂಭಿಸಿದರು. ತಮ್ಮ ಸಹಪಾಠಿ ಮೋಹಿತ್ ಮಹತೋ ಅವರೊಂದಿಗೆ ಸೇರಿ Pagal Canvas ಎಂಬ ಸಾಮೂಹಿಕ ಪ್ರಕಟಣೆಯನ್ನು ಆರಂಭಿಸಿದರು. ಇದರ ಮೂಲಕ ಸಾಮಾನ್ಯವಾಗಿ ಝೀನ್‌ಗಳು (Zines) ಎಂದು ಕರೆಯಲಾಗುವ ಇಪ್ಪತ್ತಕ್ಕೂ ಹೆಚ್ಚು ಸಣ್ಣ ಕಾಮಿಕ್ ಪುಸ್ತಕಗಳನ್ನು ಪ್ರಕಟಿಸಲಾಯಿತು.

ಕಾಲೇಜು ಶಿಕ್ಷಣ ಪೂರ್ಣಗೊಳಿಸಿದ ನಂತರವೂ ಆನಂದ್ ಕಾಮಿಕ್ ಕಲೆಯೊಂದಿಗೆ ತಮ್ಮ ಪ್ರಯೋಗಗಳನ್ನು ಮುಂದುವರಿಸಿದರು. ಕಾಮಿಕ್ ಸ್ಟ್ರಿಪ್‌ಗಳನ್ನು ರಚಿಸುವುದರ ಜೊತೆಗೆ ವಿವಿಧ ಕಲಾ ಹಾಗೂ ಕಾಮಿಕ್ ನಿಯತಕಾಲಿಕೆಗಳಿಗೆ ತಮ್ಮ ಕೃತಿಗಳನ್ನು ನೀಡುತ್ತಾ ಬಂದರು. 2020ರಲ್ಲಿ ಅವರು ತಮ್ಮ ಮೊದಲ ಸ್ವಯಂ-ಪ್ರಕಟಿತ ಪುಸ್ತಕ ZOO #1 ಅನ್ನು ಹೊರತಂದರು. ಪುಸ್ತಕಕ್ಕೆ ದೊರೆತ ಉತ್ತಮ ಪ್ರತಿಕ್ರಿಯೆ ಅವರನ್ನು ಈ ಸರಣಿಯನ್ನು ಮುಂದುವರಿಸಲು ಪ್ರೇರೇಪಿಸಿತು. ಮುಂದಿನ ಐದು ವರ್ಷಗಳಲ್ಲಿ ಅವರು ಇನ್ನೂ ನಾಲ್ಕು ಆವೃತ್ತಿಗಳನ್ನು ಪ್ರಕಟಿಸಿದರು. ಇದೀಗ ಈ ಸರಣಿಯ ಐದನೇ ಪುಸ್ತಕವಾದ ZOO #5 ಅವರಿಗೆ ಪ್ರತಿಷ್ಠಿತ ಇಗ್ನ್ಯಾಟ್ಜ್ ಪ್ರಶಸ್ತಿಯನ್ನು ತಂದುಕೊಟ್ಟಿದೆ.

ಆನಂದ್ ಅವರ ಕಲಾ ಪಯಣ ಭಾರತವನ್ನು ಮೀರಿ ಅಂತಾರಾಷ್ಟ್ರೀಯ ಮಟ್ಟಕ್ಕೂ ವಿಸ್ತರಿಸಿದೆ. 2019ರಲ್ಲಿ ಸ್ವಿಟ್ಜರ್‌ಲ್ಯಾಂಡ್‌ನ ಲುಸೆರ್ನ್‌ನಲ್ಲಿ ನಡೆದ Fumetto Comic Festivalನಲ್ಲಿ ಭಾಗವಹಿಸಲು ಅವರಿಗೆ ಆಹ್ವಾನ ನೀಡಲಾಗಿತ್ತು. 2023ರಲ್ಲಿ ಅಮೆರಿಕದ ಸಿಯಾಟಲ್‌ನಲ್ಲಿ ನಡೆದ Short Run Festival ನಲ್ಲಿ Special Artist ಆಗಿ ಭಾಗವಹಿಸಲು ಆಹ್ವಾನಿಸಲಾಯಿತು.

ಅವರ ಕೃತಿಗಳು ಅಂತಾರಾಷ್ಟ್ರೀಯವಾಗಿಯೂ ಪ್ರಕಟಗೊಂಡಿವೆ. ಅವರ ಕಾಮಿಕ್ ಕಥೆಗಳ ಸಂಕಲನ ಜರ್ಮನಿ, ಲಾಟ್ವಿಯಾ ಹಾಗೂ ಅಮೆರಿಕದಲ್ಲಿ ಪ್ರಕಟಗೊಂಡಿದೆ. ಅಮೆರಿಕದ ಪ್ರತಿಷ್ಠಿತ ವ್ಯವಹಾರ ನಿಯತಕಾಲಿಕೆ Bloomberg Businessweek ನಲ್ಲಿಯೂ ಅವರ ಕೃತಿಗಳು ಪ್ರಕಟವಾಗಿವೆ.

ಏಳನೇ ವಯಸ್ಸಿನಲ್ಲಿ ಮಣ್ಣಿನ ಗೊಂಬೆಗಳಿಗೆ ಜೀವ ತುಂಬಿ ಸಣ್ಣ ಅನಿಮೇಷನ್ ಚಿತ್ರಗಳನ್ನು ಮಾಡುತ್ತಿದ್ದ ಬಾಲಕನಿಂದ, ಸ್ವತಂತ್ರವಾಗಿ ಪ್ರಕಟಿಸಿದ ಕಾಮಿಕ್ ಕೃತಿಗಾಗಿ ಅಂತಾರಾಷ್ಟ್ರೀಯ ಪ್ರಶಸ್ತಿ ಗೆದ್ದ ಕಲಾವಿದನಾಗುವವರೆಗಿನ ಆನಂದ್ ಅವರ ಪಯಣವು ಕಲೆ ಮತ್ತು ಕಥೆ ಹೇಳುವಿಕೆಯ ಮೇಲಿನ ಅವರ ನಿರಂತರ ಆಸಕ್ತಿ ಹಾಗೂ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ. ಆನಂದ್ ಅವರಿಗೆ ಉಜ್ವಲ ಭವಿಷ್ಯ ಹಾಗೂ ಕಲಾ ಕ್ಷೇತ್ರದಲ್ಲಿ ಇನ್ನಷ್ಟು ಯಶಸ್ಸು ದೊರೆಯಲಿ ಎಂದು ಅಭಿಮತ ಹಾರೈಸುತ್ತದೆ. ❑

ಚಿದಂಬರರಾವ್ ಜಂಬೆ ಅವರಿಗೆ ಅಂತಿಮ ನಮನಗಳು:



ರಂಗಭೂಮಿಯ ಬಹುದೊಡ್ಡ ಪ್ರತಿಭೆಯಾಗಿದ್ದ ಶ್ರೀ ಚಿದಂಬರರಾವ್ ಜಂಬೆ (1949–2026) 12 ಸೆಪ್ಟೆಂಬರ್ ರಂದು ಇಹಲೋಕ ತ್ಯಜಿಸಿದರು. ಬಿ.ವಿ. ಕಾರಂತ, ಗಿರೀಶ್ ಕಾರ್ನಾಡ್, ಕೆ.ವಿ. ಸುಬ್ಬಣ್ಣ, ಪ್ರಸನ್ನ, ಅನಂತಮೂರ್ತಿ ಮೊದಲಾದವರೊಡನೆ ಒಡನಾಡುತ್ತಾ, ಅವರ ಮಾತುಗಳಿಗೆ ಕಿವಿಗೊಡುತ್ತಾ ಬೆಳೆದ ಜಂಬೆಯವರು ಕರ್ನಾಟಕದ ರಂಗಶಿಕ್ಷಣ ಕೇಂದ್ರಗಳಿಗೆ ಮಾದರಿ ಎನ್ನಬಹುದಾದ ಕಲಿಕೆಯ ಶಿಸ್ತನ್ನು ರೂಪಿಸಿ ದೇಶದಾದ್ಯಂತ ಪ್ರಸಿದ್ಧರಾದವರು. ಉಡುಪಿಯಲ್ಲಿ ಯಕ್ಷಗಾನ ಕಲಿತಿದ್ದ ಅವರು ಯಕ್ಷಗಾನದ ಕೆಲವು ಸೂಕ್ಷ್ಮಗಳನ್ನು ನಾಟಕಗಳಿಗೆ ಅರ್ಥಪೂರ್ಣವಾಗಿ ಅಳವಡಿಸಿದ್ದರು.

ಹೆಗ್ಗೋಡಿನ ನೀನಾಸಂ ರಂಗಶಿಕ್ಷಣದ ಕೇಂದ್ರದ ಪ್ರಾಂಶುಪಾಲರಾಗಿ ಕೆಲಸ ಮಾಡಿದ್ದ ಅವರು ನೀನಾಸಂಗೆ ಅಂತಾರಾಷ್ಟ್ರೀಯ ಮಟ್ಟದ ಪ್ರಶಸ್ತಿಯನ್ನೂ ತಂದಿತ್ತರು. ಅವರ ನಿರ್ದೇಶನದ ಚೆರ್ರಿ ಹಣ್ಣಿನ ತೋಟ, ಚಾಣಕ್ಯ ಪ್ರಪಂಚ, ಪುಂಟಿಲ, ಆ ಊರು–ಈ ಊರು, ಅಥೆನ್ಸಿನ ಅರ್ಥವಂತ, ಲೋಕ ಶಾಕುಂತಲ, ಕತ್ತಲೆಗೆ ಹತ್ತು ತಲೆ, ತಲೆದಂಡ, ಭಾಸಭಾರತ, ಮೊದಲಾದ ನಾಟಕಗಳನ್ನು ಮರೆಯುವಂತಿಲ್ಲ. ಮಂಚಿಕೇರಿಯಲ್ಲಿದ್ದ ಸಮುದಾಯದವರಿಗಾಗಿ ಜಂಬೆಯವರು 'ಕಪ್ಪು ಜನ, ಕೆಂಪು ನೆರಳು' ಎಂಬ ನಾಟಕವನ್ನು ನಿರ್ದೇಶಿಸಿದ್ದರು. ಗಂಗೊಳ್ಳಿಯಲ್ಲಿ ಮೀನುಗಾರರರಿಗೂ ರಂಗ ತರಬೇತಿ ನೀಡಿದ್ದರು. ಸಮಕಾಲೀನ ರಾಜಕೀಯದ ಅಪದ್ಧಗಳಿಗೆ ಅವರು ದಿಟ್ಟವಾಗಿ ಪ್ರತಿಕ್ರಿಯಿಸುತ್ತಿದ್ದರು.

ಕರ್ನಾಟಕದ ಕಂಡ ಅದ್ಭುತ ಪ್ರತಿಭೆಗಳಲ್ಲಿ ಒಬ್ಬರಾದ ಜಂಬೆ ಕೆಲಕಾಲದಿಂದ ಕ್ಯಾನ್ಸರ್‌ನಿಂದ ಬಳಲುತ್ತಿದ್ದು ಚಿಕಿತ್ಸೆ ಪಡೆಯುತ್ತಿದ್ದರು. ಅಗಲಿದ ಚೇತನಕ್ಕೆ ಸಮಸ್ತ ದೆಹಲಿ ಕನ್ನಡಿಗರ ಹಾಗೂ ದೆಹಲಿ ಕರ್ನಾಟಕ ಸಂಘದ ಪರವಾಗಿ ಭಾವಪೂರ್ಣ ಶ್ರದ್ಧಾಂಜಲಿ. ❑

ವೈವಿಧ್ಯಮಯ ಕಥನಗಳ ಮೂಲಕ ಕನ್ನಡ ಚಿತ್ರರಂಗವನ್ನು ಶ್ರೀಮಂತಗೊಳಿಸಿದ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರ ನೂರೊಂದು ನೆನಪು ಎದೆಯಾಳದಿಂದ

ಹಿರಿಯ ನಿರ್ಮಾಪಕ ಹಾಗೂ ಚಿತ್ರ ಪ್ರದರ್ಶಕರಾದ ಡಿ. ಶಂಕರ್ ಸಿಂಗ್ ಮತ್ತು ಪ್ರತಿಮಾ ದೇವಿ ಅವರ ಪುತ್ರ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಕನ್ನಡ ಚಿತ್ರರಂಗದ ಯಶಸ್ವಿ ಹಾಗೂ ಪ್ರಖ್ಯಾತ ನಿರ್ದೇಶಕರಲ್ಲಿ ಒಬ್ಬರು. ತಮ್ಮದೇ ಆದ ವಿಶಿಷ್ಟ ಮತ್ತು ವೈಭವಯುತ ಶೈಲಿಯ ಚಿತ್ರಗಳ ಮೂಲಕ ಕನ್ನಡ ಚಿತ್ರರಂಗಕ್ಕೆ ಹೊಸ ಆಯಾಮ ನೀಡಿದ ಅವರು, ಪರಭಾಷೆಯ ಚಿತ್ರರಂಗದವರೂ ಕನ್ನಡ ಸಿನಿಮಾದತ್ತ ತಿರುಗಿ ನೋಡುವಂತೆ ಮಾಡಿದ ಕೆಲವೇ ಕೆಲವು ನಿರ್ದೇಶಕರಲ್ಲಿ ಪ್ರಮುಖರು.

ಅವರ ತಂದೆ ಡಿ. ಶಂಕರ್ ಸಿಂಗ್ ಅವರು ಕನ್ನಡ ಚಿತ್ರರಂಗದ ಆರಂಭಿಕ ಯುಗದ ಅತ್ಯಂತ ಪ್ರಮುಖ ಹಾಗೂ ಪ್ರವರ್ತಕ ನಿರ್ಮಾಪಕ, ನಿರ್ದೇಶಕರಾಗಿದ್ದರು. ಇತ್ತೀಚೆಗೆ ತಮ್ಮ ವೈಯಕ್ತಿಕ ಕೆಲಸದ ನಿಮಿತ್ತ ದೆಹಲಿಗೆ ಆಗಮಿಸಿದ್ದ ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅವರು ದೆಹಲಿ ಕರ್ನಾಟಕ ಸಂಘಕ್ಕೆ ಆಗಮಿಸಿದ್ದಾಗ ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾದ **ಶ್ರೀ ಹರಿಪ್ರಿಯ ಎಸ್**. ಅವರು ಮಾಡಿದ ಚುಟುಕು ಸಂದರ್ಶನ 'ಅಭಿಮತ' ಓದುಗರಿಗಾಗಿ....



ಅಭಿಮತ: ನಿಮ್ಮ ತಂದೆ ಚಿತ್ರರಂಗದ ಪ್ರಖ್ಯಾತ ನಿರ್ದೇಶಕ ನಿರ್ಮಾಪಕರು. ಅವರ ವ್ಯಕ್ತಿತ್ವ ನಿಮ್ಮನ್ನು ಹೇಗೆ ರೂಪಿಸಿತು?

ರಾಜೇಂದ್ರ ಸಿಂಗ್ ಬಾಬು: ಹೌದು. ತಂದೆ ಶಂಕರ್ ಸಿಂಗ್ ಮತ್ತು ತಾಯಿ ಪ್ರತಿಮಾದೇವಿ. 1946 ರಲ್ಲಿ ಬಿ. ವಿಠ್ಠಲಾಚಾರ್ಯ ಅವರೊಂದಿಗೆ ಸೇರಿ 'ಮಹಾತ್ಮ ಪಿಕ್ಚರ್ಸ್' ಎಂಬ ಐತಿಹಾಸಿಕ ಚಲನಚಿತ್ರ ನಿರ್ಮಾಣ ಸಂಸ್ಥೆಯನ್ನು ಮೈಸೂರಿನಲ್ಲಿ ಸ್ಥಾಪಿಸಿದರು. ಈ ಬ್ಯಾನರ್ ಅಡಿಯಲ್ಲಿ ನೂರಕ್ಕೂ ಹೆಚ್ಚು ಕನ್ನಡ ಚಿತ್ರಗಳು ನಿರ್ಮಾಣಗೊಂಡವು. ತಂದೆಗೆ ನಾನು ವೈದ್ಯನಾಗಬೇಕು ಎಂದಿತ್ತು. ಆದರೆ ಕ್ಯಾಮರಾ, ಚಲನಚಿತ್ರೋದ್ಯಮದ ಆಕರ್ಷಣೆ ನನ್ನನ್ನು ಇಲ್ಲಿಗೆ ಕರೆತಂದಿತು. ತಂದೆಯವರೇ ನನಗೆ ಪ್ರೇರಣೆ.

ಅಭಿಮತ: ನಿಮ್ಮ ತಂದೆ ಸ್ವಾತಂತ್ರ್ಯ ಹೋರಾಟದಲ್ಲಿಯೂ ಪಾಲ್ಗೊಂಡಿದ್ದರೆಂದು ತಿಳಿದಿದೆ. ಸ್ವಾತಂತ್ರ್ಯ ಪೂರ್ವದಿಂದಲೂ ಸಕ್ರಿಯರಾಗಿದ್ರಾ?

ರಾಜೇಂದ್ರ ಸಿಂಗ್ ಬಾಬು: ನಮ್ಮ ತಂದೆಯವರಾದ ಡಿ. ಶಂಕರ್ ಸಿಂಗ್ ಅವರು ಸ್ವಾತಂತ್ರ ಹೋರಾಟದಲ್ಲಿ ಪಾಲ್ಗೊಂಡು ಹಾಸನದ ಜೈಲಿಗೆ ಹೋಗಿದ್ದರು. ಕ್ವಿಟ್ ಇಂಡಿಯಾ ಚಳವಳಿಯಲ್ಲಿ ಭಾಗವಹಿಸಿದ್ದರು. ಆರಂಭದಲ್ಲಿ ಮಹಾತ್ಮ ಗಾಂಧಿ ಮತ್ತು ಜವಾಹರಲಾಲ್ ನೆಹರು ಅವರ ಹೆಸರಿನಲ್ಲಿ ಎರಡು ಪ್ರವಾಸಿ ಟಾಕೀಸ್‌ಗಳನ್ನು ಸ್ಥಾಪಿಸಿದರು ಮತ್ತು ಅವುಗಳನ್ನು ಕ್ರಮವಾಗಿ "ಮಹಾತ್ಮ ಟೂರಿಂಗ್ ಟಾಕೀಸ್" ಮತ್ತು "ಜವಾಹರ್ ಟೂರಿಂಗ್ ಟಾಕೀಸ್" ಎಂದು ಕರೆದರು. ಅವರು ಭಾರತದಲ್ಲಿ ಬ್ರಿಟಿಷ್ ಆಳ್ವಿಕೆಯ ಸಮಯದಲ್ಲಿ ಸ್ವಾತಂತ್ರ್ಯ ಹೋರಾಟಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು ಮತ್ತು ಗಾಂಧಿಯವರ ಕಟ್ಟಾ ಅನುಯಾಯಿಯಾಗಿದ್ದರು. ಸುಮಾರು 50 ಕನ್ನಡ ಸಿನಿಮಾಗಳನ್ನ ಮೈಸೂರಿನಲ್ಲೆ ಮಾಡಿದ್ರು.

ಅಭಿಮತ: ಮೈಸೂರಿನ ಸ್ಟುಡಿಯೋದೊಂದಿಗಿನ ತಮ್ಮ ಒಡನಾಟದ ಬಗ್ಗೆ ತಿಳಿಸಿ

ರಾಜೇಂದ್ರ ಸಿಂಗ್ ಬಾಬು: ಮೈಸೂರಿನ ಪ್ರೀಮಿಯರ್ ಮತ್ತು ನವಜ್ಯೋತಿ ಸ್ಟುಡಿಯೋದಲ್ಲಿ ಬಹಳಷ್ಟು ಕಲಿತಿದ್ದೇವೆ. ನಮಗೆ ಪ್ರೀಮಿಯರ್ ಸ್ಟುಡಿಯೋ ಮತ್ತು ನವಜ್ಯೋತಿ ಸ್ಟುಡಿಯೋ ಎರಡು ಸ್ಟುಡಿಯೋಗಳು ಸ್ಕೂಲ್ ಇದ್ದಂಗೆ. ಕನ್ನಡ ಚಿತ್ರರಂಗದ ಇತಿಹಾಸದಲ್ಲಿ 'ನವಜ್ಯೋತಿ ಸ್ಟುಡಿಯೋ' ಮುಖ್ಯ ಹಾಗೂ ಐತಿಹಾಸಿಕ ಮೈಲಿಗಲ್ಲಾಗಿದೆ. ಇದು ಕರ್ನಾಟಕದ ಮೊಟ್ಟಮೊದಲ ಪೂರ್ಣ ಪ್ರಮಾಣದ ಸೌಂಡ್ ಫಿಲ್ಮ್ ಸ್ಟುಡಿಯೋ ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

ಮೈಸೂರಿನ ಪ್ರೀಮಿಯರ್ ಸ್ಟುಡಿಯೋ (Premier Studio) ಕನ್ನಡ ಚಲನಚಿತ್ರ ರಂಗದ ಇತಿಹಾಸದಲ್ಲಿ ಸುವರ್ಣಾಕ್ಷರಗಳಲ್ಲಿ ಬರೆಯಲಾದ ಮತ್ತು ಅಷ್ಟೇ ದುರಂತದ ಇತಿಹಾಸವನ್ನು ಹೊಂದಿರುವ ಮತ್ತೊಂದು ಪ್ರಮುಖ ಮೈಲಿಗಲ್ಲು.

ಅಭಿಮತ: ಅಂತಹ ದೊಡ್ಡ ಸ್ಟುಡಿಯೋಗಳ ಅವನತಿಗೆ ಕಾರಣವೇನು?

ರಾಜೇಂದ್ರ ಸಿಂಗ್ ಬಾಬು: ಸ್ಟುಡಿಯೋಗಳ ನಿರ್ವಹಣೆಗೆ ವಿಪರೀತ ಖರ್ಚು, ಸರ್ಕಾರದಿಂದ ಯಾವುದೇ ಸಹಾಯ ಸಿಗಲ್ಲ. ಇವತ್ತಿನ ಚಿತ್ರೀಕರಣಗಳು ಹೊರಾಂಗಣದಲ್ಲೇ ಹೆಚ್ಚು ಕಡಿಮೆ ಬಜೆಟ್‌ನಲ್ಲೇ ಆಗುತ್ತವೆ. 70-80ರ ದಶಕದಲ್ಲೇ ಎರಡು ಸ್ಟುಡಿಯೋಗಳು ಮುಚ್ಚುವ ಸ್ಥಿತಿಗೆ ಬಂದಿದ್ದವು. ಬಾಲಿವುಡ್ ನಟ-ನಿರ್ದೇಶಕ ಸಂಜಯ್ ಖಾನ್ ಅವರು ನಿರ್ದೇಶಿಸಿ, ನಟಿಸುತ್ತಿದ್ದ 'ದಿ ಸ್ವೋರ್ಡ್ ಆಫ್ ಟಿಪ್ಪು ಸುಲ್ತಾನ್' (The Sword of Tipu Sultan) ಎಂಬ ಭವ್ಯ ಹಿಂದಿ ಟಿವಿ ಧಾರಾವಾಹಿಯ ದರ್ಬಾರ್ ದೃಶ್ಯದ ಚಿತ್ರೀಕರಣ ಇಲ್ಲಿ ನಡೆಯುತ್ತಿತ್ತು. ಆಗ ಘಟಿಸಿದ ಭೀಕರ ಬೆಂಕಿಯ ದುರಂತದಿಂದ ಪ್ರೀಮಿಯರ್ ಸ್ಟುಡಿಯೋ ಚೇತರಿಸಿಕೊಳ್ಳಲೇ ಇಲ್ಲ.

ಅಭಿಮತ: ನಿಮ್ಮ ನಿರ್ದೇಶನದ ಮೊದಲ ಚಿತ್ರ?

ರಾಜೇಂದ್ರ ಸಿಂಗ್ ಬಾಬು: ನಾಗರಹೊಳೆ, ಆ ನಂತರ ಸಿಂಹದ ಮರಿ ಸೈನ್ಯ.

ಅಭಿಮತ: ಅಂಬರೀಶ್, ವಿಷ್ಣುವರ್ಧನ್, ಶ್ರೀನಾಥ್ ನಿಮ್ಮ ಕಾಲದ ಎಲ್ಲಾ ನಾಯಕರ ಜೊತೆ ಸಿನಿಮಾ ಮಾಡಿದ್ರಿ ಆದರೆ ಅಣ್ಣಾವ್ರ ಜೊತೆ ಯಾಕೆ ಮಾಡಿಲ್ಲ?

ರಾಜೇಂದ್ರ ಸಿಂಗ್ ಬಾಬು: ಹೌದು, ರಾಜಕುಮಾರ್ ಅವರ ಜೊತೆ ಒಳ್ಳೆ ಒಡನಾಟ ಇತ್ತು. ಎರಡು ಮೂರು ಪ್ರಾಜೆಕ್ಟ್ ಮಾತುಕತೆ ಆಗಿತ್ತು ಕಾರಣಾಂತರದಿಂದ ಕಾರ್ಯರೂಪಕ್ಕೆ ಬರಲಿಲ್ಲ. ರಾಜಕುಮಾರ್ ಅವರ ಜೊತೆ ಬಾಲನಟನಾಗಿ ನಟಿಸಿದ್ದೇನೆ. ನಮ್ಮ ತಂದೆಯವರ "ಭಕ್ತಚೇತ" ಅನ್ನುವ ಸಿನಿಮಾದಲ್ಲಿ ನಟಿಸಿದ್ದೇನೆ.

ಅಭಿಮತ: ನಿಮ್ಮ ಸಿನಿಮಾಗಳೆಲ್ಲ ವೈವಿಧ್ಯಮಯ ವಿಷಯಗಳಿರುತ್ತಿದ್ದವು, ಇದರ ಬಗ್ಗೆ?

ರಾಜೇಂದ್ರ ಸಿಂಗ್ ಬಾಬು: ಹೌದು, ನನ್ನ ಚಿತ್ರಜೀವನವನ್ನು ಸೂಕ್ಷ್ಮವಾಗಿ ಗಮನಿಸಿದರೆ ಅದರಲ್ಲಿ ಯಾವುದೇ ಒಂದು ನಿರ್ದಿಷ್ಟ 'ಫಾರ್ಮುಲಾ' ಇರಲಿಲ್ಲ. ಒಬ್ಬ ನಿರ್ದೇಶಕ ಒಂದೇ ಶೈಲಿಗೆ (Genre) ಸೀಮಿತವಾಗಬಾರದು, ಪ್ರತಿಯೊಂದು ಸಿನಿಮಾದಲ್ಲೂ ಪ್ರೇಕ್ಷಕರಿಗೆ ಹೊಸ ಅನುಭವ ನೀಡಬೇಕು ಎಂಬುದು ನನ್ನ ಸದಾಕಾಲದ ಆಶಯವಾಗಿತ್ತು. ನಾಗರಹೊಳೆ, ಸಿಂಹದ ಮರಿ ಸೈನ್ಯದಂತಹ ಮಕ್ಕಳ ಸಾಹಸ ಚಿತ್ರಗಳು; ಮಾಸಪತ್ರಿಕೆಯ ಧಾರಾವಾಹಿ ಆಧಾರಿತ 'ಅಂತ'ದಂತಹ ಆಕ್ಷನ್ ಸಿನಿಮಾ; ಪ್ರೀತಿ-ವಿರಹದ ಹಿನ್ನೆಲೆಯ 'ಬಂಧನ'; ದೇಶಭಕ್ತಿ ಮತ್ತು ಯುದ್ಧದ ವಿಷಯದ 'ಮುತ್ತಿನ ಹಾರ'; ಮಲೆನಾಡಿನ ಸಂಸ್ಕೃತಿಯನ್ನು ಬಿಂಬಿಸುವ 'ಮುಂಗಾರಿನ ಮಿಂಚು'; ವೇಶ್ಯೆಯೊಬ್ಬಳ ಬದುಕಿನ ಕಥೆ ಹೇಳುವ 'ಹೂವು ಹಣ್ಣು'; ಹಾಗೂ 'ಕುರಿಗಳು ಸಾರ್ ಕುರಿಗಳು', 'ಕೋತಿಗಳು ಸಾರ್ ಕೋತಿಗಳು' ನಂತಹ ಹಾಸ್ಯ ಸರಣಿ ಚಿತ್ರಗಳು-ಹೀಗೆ ವಿಭಿನ್ನ ವಿಷಯಗಳ ಮೇಲೆ ಸಿನಿಮಾ ಮಾಡಲು ಜನರು ಸದಾ ಪ್ರೋತ್ಸಾಹ ನೀಡುತ್ತಾ ಬಂದಿದ್ದಾರೆ. ನನಗೂ ಕೂಡ ಇಂತಹ ಹಲವಾರು ವೈವಿಧ್ಯಮಯ ವಿಷಯಗಳ ಬಗ್ಗೆ ಓದುವ ಅಪಾರ ಆಸಕ್ತಿ ಇದೆ."

ಅಭಿಮತ: ಮಗ ಆದಿತ್ಯನ ಬಗ್ಗೆ, ಅವರ ಸಿನೇಮಾ ಪ್ರವೇಶಿಕೆಯ ಬಗ್ಗೆ ತಿಳಿಸಿ

ರಾಜೇಂದ್ರ ಸಿಂಗ್ ಬಾಬು: ಆದಿತ್ಯ ತನ್ನ 21ನೇ ವಯಸ್ಸಿನಲ್ಲೇ ನನ್ನ ನಿರ್ದೇಶನದ ಕೆಲವು ಚಿತ್ರಗಳಿಗೆ ನಿರ್ಮಾಪಕನಾಗಿ ಕೆಲಸ ಮಾಡಲು ಆರಂಭಿಸಿದ್ದನು. ಉದಾಹರಣೆಗೆ, ಅವನು ನಿರ್ಮಿಸಿದ 'ಮುಂಗಾರಿನ ಮಿಂಚು' ಚಿತ್ರಕ್ಕೆ ರಾಷ್ಟ್ರ ಪ್ರಶಸ್ತಿ ಕೂಡ ಒಲಿದಿತ್ತು. ಆದಾಗ್ಯೂ, ಅವನಿಗೆ ನಟನೆಯಲ್ಲಿ ಆಸಕ್ತಿ ಮೂಡಿದಾಗ ನಾನು ನೇರವಾಗಿ ಅವನನ್ನು ಬೆಳ್ಳಿತೆರೆಗೆ ತರಲಿಲ್ಲ. ಮುಂಬೈನ ಪ್ರಸಿದ್ಧ 'ಕಿಶೋರ್ ನಮಿತ್ ಕಪೂರ್ ನಟನಾ ಶಾಲೆ'ಗೆ ಕಳುಹಿಸಿ, ನಟನೆಯ ಸೂಕ್ಷ್ಮತೆಗಳು, ನೃತ್ಯ ಮತ್ತು ಸಾಹಸ ಕಲೆಗಳಲ್ಲಿ ಸೂಕ್ತ ತರಬೇತಿ ಪಡೆಯುವಂತೆ ಮಾಡಿದೆ.

ಬಳಿಕ ಲವ್ ಅನ್ನುವ ಸಿನಿಮಾದಲ್ಲಿ ಮಗನನ್ನು ಲಾಂಚ್ ಮಾಡಿದೆ. ಈಗ ಹೊಸ ಸಿನಿಮಾಗಳಲ್ಲಿ ಮಾಡ್ತಿದಾರೆ. 'ಡೆಡ್ಲಿ ಸೋಮಾ' ಮತ್ತು ದರ್ಶನ್ ಜೊತೆ ಎರಡು ಸಿನಿಮಾ ಮಾಡಿದ್ರು.

ಅಭಿಮತ: ಆದಿತ್ಯ ಅವರಿಗೆ ಎಷ್ಟು ಸಿನಿಮಾ ನಿರ್ದೇಶಿಸಿದ್ದಿರಾ?

ರಾಜೇಂದ್ರ ಸಿಂಗ್ ಬಾಬು: 'ಲವ್' ಮೊದಲ ಸಿನಿಮಾ ಆದ ನಂತರ 'ಮೋಹಿನಿ' ಮತ್ತು 'ವೀರ ಕಂಬಳ'. ಅಂತ ಕರಾವಳಿ ಕೋಣಗಳ ಓಟದ ಆಧಾರಿತ ಸಿನಿಮಾ ಮಾಡಿದ್ದೇನೆ. ಒಟ್ಟು ಮೂರು ಸಿನಿಮಾ ನಿರ್ದೇಶಿಸಿದ್ದೇನೆ.

ಅಭಿಮತ: 'ಬಂಧನ' ಒಂದು ಭಾವನಾತ್ಮಕ ಪ್ರೇಮ ಕಥೆ, ವಿಷ್ಣುವರ್ಧನ್ ಅವರು ಆಕ್ಷನ್ ಹೀರೊ ಆಗಿ ಗುರುತಿಸಿಕೊಂಡಿದ್ದರು, ಆ ಚಿತ್ರಕ್ಕೆ ಮೊದಲ ಆಯ್ಕೆ ಅವರೇ ಆಗಿದ್ದರೇ ?

ರಾಜೇಂದ್ರ ಸಿಂಗ್ ಬಾಬು: ಆ ಕಥೆ ಮಾಡಿದ್ದೇ ವಿಷ್ಣುವರ್ಧನ್ ಅವರಿಗಾಗಿ. ಒಂದು ಬದಲಾವಣೆ ಬೇಕಿತ್ತು. ಜನ ಕೂಡ ಆ ಚಿತ್ರವನ್ನು ತುಂಬ ಪ್ರೀತಿಯಿಂದ ನೋಡಿದ್ರು ಮತ್ತು ರಾಷ್ಟ್ರ ಪ್ರಶಸ್ತಿ ಕೂಡ ಬಂತು. 100 ವಾರಗಳು ಓಡಿದಂತಹ ಯಶಸ್ವಿ ಚಿತ್ರ.

ಅಭಿಮತ: ವಿಷ್ಣುವರ್ಧನ್ ಮತ್ತು ಸುಹಾಸಿನಿ ಯಶಸ್ವಿ ಜೋಡಿ ಸೃಷ್ಟಿ ಮಾಡಿದ್ದು ನೀವು. ಎರಡು ಯಶಸ್ವಿ

ಚಿತ್ರಗಳ ಬಗ್ಗೆ ಏನು ಹೇಳ್ತೀರಿ ?

ರಾಜೇಂದ್ರ ಸಿಂಗ್ ಬಾಬು: ಹೌದು, ಬಂಧನ ಮತ್ತು ಮುತ್ತಿನ ಹಾರ. ಬಂಧನ ಭಾವನಾತ್ಮಕ ಪ್ರೇಮ ಕಥೆ ಆದ್ರೆ ಮುತ್ತಿನ ಹಾರ ಸೈನಿಕ ಮತ್ತು ಯುದ್ಧ ಆಧರಿತ ಕಥೆ..ಎರಡನ್ನೂ ಜನ ತುಂಬ ಇಷ್ಟ ಪಟ್ರು ಮತ್ತು ವಿಷ್ಣು-ಸುಹಾಸಿನಿ ಜೋಡಿನ ಹಾರೈಸಿದ್ರು. ಎಲ್ಲಾ ಜನಕ್ಕೆ ಬಿಟ್ಟಿದ್ದು. ನಮ್ದು ಪ್ರಯತ್ನ ಅಷ್ಟೆ.

ಅಭಿಮತ: ಸರ್, ನೀವು ಆ ಕಾಲದಲ್ಲೇ ಅತಿ ದೊಡ್ಡ ಬಹುತಾರಾಗಣದ (Multi-starrer) ಚಿತ್ರಗಳನ್ನು ಮಾಡಿದ್ದೀರಿ. ಅಂತಹ ಅದ್ದೂರಿ ಸಿನಿಮಾಗಳನ್ನು ನಿರ್ದೇಶಿಸಿದ ನಿಮ್ಮ ಅನುಭವದ ಬಗ್ಗೆ ಮತ್ತು ಆ ಚಿತ್ರಗಳ ವಿಶೇಷತೆಗಳ ಬಗ್ಗೆ ತಿಳಿಸುತ್ತೀರಾ?"

ರಾಜೇಂದ್ರ ಸಿಂಗ್ ಬಾಬು: ಗಂಡಭೇರುಂಡ' ಒಂದು ಸಾಹಸಭರಿತ ಚಿತ್ರ. ಹಾಲಿವುಡ್‌ನ 'ಮೆಕನ್ನಾಸ್ ಗೋಲ್ಡ್' (Mackenna's Gold) ಇಂಗ್ಲಿಷ್ ಸಿನಿಮಾದ ಪ್ರೇರಣೆಯಿಂದ ಮಾಡಿದ ಒಂದು ಅದ್ಭುತ ಪ್ರಯತ್ನವಿದು. ಇದನ್ನು ನಟ ವಜ್ರಮುನಿ ಅವರ ಸಹೋದರರಾದ ವರದರಾಜ್ ಅವರು ನಿರ್ಮಾಣ ಮಾಡಿದ್ದರು (ವಜ್ರಮುನಿ ಅವರು ಚಿತ್ರದ ಮುಖ್ಯ ವಿಲನ್ ಪಾತ್ರದಲ್ಲಿದ್ದರು)."

ಅಭಿಮತ: ಏಕ ಕಿಟಕಿ ಅಂದ್ರೆ ಸಿಂಗಲ್ ಸ್ಕ್ರೀನ್ ಮತ್ತು ಮಲ್ಟಿಸ್ಕ್ರೀನ್. ಎರಡನ್ನೂ ನೋಡಿದವರು ನೀವು. ಇದರಲ್ಲಿನ ವ್ಯತ್ಯಾಸವೇನು ?

ರಾಜೇಂದ್ರ ಸಿಂಗ್ ಬಾಬು: ಸಿಂಗಲ್ ಸ್ಕ್ರೀನ್ ಸಾವಿರ ಜನ ಕುತ್ಕೊಂಡು ನೋಡ್ತಿದ್ರು. ಸಾಮಾನ್ಯ ಜನರು ಕಮ್ಮಿ ದುಡ್ಡಲ್ಲಿ ಸಿನಿಮಾ ನೋಡ್ಬಹುದು. ಮಲ್ಟಿಪ್ಲೆಕ್ಸ್ ಹೊಸ ಟೆಕ್ನಾಲಜಿ, ಸಾಮಾನ್ಯ ಜನರಿಗೆ ಟಿಕೆಟ್ ದುಬಾರಿ. ಸಾವಿರಾರು ರುಪಾಯಿ ಬೇಕು ಸಿನಿಮಾ ನೋಡೋಕೆ. 100, 150 ಜನ ಕುಳಿತು ನೋಡುವ ದುಬಾರಿ ಪರದೆ ಮಲ್ಟಿಪ್ಲೆಕ್ಸ್ ಆದ್ರೆ ಎಲ್ಲಾ ವರ್ಗದ ಜನರನ್ನು ಸೆಳೆಯೋದು ಸಿಂಗಲ್ ಸ್ಕ್ರೀನ್ ಥಿಯೇಟರ್.

ಅಭಿಮತ: ಸರ್, ಅಂದಿನ ಕಾಲದಲ್ಲಿ ಸಿನಿಮಾಗಳ ಗೆಲುವನ್ನು '100 ದಿನಗಳ ಪ್ರದರ್ಶನ' ಎಂದು ಅಳೆಯಲಾಗುತ್ತಿತ್ತು, ಆದರೆ ಇಂದಿನ ಕಾಲದಲ್ಲಿ ಅದನ್ನು '100 ಕೋಟಿ ರೂಪಾಯಿಗಳ ಕಲೆಕ್ಷನ್' (100 Crores) ಎಂದು ಲೆಕ್ಕ ಹಾಕಲಾಗುತ್ತದೆ. ಈ ಕಾಲದ ಬದಲಾವಣೆ ಮತ್ತು ಯಶಸ್ಸಿನ ಮಾಪನದ ಬಗ್ಗೆ ನಿಮ್ಮ ಅನಿಸಿಕೆ ಏನು?"

ರಾಜೇಂದ್ರ ಸಿಂಗ್ ಬಾಬು: ಆಗ ಸಿನಿಮಾ ಮಾಡೋ ವೆಚ್ಚ, ಟಿಕೆಟ್ ಬೆಲೆ, ಥಿಯೇಟರ್‌ಗಳು ಮತ್ತು ಪ್ರದರ್ಶನಗಳು ಎಲ್ಲದಕ್ಕೂ ಒಂದು ಚೌಕಟ್ಟಿತ್ತು. ದಿನಗಳ ಲೆಕ್ಕದಲ್ಲಿ ಗಳಿಕೆ ಮತ್ತು ಯಶಸ್ಸು ಅಳತೆ ಮಾಡಲಾಗುತಿತ್ತು. ಇವತ್ತು ಪ್ಯಾನ್ ಇಂಡಿಯಾ ಮತ್ತು ಮೊದಲ ದಿನವೇ ಸಾವಿರ ಪರದೆಗಳಲ್ಲಿ ಸಿನಿಮಾ ತೆರೆ ಕಾಣುತ್ತೆ. ಮಾರುಕಟ್ಟೆ ವಿಸ್ತಾರವಾಗಿದೆ. ಟಿಕೆಟ್ ದರ ಹತ್ತಹತ್ತಿರ 100ರಿಂದ ಸಾವಿರದಷ್ಟು ಹೆಚ್ಚಾಗಿದೆ. ಸಿನಿಮಾ ಕ್ಷೇತ್ರಕ್ಕೆ ವ್ಯವಹಾರದ ದೃಷ್ಟಿಯಿಂದ ಒಳ್ಳೆಯ ವಿಷಯ.

ಅಭಿಮತ: ನಿಮ್ಮ ಸಿನಿಮಾದ ಇನ್ನೊಂದು ವಿಶೇಷತೆ ಎಂದರೆ ಇಷ್ಟು ಸಿನಿಮಾಗಳಲ್ಲಿ ಒಂದೇ ಒಂದು ಡಬ್ಬಿಂಗ್ ಮಾಡಿಲ್ಲ. ಹೌದಾ?

ರಾಜೇಂದ್ರ ಸಿಂಗ್ ಬಾಬು: ಹೌದು, ನನಗೆ ಡಬ್ಬಿಂಗ್ ಮಾಡ್ಬೇಕು ಅನ್ಸಲ್ಲ. ಓದುವ ಹವ್ಯಾಸ ನನ್ನನ್ನು ಯೋಚಿಸಲು ಮತ್ತು ಹೊಸ ಹೊಸ ವಿಷಯದ ಬಗ್ಗೆ ಸೆಳೆಯುತ್ತೆ. ಹೊಸ ಸಬ್ಜೆಕ್ಟ್ ಬಗ್ಗೆ ಯಾವಾಗಲೂ ಯೋಚಿಸುತ್ತಿರುತ್ತೇನೆ.

ತಮ್ಮ ಅಮೂಲ್ಯವಾದ ಸಮಯವನ್ನು ನೀಡಿ ಮಾತನಾಡಿದ ಶ್ರೀ ರಾಜೇಂದ್ರ ಸಿಂಗ್ ಬಾಬು ಅವರಿಗೆ ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ ಅಭಿಮತದ ಧನ್ಯವಾದಗಳು.❑

ಜ್ಞಾನದೊಂದಿಗೆ ವಿವೇಕ ರಾಧಾಕೃಷ್ಣನ್ ಆಶಯ – ಡಾ. ಅವನೀಂದ್ರನಾಥ್ ರಾವ್

ವಿದ್ಯಾರ್ಥಿಗಳಲ್ಲಿ ಜ್ಞಾನದೊಂದಿಗೆ ವಿವೇಕವನ್ನು ಬೆಳೆಸಬೇಕು ಎಂಬುವುದು ಆದರ್ಶ ಶಿಕ್ಷಕ, ದಾರ್ಶನಿಕ ಮತ್ತು ಮಾಜಿ ರಾಷ್ಟ್ರಪತಿ ಡಾ. ಸರ್ವಪಲ್ಲಿ ರಾಧಾಕೃಷ್ಣನ್ ಆಶಯವಾಗಿತ್ತು ಎಂದು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರಭಾರ ಅಧ್ಯಕ್ಷ ಡಾ. ಅವನೀಂದ್ರನಾಥ ರಾವ್ ಅವರು ಹೇಳಿದರು. ಅವರು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಜಿ.ಪಿ. ರಾಜರತ್ನಂ ಸಭಾಂಗಣದಲ್ಲಿ ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆಯ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಆಯೋಜಿಸಿದ ಶಿಕ್ಷಕರ ದಿನಾಚರಣೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಶಿಕ್ಷಕರು ಕೇವಲ ಪಾಠ ಹೇಳಿಕೊಡುವವರಲ್ಲ; ಅವರು ನಮ್ಮ ಭವಿಷ್ಯವನ್ನು ರೂಪಿಸುವ ಶಿಲ್ಪಿಗಳು. ಸಮಾಜಕ್ಕೆ ಯೋಗ್ಯ ನಾಗರಿಕರನ್ನು ಕೊಡುಗೆಯಾಗಿ ನೀಡಲು ಅವರು ತಮ್ಮ ಇಡೀ ಜೀವನವನ್ನೇ ಧಾರೆ ಎರೆಯುತ್ತಾರೆ. ಅಂತಹ ಗುರುಗಳ ಶ್ರಮವನ್ನು ಗುರುತಿಸಿ, ಅವರಿಗೆ ಸದಾ ಕೃತಜ್ಞರಾಗಿರುವುದು ಪ್ರತಿಯೊಬ್ಬ ವಿದ್ಯಾರ್ಥಿಯ ಹಾಗೂ ಸಮಾಜದ ಜವಾಬ್ದಾರಿಯಾಗಿದೆ ಎಂದರು.

ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲಾ ಗೌರವ ವ್ಯವಸ್ಥಾಪಕ ಉಮೇಶ್ ಬಿ.ಆರ್. ಅವರು ಶಿಕ್ಷಕರಿಗೆ ಶುಭ ಹಾರೈಸಿ ಮಾತನಾಡಿ ಭಾರತೀಯ ಪರಂಪರೆಯಲ್ಲಿ ಶಿಕ್ಷಕ ವೃತ್ತಿಗೆ ಮಹತ್ವದ ಸ್ಥಾನವಿದೆ. ವಿದ್ಯಾರ್ಥಿಗಳಿಗೆ ಶಿಕ್ಷಕರೇ ಮೊದಲ ಆದರ್ಶ. ಗುಣಮಟ್ಟದ ಶಿಕ್ಷಣಕ್ಕಾಗಿ ಶಿಕ್ಷಕರೆಲ್ಲರೂ ಶ್ರಮಿಸುತ್ತಿರುವುದು ಅನುಸರಣೀಯ ಎಂದು ಹೇಳಿದರು.

ಸಂಸ್ಥೆಯ ವತಿಯಿಂದ ಶಾಲಾ ಶಿಕ್ಷಕ, ಶಿಕ್ಷಕೇತರ ವೃಂದದವರಿಗೆ ಉಡುಗೊರೆಯನ್ನು ನೀಡಿ ಗೌರವಿಸಲಾಯಿತು., ಸಂಸ್ಥೆಯ ಉಪಾಧ್ಯಕ್ಷೆ ಶ್ರೀಮತಿ ಎಂ. ವೀಣಾ ಜಗದೀಶ್, ಪ್ರಭಾರ ಗೌರವ ಕಾರ್ಯದರ್ಶಿ ಹಾಗೂ ಗೌರವ ಖಜಾಂಚಿ ಕಾಶೀನಾಥ ಬಿರಾದರ್, ಆಡಳಿತ ಸಮಿತಿ ಸದಸ್ಯರುಗಳಾದ ಗಿರೀಶ್ ಎಸ್., ಹರಿಪ್ರಿಯಾ ಎಸ್., ವಸಂತ ಶೆಟ್ಟಿ ಬೆಳ್ಳಾರೆ, ಡಾ. ಅಶೋಕ್ ಗೋನಾಳ್, ಮೋಹನ್ ಕುಮಾರ್ ಬಿ.ಎನ್., ಉಪಸ್ಥಿತರಿದ್ದರು. ಪ್ರಾಂಶುಪಾಲ ಪ್ರಶಾಂತ ಕುಮಾರ್ ಸ್ವಾಗತಿಸಿದರು. ಉಪ ಪ್ರಾಂಶುಪಾಲೆ ಶ್ರೀಮತಿ ಪ್ರೇಮಲತಾ ಬಿ. ವಂದಿಸಿದರು. ಶಿಕ್ಷಕರುಗಳಾದ ಶ್ರೀಮತಿ ಪ್ರೊಮಿಳಾ ದಹಿಯಾ, ಬಿದಿಶಾ ಚಟರ್ಜಿ ಕಾರ್ಯಕ್ರಮ ನಿರೂಪಿಸಿದರು. ❑

ಅರವಿಂದ ಬಿಜ್ಜೆ

ಸಂಘದ ಮುಂಬರುವ ಕಾರ್ಯಕ್ರಮಗಳು

01 ನವೆಂಬರ್ 2026 ಭಾನುವಾರ ಬೆಳಿಗ್ಗೆ : 7.00 ಗಂಟೆಗೆ

ಕನ್ನಡ ರಾಜ್ಯೋತ್ಸವ ಅಂಗವಾಗಿ ಧ್ವಜಾರೋಹಣ ಮತ್ತು ಸಂಘದಿಂದ ಕರ್ನಾಟಕ ಭವನದವರೆಗೆ ಸೌಹಾರ್ದಯುತ ನಡಿಗೆ

14 ನವೆಂಬರ್ 2026 ಶನಿವಾರ ಸಂಜೆ : 4.30 ಗಂಟೆಗೆ

ದೆಹಲಿಯ ಕನ್ನಡದ ಮಕ್ಕಳ ಸಾಹಿತ್ಯ ಸಾಂಸ್ಕೃತಿಕ ಸಮ್ಮಿಳನ

15 ನವೆಂಬರ್ 2026 ಭಾನುವಾರ ಸಂಜೆ : 4.30 ಗಂಟೆಗೆ

ಚಲನಚಿತ್ರ ನಟ ದತ್ತಣ್ಣ ಅವರೊಂದಿಗೆ ಸಂವಾದ ಕಾರ್ಯಕ್ರಮ ಮತ್ತು "ಮನದ ಕಡಲು"ಜನಪ್ರಿಯ ಕನ್ನಡ ಚಲನಚಿತ್ರ ಪ್ರದರ್ಶನ

21–22 ನವೆಂಬರ್ 2026

ಕರ್ನಾಟಕ ನಾಟಕ ಅಕಾಡೆಮಿ ಬೆಂಗಳೂರು ಸಹಯೋಗದಲ್ಲಿ ನಾಟಕೋತ್ಸವ-ಶನಿವಾರ ಲಂಕೇಶ್‌ರವರ ನಾಟಕ "ಈಡಿಪಸ್" ನಿರ್ದೇಶನ : ಶಶಿಧರ ಬಳಗಾರ, ಪ್ರಸ್ತುತಿ : ಪ್ರಯೋಗರಂಗ ಭಾನುವಾರ-ಅನಂತಮೂರ್ತಿಯವರ "ಮೌನಿ", ನಿರ್ದೇಶನ: ನಾಗರಾಜ ಮೂರ್ತಿ ಪ್ರಸ್ತುತಿ : ರಂಗ ಸೌರಭ

29 ನವೆಂಬರ್ 2026 ಭಾನುವಾರ

ವಿಶಿಷ್ಟ ಕನ್ನಡಿಗ ಪ್ರಶಸ್ತಿ ಪ್ರದಾನ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳು

ಸಿನಿಮಾ ಅಧ್ಯಯನಕ್ಕೆ ಸ್ವರ್ಣ ಕಮಲದ ಮನ್ನಣೆ

ಡಾ. ಪ್ರದೀಪ್ ಕುಮಾರ್ ಶೆಟ್ಟಿ ಕೆಂಚನೂರು (ಶಿಕ್ಷಕ, ಸಂಶೋಧಕ, ಸಿನಿಮಾ ಅಧ್ಯಯನಕಾರ ಹಾಗೂ ಚಿತ್ರಕಥೆಗಾರ)ಅವರಿಗೆ 72ನೇ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ (2024ನೇ ಸಾಲಿನ ಪ್ರಶಸ್ತಿಗಳು) ಅವರ 'ನಾನಿರುವುದೇ ನಿಮಗಾಗಿ, ನಾಡಿರುವುದೇ ನಮಗಾಗಿ: ಕನ್ನಡ ಸಿನಿಮಾದ ತತ್ವ ಮತ್ತು ರಾಜಕೀಯ' ಕೃತಿಗೆ ಅತ್ಯುತ್ತಮ ಸಿನಿಮಾ ಕುರಿತ ಪುಸ್ತಕ (Best Book on Cinema) ವಿಭಾಗದಲ್ಲಿ ಸ್ವರ್ಣ ಕಮಲ ಮತ್ತು–1 ಲಕ್ಷ ನಗದು ಬಹುಮಾನ ದೊರೆತಿದೆ. ಈ ಪ್ರಶಸ್ತಿಯನ್ನು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು 22 ಸೆಪ್ಟೆಂಬರ್ 2026ರಂದು ಏಕತಾ ನಗರದಲ್ಲಿ ಪ್ರದಾನ ಮಾಡಿದರು.

ಈ ಪ್ರಶಸ್ತಿಯ ವಿಶೇಷತೆಯೆಂದರೆ, ಇದು ಕೇವಲ ಒಂದು ಪುಸ್ತಕಕ್ಕೆ ದೊರೆತ ಗೌರವವಲ್ಲ; ಕನ್ನಡ ಸಿನಿಮಾವನ್ನು ಕೇವಲ ಮನರಂಜನೆಯ ಮಾಧ್ಯಮವಾಗಿ ನೋಡದೆ, ಅದರ ತತ್ವ, ರಾಜಕೀಯ, ಸಮಾಜ ಮತ್ತು ಸಾಂಸ್ಕೃತಿಕ ಅರ್ಥಗಳನ್ನು ಅಧ್ಯಯನ ಮಾಡುವ ಜ್ಞಾನಶಿಸ್ತಿಗೆ ದೊರೆತ ರಾಷ್ಟ್ರೀಯ ಮನ್ನಣೆ ಎನ್ನಬಹುದು.

ಇತಿಹಾಸದ ಉಪನ್ಯಾಸಕರಾಗಿರುವ ಅವರು ಸಿನಿಮಾವನ್ನು ಇತಿಹಾಸ, ಸಮಾಜ ಮತ್ತು ರಾಜಕೀಯದೊಂದಿಗೆ ಜೋಡಿಸಿ ಅಧ್ಯಯನ ಮಾಡಿರುವುದು ಅವರ ವಿಶೇಷತೆ. ಸಿನಿಮಾ ಕುರಿತ ಅವರ ಪಿಎಚ್.ಡಿ. ಸಂಶೋಧನೆಯಿಂದ ಹಿಡಿದು ಚಿತ್ರಕಥೆ ಬರವಣಿಗೆ, ಚಲನಚಿತ್ರೋತ್ಸವಗಳ ಕ್ಯುರೇಷನ್ ಮತ್ತು ಸಿನಿಮಾ ಕುರಿತ ನಿರಂತರ ಸಂವಾದದವರೆಗೆ ಅವರ ಪಯಣ ವಿಸ್ತರಿಸಿದೆ. 'Reservation' ಚಿತ್ರದ ಚಿತ್ರಕಥೆಗಾರರಾಗಿ ರಾಷ್ಟ್ರೀಯ ಮಟ್ಟದ ಮನ್ನಣೆಯನ್ನೂ ಅವರು ಪಡೆದಿದ್ದಾರೆ.

ಕೆಂಚನೂರು ಅವರ ಸಿನಿಮಾ ನಂಟು ಪುಸ್ತಕ ಬರೆಯುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಅವರು 'Reservation' ಮತ್ತು 'Jinni' ಎಂಬ ಎರಡು ಕನ್ನಡ ಚಿತ್ರಗಳಿಗೆ ಚಿತ್ರಕಥೆ ಬರೆದಿದ್ದಾರೆ. 'Reservation' ಚಿತ್ರವು 2016ರ ರಾಷ್ಟ್ರೀಯ ಚಲನಚಿತ್ರ ಪ್ರಶಸ್ತಿಗಳಲ್ಲಿ



ರಜತ ಕಮಲ ಪಡೆದು, ಅತ್ಯುತ್ತಮ ಕನ್ನಡ ಚಿತ್ರವಾಗಿ ಆಯ್ಕೆಯಾಗಿತ್ತು.

ಅನಂತ್‌ನಾಗ್ ಅವರಿಗೆ ದಾದಾ ಸಾಹೇಬ್ ಫಾಲ್ಕೆ ಪ್ರಶಸ್ತಿ ದೊರೆತ ಸಂತೋಷದ ನಡುವೆಯೇ ಕನ್ನಡದ ಸಿನಿಮಾ ಚಿಂತಕನೊಬ್ಬನಿಗೆ ಸ್ವರ್ಣ ಕಮಲ ದೊರೆತಿರುವುದು ಕನ್ನಡಿಗರ ಪಾಲಿಗೆ ಮತ್ತೊಂದು ಹೆಮ್ಮೆಯ ಕ್ಷಣ. ಅವರಿಗೆ ದೆಹಲಿ ಕರ್ನಾಟಕ ಸಂಘದ ಹಾರ್ದಿಕ ಅಭಿನಂದನೆಗಳು ಅವರ ಸಿನಿಮಾ ಪಯಣ ಇನ್ನೂ ದೂರಕ್ಕೆ ಸಾಗಲಿ.❑

ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವದ ಸಂಭ್ರಮಾಚರಣೆ ಅಂಗವಾಗಿ ಸ್ಪರ್ಧೆಗಳು

ಜನಕಪುರಿ ಕನ್ನಡ ಕೂಟದ ಸುವರ್ಣ ಮಹೋತ್ಸವದ ಅಂಗವಾಗಿ ಕೂಟದ ಎಲ್ಲಾ ಸದಸ್ಯರಿಗಾಗಿ ಒಳಾಂಗಣ ಕ್ರೀಡೆಗಳು ಹಾಗೂ ಸಾಂಸ್ಕೃತಿಕ ಸ್ಪರ್ಧೆಗಳನ್ನು 23 ಆಗಸ್ಟ್ 2026 ಭಾನುವಾರ ಬೆಳಗ್ಗೆ 9 ರಿಂದ ಸಂಜೆ 4ರವರೆಗೆ ದೆಹಲಿ ಕರ್ನಾಟಕ ಸಂಘದ ವಿಚಾರ ಸಂಕಿರಣ ಕೊಠಡಿಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಸಾಂಸ್ಕೃತಿಕ ಸ್ಪರ್ಧೆಗಳಲ್ಲಿ ಭಕ್ತಿಗೀತೆ, ಜನಪದ ಗೀತೆ, ಆಶುಭಾಷಣ ಸ್ಪರ್ಧೆ, ನೆನಪಿನ ಆಟ ಸ್ಪರ್ಧೆಗಳು ಮಹಿಳೆಯರು ಹಾಗೂ ಪುರುಷರಿಗಾಗಿ ಹಮ್ಮಿಕೊಂಡರೆ, ರಂಗೋಲಿ ಸ್ಪರ್ಧೆ, ಬೆಂಕಿ ಇಲ್ಲದ ಅಡುಗೆ (fireless cooking) ಮಹಿಳೆಯರಿಗೆ ಮಾತ್ರ ಸೀಮಿತ ವಾಗಿತ್ತು. ಮಕ್ಕಳಿಗೆ ಚಿತ್ರಕಲಾ ಸ್ಪರ್ಧೆ, ಛದ್ಮ ವೇಷ ಸ್ಪರ್ಧೆ ಹಮ್ಮಿಕೊಳ್ಳಗಿತ್ತು. ಹಾಗೆಯೇ ಒಳಾಂಗಣ ಕ್ರೀಡಾ ಸ್ಪರ್ಧೆಯಲ್ಲಿ ಕೇರಂ, ಚೆಸ್ ಸ್ಪರ್ಧೆಗಳನ್ನು ಹಮ್ಮಿಕೊಳ್ಳಲಾಗಿತ್ತು.

ಈ ಒಳಾಂಗಣ ಸಾಂಸ್ಕೃತಿಕ ಹಾಗು ಒಳಾಂಗಣ ಕ್ರೀಡಾ ಸ್ಪರ್ಧೆಗಳಲ್ಲಿ ಜನಕಪುರಿ ಕನ್ನಡ ಕೂಟದ ಎಲ್ಲ ಸದಸ್ಯರುಗಳು ಬಹಳ ಉತ್ಸುಕತೆಯಿಂದ ಭಾಗವಹಿಸಿ ವಿಜೇತರಾದರು. ವಿಜೇತರಿಗೆ ಬಹುಮಾನಗಳನ್ನು 4 ಅಕ್ಟೋಬರ್ 2026ರಂದು ಜರುಗಲಿರುವ ಕೂಟದ ಸುವರ್ಣ ಮಹೋತ್ಸವದ ಆಚರಣೆಯ ದಿನದಂದು ಅಂದರೆ ಮಹಾ ಉತ್ಸವದಲ್ಲಿ ನೀಡಲಾಗುವುದು. ಈ ಎಲ್ಲಾ ಸ್ಪರ್ಧೆಗಳಿಗೆ ತೀರ್ಪುಗಾರರಾಗಿ ಶುಭಾ ದೇವಿಪ್ರಸಾದ್, ಲಕ್ಷ್ಮೀ ಕಿಣಿ, ಜ್ಯೋತಿ ಎಸ್. ಪೊದ್ದಾರ್, ಅರವಿಂದ್ ಬಿಜ್ಜೈ ಅವರನ್ನು ಆಯ್ಕೆ ಮಾಡಲಾಗಿತ್ತು.

ಕೂಟದ ಎಲ್ಲಾ ಸದಸ್ಯರು ಉತ್ಸಾಹದಿಂದ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿ ಈ ವಿಶೇಷ ದಿನವನ್ನು ಸಂತೋಷ ಸ್ನೇಹ ಕ್ರೀಡಾ ಸ್ಫೂರ್ತಿ ಹಾಗೂ ಸಾಂಸ್ಕೃತಿಕ ಸಂಭ್ರಮವನ್ನು ಆಚರಿಸುವಂತೆ ಆತ್ಮೀಯವಾಗಿ ಜನಕಪುರಿ ಕನ್ನಡ ಕೂಟವು ಹಮ್ಮಿಕೊಳ್ಳಲಾಯಿತು.

ಈ ಎಲ್ಲಾ ಕಾರ್ಯಕ್ರಮಗಳು ಜನಕಪುರಿ ಕೂಟದ ಅಧ್ಯಕ್ಷರಾದ ಡಾ. ಅಶೋಕ್ ಈಟಿ, ಪ್ರಧಾನ ಕಾರ್ಯದರ್ಶಿ ಡಾ. ಬಸವರಾಜ, ಉಪಾಧ್ಯಕ್ಷರಾದ ಡಾ. ಎಸ್.ಎಲ್. ಭಂಡಾರ್‌ಕರ ಹಾಗು ಸಮಿತಿಯ ಎಲ್ಲ ಸದಸ್ಯರುಗಳ ನೇತೃತ್ವದಲ್ಲಿ ಜರುಗಿತು. ನಮ್ಮ ಜನಕಪುರಿ ಕೂಟದ ಉತ್ಸಾಹದ ಚಿಲುಮೆ, ಹಸನ್ಮುಖಿ, ಸದಾ ಕಾರ್ಯ ತತ್ಪರತರಾದ ಶ್ರೀ ಕೃಷ್ಣರಾಜರವರು ಸಾಂಸ್ಕೃತಿಕ ಸ್ಪರ್ಧೆಯ ಉಸ್ತುವಾರಿ ವಹಿಸಿದರೆ, ಶ್ರೀ ಎಂ.ವಿ. ವೆಂಕಟೇಶ್ ಅವರು ಕ್ರೀಡಾ ಸ್ಪರ್ಧೆಯ ಜವಾಬ್ದಾರಿಯನ್ನು ಬಹಳ ಅಚ್ಚುಕಟ್ಟಾಗಿ, ಶಿಸ್ತಿನಿಂದ ಸಹಜವಾಗಿ ನಿರ್ವಹಿಸಿದರು.

ಆ ದಿನದ ಉಪಹಾರದ ಖರ್ಚು ವೆಚ್ಚವನ್ನು ನಮ್ಮ ಜನಕಪುರಿ ಕನ್ನಡ ಕೂಟದ ಹಾಗೂ ಜನಕಪುರಿ ಮಹಿಳಾ ಮಂಡಳಿಯ ಕಾರ್ಯದರ್ಶಿಗಳಾದ ಶ್ರೀಮತಿ ಪವಿತ್ರಾ ತಮ್ಮಣ್ಣರ್ ವಹಿಸಿಕೊಂಡಿದ್ದರು. ಕೂಟವು ಮಧ್ಯಾಹ್ನ ಪುಷ್ಕಳವಾದ ಭೋಜನವನ್ನು ನೀಡಿದರು. "ನಿಮ್ಮೆಲ್ಲರ ಸಾನಿಧ್ಯವೇ ನಮ್ಮ ಸಂಭ್ರಮಕ್ಕೆ ಮೆರುಗು" ಎಂಬ ಒಕ್ಕಣೆಯ ಮುಖಾಂತರ ಎಲ್ಲರನ್ನು ಸುವರ್ಣ ಮಹೋತ್ಸವಕ್ಕೆ ಆಹ್ವಾನಿಸಲಾಗಿತ್ತು. ಜನಕಪುರಿ ಕನ್ನಡ ಕೂಟ ಹಾಗೂ ಜನಕಪುರಿ ಮಹಿಳಾ ಮಂಡಳಿಯ ಎಲ್ಲ ಸದಸ್ಯರುಗಳು ಒಟ್ಟುಗೂಡಿ ಸಂಭ್ರಮಾಚರಣೆಯನ್ನು ಮಾಡಿದರು.❑

ಎಂ.ಎಸ್ ಲಾವಣ್ಯ ಬಸವರಾಜ

ರಾಷ್ಟ್ರ ರಾಜಧಾನಿ ನವದೆಹಲಿಯಲ್ಲಿ 80ನೇ ಸ್ವಾತಂತ್ರ್ಯ ದಿನಾಚರಣೆ–2026ರ ಅಂಗವಾಗಿ ಕೆಂಪುಕೋಟೆಯಲ್ಲಿ ಮಾನ್ಯ ಪ್ರಧಾನಮಂತ್ರಿಯವರ ಧ್ವಜಾರೋಹಣ ಕಾರ್ಯಕ್ರಮದಲ್ಲಿ ದೆಹಲಿ ಕನ್ನಡಿಗರು ಭಾಗವಹಿಸಿದ್ದರು. ಈ ಕಾರ್ಯಕ್ರಮದ ವ್ಯವಸ್ಥೆ ಹಾಗೂ ಜವಾಬ್ದಾರಿಯನ್ನು ಕರ್ನಾಟಕ ಭವನದ ವತಿಯಿಂದ ಶ್ರೀ ಮಲ್ಲನಗೌಡ ಬಿ.ಎಸ್. ಹಾಗೂ ಶ್ರೀ ಇ.ಎಂ. ಕೊಟ್ರೇಶ್ ಅವರು ವಹಿಸಿದ್ದರು.

ಅಭಿನಂದನೆ

ಲೋಕಸಭೆಯ ಜಂಟಿ ನಿರ್ದೇಶಕ ಚಂದ್ರಶೇಖರ್ ಎನ್.ಪಿ. ಅವರಿಗೆ ಡಾಕ್ಟರೇಟ್ ಪದವಿ



ಜೆಎನ್‌ಯು ಕನ್ನಡ ಪೀಠದ ನಿವೃತ್ತ ಪ್ರಾಧ್ಯಾಪಕರಾದ ಪ್ರೊ. ವಿಶ್ವನಾಥ ಅವರ ಮಾರ್ಗದರ್ಶನದಲ್ಲಿ ರಾಷ್ಟ್ರ ರಾಜಧಾನಿ ದೆಹಲಿ ಪ್ರದೇಶ ವ್ಯಾಪ್ತಿಯ ಕನ್ನಡ ಸಂಸ್ಕೃತಿ ಅಧ್ಯಯನ ಎಂಬ ವಿಷಯದ ಮೇಲೆ ಆಳವಾದ ಸಂಶೋಧನೆ ಕೈಗೊಂಡು ಮೈಸೂರು ವಿಶ್ವವಿದ್ಯಾನಿಲಯಕ್ಕೆ ಚಂದ್ರಶೇಖರ್ ಎನ್.ಪಿ. ಅವರು ಮಹಾಪ್ರಬಂಧವನ್ನು ಮಂಡಿಸಿ ಡಾಕ್ಟರೇಟ್ ಪದವಿ ಗಳಿಸಿದ್ದಾರೆ. ಪ್ರಸ್ತುತ ಚಂದ್ರಶೇಖರ್ ಅವರು ಪ್ರಜಾಪ್ರಭುತ್ವದ ದೇಗುಲ ಎಂದೇ ಕರೆಯಲ್ಪಡುವ ಭಾರತದ ಸಂಸತ್ತಿನ ಲೋಕಸಭೆಯಲ್ಲಿ ಜಂಟಿ ನಿರ್ದೇಶಕರಾಗಿದ್ದು, ಕಳೆದ ಸುಮಾರು ಎರಡು ದಶಕಗಳಿಂದ ದೆಹಲಿಯಲ್ಲಿ ವಾಸವಾಗಿದ್ದಾರೆ.

ದೆಹಲಿಯ ವಿವಿಧ ಸಂಘ ಸಂಸ್ಥೆಗಳೊಂದಿಗೆ ಅವಿನಾಭಾವ ಸಂಬಂಧ ಹೊಂದಿರುವ ಚಂದ್ರಶೇಖರ ಅವರು ಪ್ರಸ್ತುತ ಅಖಿಲ ಭಾರತ ಶರಣ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಅಧ್ಯಕ್ಷರಾಗಿರುವರು. ಕನ್ನಡ ಸಾಹಿತ್ಯ ಪರಿಷತ್ತಿನ ದೆಹಲಿ ಘಟಕದ ಗೌರವ ಕಾರ್ಯದರ್ಶಿ ಹಾಗೂ ದೆಹಲಿ ಕರ್ನಾಟಕ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರಾಗಿದ್ದರು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯಲ್ಲಿ 2019–22 ರ ಅವಧಿಯಲ್ಲಿ ಉಪಾಧ್ಯಕ್ಷರಾಗಿ ಕಾರ್ಯ ನಿರ್ವಹಿಸಿದ್ದಾರೆ.

ದೆಹಲಿ ಕರ್ನಾಟಕ ಸಂಘದ ಮುಖಪತ್ರಿಕೆ 'ಅಭಿಮತ' ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಮುಖಪತ್ರಿಕೆಯಾದ 'ಅಭಿವ್ಯಕ್ತ' ಮಾಸ ಪತ್ರಿಕೆಗಳ ಪ್ರಧಾನ ಸಂಪಾದಕರಾಗಿ ಸಾಹಿತ್ಯ ಸೇವೆ ಸಲ್ಲಿಸಿದ್ದಾರೆ.

ಚಂದ್ರಶೇಖರ್ ಅವರು ಐಎಎಸ್ ಮತ್ತು ಕೆಎಎಸ್ ಆಕಾಂಕ್ಷಿಗಳಿಗೆ ಪರೀಕ್ಷೆಗಳಿಗೆ ತರಬೇತಿ ನೀಡುವುದು ಮತ್ತು ಅಣಕು ಸಂದರ್ಶನ ಮೂಲಕ ವ್ಯಕ್ತಿತ್ವ ಪರೀಕ್ಷೆಗೆ ತಯಾರಾಗಲು ಅಭ್ಯರ್ಥಿಗಳಿಗೆ ಅಗತ್ಯ ಮಾರ್ಗದರ್ಶನ ನೀಡುತ್ತಾ ಬಂದಿರುತ್ತಾರೆ. ಅವರು ಸರ್ಕಾರದ ಉನ್ನತ ಸಂಸ್ಥೆಗಳಲ್ಲಿ ಭಾಷಾತಜ್ಞರಾಗಿಯೂ ಸೇವೆ ಸಲ್ಲಿಸಿದ್ದಾರೆ.

ಕನ್ನಡದಿಂದ ಇಂಗ್ಲಿಷ್‌ಗೆ ಹಾಗೆಯೇ ಇಂಗ್ಲಿಷ್‌ನಿಂದ ಕನ್ನಡಕ್ಕೆ ಮತ್ತು ಹಿಂದಿಯಿಂದ ಕನ್ನಡಕ್ಕೆ ಅನೇಕ ಕಥೆಗಳು ಮತ್ತು ಪುಸ್ತಕಗಳನ್ನು ಅನುವಾದಿಸಿದ್ದಾರೆ. ಅವುಗಳೆಂದರೆ 'ದೇಗುಲಶ್ರೀ (ಕನ್ನಡದಿಂದ ಇಂಗ್ಲಿಷ್), ಬಕಾಸುರ ದಿ ಕಿಂಗ್ ಆಫ್ ಕರಪ್ಶನ್ (ಇಂಗ್ಲಿಷ್‌ನಿಂದ ಕನ್ನಡ), ಮಂತ್ರ ಮಹರ್ಷಿ ಗುರೂಜಿ (ಕನ್ನಡದಿಂದ ಇಂಗ್ಲಿಷ್), ಮೊದಲಾದವು ಅವರ ಅನುವಾದಗಳು. ಇದಲ್ಲದೆ ಅವರು ಹಲವಾರು ಕಥೆಗಳನ್ನು ಅನುವಾದಿಸಿದ್ದಾರೆ 'ಅಪ್ಪನಿಗೊಂದು ಪತ್ರ' (ಹಿಂದಿಯಿಂದ ಕನ್ನಡ), 'ಅನುಪಮಾ ಸೌಂದರ್ಯ' (ಇಂಗ್ಲಿಷ್‌ನಿಂದ ಕನ್ನಡ) ಕೆಲವು ಪ್ರಮುಖ ಕಥೆಗಳು.

ಪ್ರಸ್ತುತ ಸಂಘದ ಅಭಿಮತ ಸಂಪಾದಕ ಮಂಡಳಿಯ ಸದಸ್ಯರಾಗಿ ಸೇವೆ ಸಲ್ಲಿಸುತ್ತಿರುವ ಚಂದ್ರಶೇಖರ್ ಅವರಿಗೆ ಸಮಸ್ತ ಕನ್ನಡಿಗರ ಮತ್ತು ದೆಹಲಿ ಕರ್ನಾಟಕ ಸಂಘದ ಪರವಾಗಿ ಅಭಿನಂದನೆಗಳು.❑

ದೆಹಲಿ ಕನ್ನಡ ಶಾಲೆಯ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ಅವರಿಗೆ ಮಿಲೇನಿಯಂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯ ಗರಿ

ಗ್ಲೋಬಲ್ ಫೌಂಡೇಶನ್ ಆಫ್ ಸ್ಕೌಟ್ಸ್ ಆ್ಯಂಡ್ ಗೈಡ್ಸ್, ಭಾರತ (ಜರ್ಮನಿಯ ವರ್ಲ್ಡ್ ಫೆಡರೇಷನ್ ಆಫ್ ಇಂಡಿಪೆಂಡೆಂಟ್ ಸ್ಕೌಟ್ಸ್ ಒಕ್ಕೂಟದ ಅರ್ಜಿದಾರ ಸದಸ್ಯ) ನೀಡುವ 2026ರ ಪರೇಶ್ ಪ್ರಸಾದ್ ಸಿಂಗ್ ಮಿಲೇನಿಯಂ ರಾಷ್ಟ್ರೀಯ ಶಿಕ್ಷಕ ಪ್ರಶಸ್ತಿಯನ್ನು ದೆಹಲಿ ಕನ್ನಡ ಹಿರಿಯ ಮಾಧ್ಯಮಿಕ ಶಾಲೆ, ಲೋಧಿ ಎಸ್ಟೇಟ್, ನವದೆಹಲಿ ಇಲ್ಲಿನ ಪ್ರಾಂಶುಪಾಲ ಪ್ರಶಾಂತ್ ಕುಮಾರ್ ಅವರಿಗೆ ಸೆಪ್ಟೆಂಬರ್ 27ರಂದು ಇಂಡಿಯನ್ ಇಂಟರ್‌ನ್ಯಾಷನಲ್ ಸೆಂಟರ್ ನವದೆಹಲಿಯಲ್ಲಿ ಪ್ರದಾನ ಮಾಡಲಾಯಿತು.

ಮುಖ್ಯ ಅತಿಥಿಯಾಗಿ ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳು ಹಾಗೂ ಕಾರ್ಪೋರೇಟ್ ವ್ಯವಹಾರಗಳ ಕೇಂದ್ರ ರಾಜ್ಯ ಸಚಿವ ಶ್ರೀ ಹರ್ಷ ಮಲ್ಹೋತ್ರಾ, ಗೌರವಾನ್ವಿತ ಅತಿಥಿಗಳಾಗಿ ಭಾರತ ಸರ್ಕಾರದ ಕೇಂದ್ರ ಆಡಳಿತಾತ್ಮಕ ನ್ಯಾಯ ಮಂಡಳಿಯ ಸದಸ್ಯ ಮಾನ್ಯ ಆರ್. ಎನ್. ಸಿಂಗ್, ಭಾರತ ಸರ್ಕಾರದ ಹಣಕಾಸು ಸಚಿವಾಲಯದ ಜಂಟಿ ಕಾರ್ಯದರ್ಶಿ ಡಾ. (ಕುಮಾರಿ) ಏಕ್ರೂಪ್ ಕೌರ್ ಐಎಎಸ್, ಭಾರತ ಸರ್ಕಾರದ ಐ.ಟಿ.ಐ ಸಂಸ್ಥೆಯ ಸಿ.ಎಂ.ಡಿ. ರಾಜೇಶ್ ರೈ, ಇಂಡಿಯಾ ಹ್ಯಾಬಿಟೇಟ್ ಸೆಂಟರ್ ನಿರ್ದೇಶಕ ಡಾ. ಕೆ.ಜಿ. ಸುರೇಶ್ ಭಾಗವಹಿಸಿದ್ದರು.

ಶ್ರೀ ಶಿವರಾಮ ಶೆಟ್ಟಿ ಮತ್ತು ಶ್ರೀಮತಿ ಗೀತಾ ಶೆಟ್ಟಿ ದಂಪತಿಗಳ ಸುಪುತ್ರರಾದ ಶ್ರೀಯುತ ಪ್ರಶಾಂತ್ ಕುಮಾರ್ ಅವರು ಮೂಲತಃ ದಕ್ಷಿಣ ಕನ್ನಡದ ಶಿಬರೂರಿನವರು. ಎಂ.ಎ., ಎಂ.ಫಿಲ್, ಎಂ.ಬಿ.ಎ., ಬಿ.ಇಡಿ., ಪಿಜಿಡಿಸಿಎ ಶೈಕ್ಷಣಿಕ ವಿದ್ಯಾರ್ಹತೆಯನ್ನು ಹೊಂದಿರುವ ಇವರು ಆಳ್ವಾಸ್ ಶಿಕ್ಷಣ ಸಂಸ್ಥೆಯಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ಕಾರ್ಯನಿರ್ವಹಿಸಿ, 2014ರಲ್ಲಿ ದೆಹಲಿ ಕನ್ನಡ ಶಾಲೆಯಲ್ಲಿ ರಾಜ್ಯಶಾಸ್ತ್ರ ಉಪನ್ಯಾಸಕರಾಗಿ ನೇಮಕಗೊಂಡರು. ನಂತರ 2019ರಲ್ಲಿ ಪ್ರಾಂಶುಪಾಲರಾಗಿ ನೇಮಕಗೊಂಡ ಬಳಿಕ ಶಾಲೆಯ ಶೈಕ್ಷಣಿಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಕ್ಷೇತ್ರಗಳ ಗುಣಮಟ್ಟದಲ್ಲಿ ಪರಿಣಾಮಕಾರಿ ಬದಲಾವಣೆಗಾಗಿ ಶ್ರಮಿಸಿ ವಲಯಮಟ್ಟದಲ್ಲಿ ಮಾದರಿ ಶಾಲೆಯನ್ನಾಗಿಸಿದ ಹೆಗ್ಗಳಿಕೆ ಇವರದ್ದು. 16 ವರ್ಷಗಳ ಬೋಧನಾ ಅನುಭವ ಹಾಗೂ 07 ವರ್ಷಗಳ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ ಅನುಭವವನ್ನು ಹೊಂದಿರುವ ಇವರ ವೃತ್ತಿಪರ ಅನುಭವ ಒಟ್ಟು 23 ವರ್ಷಗಳು. ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಆಡಳಿತ ಸಮಿತಿ ಹಾಗೂ ಶಾಲಾ ಶಿಕ್ಷಕ–ಶಿಕ್ಷಕೇತರ ವೃಂದದವರು ಹೃತ್ಪೂರ್ವಕ ಅಭಿನಂದನೆಯನ್ನು ಕೋರಿದ್ದಾರೆ. ❑

ಅರವಿಂದ ಬಿಜ್ಜೆ

Delhi Karnataka Sangha Abhimata
September 2026, Vol. No.36, Issue No. 12, Price Rs.1/-
RNI Regn. No. 53405/91, DL-SW-01/4016/22-24
Date of Publication : Sept 8th / 9th, Posting Date : 10th / 11th, Total Pages-20 Monthly-Language Kannada, POSTED AT RMS DELHI-110006
Printed & Published by Radhakrishna, General Secretary on behalf of Delhi Karnataka Sangha (R)Rao Tularam Marg, Sector-12, R.K.Puram, New Delhi-110022
Tel: 26109615, Printed at Saujanya Printing Press B-303, Okhla Industrial Area, Phase-I, New Delhi-110020, Tel: 40520770, Editor: Renuka Nidagundi